ಸಂಪುಟ 15
ಸಂಚಿಕೆ 18

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

9 ಮೇ 1993
ರೂ. 2.00

ಒಳಪುಟಗಳಲ್ಲಿ

ತ್ರಿಪುರಾ ಗೆಲುವು ಕರ್ನಾಟಕಕ್ಕೆ ಸ್ಫೂರ್ತಿ ನೀಡಲಿ

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ

ತ್ರಿಪುರಾದಂತೆ ಕರ್ನಾಟಕದಲ್ಲಿಯೂ ಕಾಂಗ್ರೆಸ್, ಬಿಜೆಪಿಗಳನ್ನು ಸೋಲಿಸಲು ಎಡಪಕ್ಷಗಳು, ಜನತಾದಳ, ಡಿಎಸ್‌ಎಸ್‌ಗಳು ಜಂಟಿಯಾಗಿ ಪ್ರಯತ್ನ ನಡೆಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ. ಈ ಹಿನ್ನೆಲೆಯಲ್ಲಿ ಜನತಾದಳ, ಸಮಾಜವಾದಿ ಜನತಾಪಕ್ಷದ ಐಕ್ಯತೆಗೆ ನಡೆದಿರುವ ಪ್ರಯತ್ನವನ್ನು ರಾಜ್ಯ ಸಮಿತಿಯು ಸ್ವಾಗತಿಸಿದೆ. ರಾಜ್ಯ ಸಮಿತಿಯು ತಾರೀಖು 26, 27 ನೇ ಏಪ್ರಿಲ್ 1993ರಂದು ಬೆಂಗಳೂರಿನಲ್ಲಿ ಸಭೆ ಸೇರಿತು. ಸಿ.ನಂಜುಂಡಪ್ಪನವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಮುಂದಿನ ಮೇ 19ರಂದು ಯಲಹಂಕ(ಮೀಸಲು) ವಿಧಾನಸಭಾ ಕ್ಷೇತ್ರಕ್ಕೆ ನಡೆಯುವ ಉಪ ಚುನಾವಣೆಯಲ್ಲಿ ಜನತಾದಳಕ್ಕೆ ಬೆಂಬಲ ಕೊಡಲು ರಾಜ್ಯ ಸಮಿತಿಯು ನಿರ್ಧರಿಸಿತು.

ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾದ ನಂತರ ರಾಜ್ಯದಲ್ಲಿಯ ರಾಜಕೀಯ ಪರಿಸ್ಥಿತಿ ಕುರಿತು ವಿಶ್ಲೇಷಿಸಿತು. ಹೆದ್ದಾರಿಯಲ್ಲಿ ರಾತ್ರಿ ದರೋಡೆ, ಲೂಟಿ ಮುಂದುವರಿಯುತ್ತಿರುವುದನ್ನು, ವರದಕ್ಷಿಣೆ, ಕೊಲೆ ತಡೆಯಿಲ್ಲದೆ ಮುಂದುವರಿಯುತ್ತಿರುವುದನ್ನು ವೀರಪ್ಪನ್ ತಂಡದಿಂದ ಪೋಲೀಸರ ಸಾಮೂಹಿಕ ಕೊಲೆ ನಡೆದಿರುವುದನ್ನು ಖಂಡಿಸಿ ಇವುಗಳಿಗೆಲ್ಲ ಮುಟ್ಟುಗೋಲು ಹಾಕಲು ಸರಕಾರ ತೀವ್ರ ಕ್ರಮ ಕೈಗೊಳ್ಳದೇಕೆಂದು ರಾಜ್ಯ ಸಮಿತಿ ಒತ್ತಾಯಿಸಿತು.

ವಿದ್ಯುಚ್ಛಕ್ತಿ ಕೊರತೆಯಿಂದಾಗಿ ರೈತ

ಪುಟ 8ಕ್ಕೆ

ನಂಜನಗೂಡು ಪೋಲೀಸ್ ಗೋಲೀಬಾರ್ ಖಂಡನೆ

ಮಾರ್ಚ್ ತಿಂಗಳ 25ರಂದು ದೇವಾಲಯ ಪ್ರವೇಶ ಮಾಡಿದರೆಂಬ ಕಾರಣದಿಂದ ಮೂರು ದಲಿತರನ್ನು ಅಮಾನುಷವಾಗಿ ಕೊಲೆಗೈದ ಹಿನ್ನೆಲೆಯಲ್ಲಿ ಮತ್ತು ದಲಿತ ಸಂಘರ್ಷ ಸಮಿತಿಯನ್ನು ನಿಷೇಧಿಸಬೇಕೆಂದು ಕಾಂಗ್ರೆಸ್ ಶಾಸಕರ ಹೇಳಿಕೆಗೆ ಪ್ರತಿಭಟನೆಯಾಗಿ ದಿನಾಂಕ 26-4-93ರಂದು ನಂಜನಗೂಡಿನಲ್ಲಿ ದಲಿತರು ನಡೆಸಿದ ಪ್ರತಿಭಟನೆಯ ಮೆರವಣಿಗೆಯ ಮೇಲೆ ಪೋಲೀಸರು ಗುಂಡು ಹಾರಿಸಿ 2 ಜನರ ಸಾವಿಗೆ ಕಾರಣರಾಗಿದ್ದಾರೆ.

ಈ ಹಿಂದೆ ಮೈಸೂರಿನಲ್ಲಿ ನಡೆದ ಕೋಮು ಗಲಭೆಗಳನ್ನು ತಹಬಂದಿಗೆ ತರುವಲ್ಲಿ ಪೋಲೀಸರು ಪಕ್ಷಪಾತ ಧೋರಣೆಯನ್ನು ಅನುಸರಿಸಿ ಕೋಮು ಶಕ್ತಿಗಳಿಗೆ ಪ್ರೋತ್ಸಾಹ ನೀಡುವರೆಂಬ ಆರೋಪವನ್ನು ಹೊತ್ತಿರುವ ಮೈಸೂರು ಜಿಲ್ಲೆಯ ಪೋಲೀಸರು, ಆ ದಿವಸ ಯಾವುದೇ ಮುಂಜಾಗ್ರತೆಯನ್ನು ತೆಗೆದುಕೊಳ್ಳದೆ, ಈಗ ನಂಜನಗೂಡಿನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ದಲಿತರ ಮೇಲೆ ಸಣ್ಣ ಪ್ರಚೋದನೆಯನ್ನು ಕಾರಣವಾಗಿಟ್ಟು ಗೋಲೀಬಾರ್ ಮಾಡಿ 2 ಜನರ ಸಾವಿಗೆ ಕಾರಣರಾಗಿರುವ ಹಲವಾರು ಜನರಿಗೆ ಗಾಯಗಳಾಗಿವೆ. ಪೋಲೀಸರ ಅನಗತ್ಯ ಕ್ರಮವನ್ನು ಸಿಪಿಐ(ಎಂ) ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ. ಇದರ ಬಗ್ಗೆ ಸಂಪೂರ್ಣವಾಗಿ ತನಿಖೆ ನಡೆಸಬೇಕೆಂದು ರಾಜ್ಯ ಸಮಿತಿಯು ಒತ್ತಾಯಿಸುತ್ತದೆ. ಜಾತಿಯ ಹೆಸರಿನಲ್ಲಿ ದುಡಿಯುವ ಜನತೆಯ ಐಕ್ಯತೆಯನ್ನು ಒಡೆಯುವ ಮುಖಂಡರ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ರಾಜ್ಯ ಸಮಿತಿಯು ವಿನಂತಿಸುತ್ತದೆ.

ದಲಿತರ ರಕ್ಷಕರೆಂದು ಅವರ ಮತಗಳನ್ನು ಹಲವು ದಶಕಗಳಿಂದ ಪಡೆದು ಅಧಿಕಾರಕ್ಕೆ ಬರುತ್ತಿರುವ ಕಾಂಗ್ರೆಸ್ ಪಕ್ಷದ ಶಾಸಕರು ಮತ್ತು ಮುಖಂಡರ ನೇರ ಹಸ್ತಕ್ಷೇಪವಿರುವುದು ಸ್ಪಷ್ಟವಾಗಿದ್ದು, ಕಾಂಗ್ರೆಸ್‌ನ ನಿಜ ಸ್ವರೂಪ ಬಯಲಾಗಿದ್ದು ಕಾಂಗ್ರೆಸ್‌ಗೆ ಬೆಂಬಲ ಕೊಡುವ ದಲಿತರ ಅವರ ನಿಲುವಿನ ಬಗ್ಗೆ ಪುನರಾಲೋಚನೆ ಮಾಡಬೇಕೆಂದು ರಾಜ್ಯ ಸಮಿತಿಯು ಮನವಿ ಮಾಡುತ್ತದೆ.

ಪೋಲೀಸರ ಗೋಲೀಬಾರಿನಲ್ಲಿ ಸತ್ತವರ ಕುಟುಂಬಗಳಿಗೆ ರಾಜ್ಯ ಸಮಿತಿಯು ತನ್ನ ಸಂತಾಪವನ್ನು ಸೂಚಿಸುತ್ತದೆ.

ಕೆಂಬಾವುಟ ಹಿಡಿದು ಮುನ್ನುಗ್ಗೋಣ

ಬೀಡಿ ಸಂಗಾತಿಗಳಿಗೆ ಕಾಂ. ವಿಮಲಾ ರಣದಿವೆ ಕರೆ

ಮಂಗಳೂರಿನ ಹೃದಯಕೇಂದ್ರದಿಂದ ಬೋಳಾರದವರೆಗೆ ಕೆಂಬಾವುಟಗಳು ಪಟಪಟನೆ ಹಾರುತ್ತಿತ್ತು. ಅಂದು ಬೋಳಾರ ಕೆಂಪು ಬಣ್ಣದಲ್ಲಿ ಅದ್ದಿ ಬೆಳಗುತ್ತಿತ್ತು. ಬೀಡಿ ಕಾರ್ಮಿಕರ 6ನೇ ರಾಜ್ಯ ಸಮ್ಮೇಳನಕ್ಕೆ ದಕ್ಷಿಣ ಕನ್ನಡ ಸಜ್ಜಾಗಿ ನಿಂತಿತ್ತು.

ದೇಶದ ಎಲ್ಲೆಡೆ ಬಿರುಸಿನಿಂದ ಮಾರಾಟವಾಗುತ್ತಿರುವ ಬೀಡಿಗಳ ಪೈಕಿ ಕರ್ನಾಟಕಕ್ಕೆ ಅಗ್ರಸ್ಥಾನ. ಮಾಲೀಕರು ಲಾಭದ ಗಳಿಕೆಯನ್ನು ದಿನೇ ದಿನೇ ಹೆಚ್ಚು ಮಾಡಿಕೊಳ್ಳುವಾಗಲೇ ಬೀಡಿ ಕಟ್ಟುವ ಕಾರ್ಮಿಕರು ದಿನೇ ದಿನೇ ಕತ್ತಲ ಅಂಚಿಗೆ ಜಾರುತ್ತಿದ್ದಾರೆ. ಈ ಅಂಧಕಾರದಿಂದ ಹೊರಬರಲು ಸಿಐಟಿಯು ಬೀಡಿ ಕಾರ್ಮಿಕರಿಗೆ ವಿಶ್ವಾಸ ತುಂಬುತ್ತಿರುವುದರಿಂದ ಮೂಡಿದ ಬೀಡಿ ಕಾರ್ಮಿಕರ ಒಕ್ಕೂಟ 6ನೇ ರಾಜ್ಯ ಸಮ್ಮೇಳನದ ಮೂಲಕ ಲಾಭದ ಲೆಕ್ಕಾಚಾರದಲ್ಲಿ ತಮ್ಮ ಹಕ್ಕನ್ನು ಮೊಟಕುಗೊಳಿಸುತ್ತಿರುವ ಮಧ್ಯವರ್ತಿಗಳಿಗೆ ಎಚ್ಚರಿಕೆ ನೀಡಲು ಸಜ್ಜಾಗಿ ಬಂದಿದ್ದರು.

ಪಕ್ಕದ ಕೇರಳದಲ್ಲಿ ಬೀಡಿ ಕಾರ್ಮಿಕರಿಗೆ 40 ರೂ. ಕನಿಷ್ಠ ಕೂಲಿ ಸಿಗುತ್ತಿರುವಾಗ ಕರ್ನಾಟಕದಲ್ಲಿ ಏಕೆ 23 ರೂ? ಅದರಲ್ಲೂ ಮಹಿಳೆಯರಿಗೆ ತಾರತಮ್ಯ ಏಕೆ ಎಂದು ಗುಡುಗಿದ ಸಿಐಟಿಯು ರಾಷ್ಟ್ರ ಉಪಾಧ್ಯಕ್ಷೆ ಕಾಂ.ವಿಮಲಾ ರಣದಿವೆ ಕೆಂಬಾವುಟವನ್ನು ಕೈಗೆತ್ತಿಕೊಂಡು ಹೋರಾಟಕ್ಕೆ ಧುಮುಕೋಣ ಬನ್ನಿ ಎಂದು ಅಸಂಖ್ಯಾತ ಸಂಖ್ಯೆಯಲ್ಲಿ ನೆರೆದಿದ್ದ ಬೀಡಿ ಕಾರ್ಮಿಕ ಪ್ರತಿನಿಧಿಗಳಿಗೆ ಕರೆ ನೀಡಿದರು.

ಬೀಡಿಯಿಂದ ಒಂದೇ ರೀತಿಯ ಸ್ವಾದ ಸಿಗುವುದಾದರೆ ಅಂಗಡಿಯಲ್ಲಿ ಎಲ್ಲಾ ಬೀಡಿಗೂ ಒಂದೇ ಬೆಲೆ ಮಾರುವುದಾದರೆ ಹೆಣ್ಣು ಗಂಡಿಗೆ ಕೂಲಿಯಲ್ಲೇಕೆ ತಾರತಮ್ಯ? ಬೀಡಿಗಳಲ್ಲಿ ಹೆಣ್ಣುಗಂಡೆಂಬ ಭೇದ ಹೇಗೆ ಇಲ್ಲವೋ ಅದೇ ರೀತಿ ಹಿಂದೂ-ಮುಸ್ಲಿಂ ಎಂಬ ಭೇದವೂ ಇಲ್ಲ ಎಂದ ವಿಮಲಾ ರಣದಿವೆ ಡಿ. 6ರ ಘಟನೆಯ ನಂತರ ಭಾರತ ತತ್ತರಿಸಿದೆ. ಕೋಮುವಾದಿಗಳ ಆಟ ನಡೆಯುವಂತೆ ಸಂಘಟಿತರಾಗೋಣ ಎಂದರು.

ಬೀಡಿ ಉದ್ಯಮದಲ್ಲಿ ಶೇ. 80 ರಿಂದ 85 ಮಂದಿ ಮಹಿಳೆಯರೇ ಇದ್ದಾರೆ. ಬೀಡಿ ಕಾರ್ಮಿಕರ ಸಮ್ಮೇಳನದಲ್ಲೂ ಮಹಿಳೆಯರು ಗಣನೀಯವಾಗಿ ಸೇರಿದ್ದರು. ವಿಮಲಾ ರಣದಿವೆ ಅವರು ಮಹಿಳೆಯರ ಸ್ಥಿತಿಗತಿಯ ಬಗ್ಗೆ, ಮಹಿಳೆಯರು ಸಂಘಟಿತರಾಗಬೇಕಾದ ಅಗತ್ಯದ ಬಗ್ಗೆಯೇ ತಮ್ಮ ಭಾಷಣದ ಬಹುಭಾಗವನ್ನು ಮೀಸಲಾಗಿಟ್ಟರು.

ಉತ್ತರ ಪ್ರದೇಶದ ಕಲ್ಯಾಣ್‌ಸಿಂಗ್ ಸರಕಾರ ಬದಲಾಯಿಸಿರುವ ಪಠ್ಯಪುಸ್ತಕಗಳು ಮಹಿಳೆಯರು ಮನೆಗೆ ಹಿಂದಿರುಗುವಂತೆ ಕರೆ ನೀಡಿದೆ. ಕೇಂದ್ರದ ಆರ್ಥಿಕ ನೀತಿಯಿಂದ ಸುಮಾರು 10 ಲಕ್ಷ ಮಂದಿ ಕಾರ್ಮಿಕರು ಬೀದಿಗೆ ಬೀಳಲಿದ್ದಾರೆ. ಇವರಲ್ಲಿ ಮಹಿಳೆಯರೇ ಹೆಚ್ಚು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅಸಂಘಟಿತ ಕಾರ್ಮಿಕರ

ಪುಟ 8ಕ್ಕೆ

ಹೊಸ ಆರ್ಥಿಕ ನೀತಿ ಡಂಕೆಲ್ ಪ್ರಸ್ತಾಪಗಳನ್ನು ವಿರೋಧಿಸಿ

ರೈತರಿಗೆ ಕಿಸಾನ್ ಸಭಾ ಕರೆ

ಏಪ್ರಿಲ್ 19 ರಂದು ದಿಲ್ಲಿಯಲ್ಲಿ ಸಭೆ ಸೇರಿದ್ದ ಅಖಿಲ ಭಾರತ ಕಿಸಾನ್ ಸಭಾದ ಕೇಂದ್ರ ಮಂಡಳಿ(ಸಿಕೆಪಿ) ಮೇ 24ರಿಂದ 31ರವರೆಗೆ ಒಂದು ವಾರ ದೇಶದಾದ್ಯಂತ ರ್‍ಯಾಲಿ, ಮತ ಪ್ರದರ್ಶನ, ಧರಣಿ ಇತ್ಯಾದಿಗಳ ಮೂಲಕ ಆರ್ಥಿಕ ನೀತಿಗಳ ಪ್ರತಿಕೂಲ ಪರಿಣಾಮಗಳು, ಡಂಕೆಲ್ ಕರಡು ಹಾಗೂ ಹೊಸ ಕೃಷಿ ನೀತಿಯ ಕೊರತೆಗಳು ಹಾಗೂ ಅಪಾಯಗಳ ವಿರುದ್ಧ ಪ್ರತಿಭಟನಾ ವಾರ ಆಚರಿಸಬೇಕೆಂದು ತನ್ನ ಎಲ್ಲಾ ಘಟಕಗಳಿಗೆ ಹಾಗೂ ರೈತಾಪಿ ವರ್ಗಕ್ಕೆ ಕರೆ ನೀಡಿದೆ. ಕಾಂ.ಎನ್. ಶಂಕರಯ್ಯ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಹೊಸ ಆರ್ಥಿಕ ನೀತಿ ಗಳ ಪರಿಣಾಮ ರೈತರ ಅರಿವಿಗೆ ಆಗಲೇ ಬಂದಿದೆ. ಎಲ್ಲಾ ಕೃಷಿ ಸಾಧನಗಳ ಬೆಲೆಗಳು ಏರಿವೆ. ವಿದ್ಯುತ್, ನೀರಾವರಿ ದರಗಳನ್ನು ಏರಿಸಲು ಕೇಂದ್ರ ಸರಕಾರ ರಾಜ್ಯ ಸರಕಾರಗಳ ಮೇಲೆ ಒತ್ತಡ ತರುತ್ತಿದೆ. ಇದು ಮತ್ತೆ ನೀರಾವರಿ ಖರ್ಚು ಹಾಗೂ ವಿದ್ಯುತ್ ಖರ್ಚು ಬಹುಪಾಲು ರೈತಾಪಿ ಜನಗಳಿಗೆ ನಿಲುಕದಂತೆ ಮಾಡಲಿದೆ. ಬೆಂಬಲ ಬೆಲೆ ಹೆಚ್ಚಳ ಹೆಚ್ಚಿನ ಖರ್ಚನ್ನು ಸರಿತೂಗಿಸಬಲ್ಲದಷ್ಟೇ. ಅದರೊಂದಿಗೇ ಅದು ಜನಸಾಮಾನ್ಯರ ಮೇಲೆ ಬೆಲೆಯೇರಿಕೆಯ ಹೊರೆ ಹಾಕುತ್ತದೆ. ಕೇಂದ್ರ ಸರಕಾರ ಮೆಲ್ಲ-ಮೆಲ್ಲನೇ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕಳಚಿ ಹಾಕುತ್ತಿದೆ.

ಡಂಕೆಲ್ ಕರಡಿನ ಪ್ರಸ್ತಾಪಗಳಂತೂ ಭಾರತದ ಕೃಷಿಗೆ ಮತ್ತಷ್ಟು ವಿನಾಶಕಾರಿ. ಭಾರತದ ಮಾರುಕಟ್ಟೆಯನ್ನು ಬಹುರಾಷ್ಟ್ರೀಯ ಕಂಪೆನಿಗಳ ಕೊಳ್ಳೆಗೆ ತೆರೆದಿಡಿ ಎನ್ನುತ್ತವೆ ಈ ಪ್ರಸ್ತಾಪಗಳು. ಭಾರತದ ಕೃಷಿ ರಂಗದಲ್ಲಿ ಈ ವಿದೇಶೀ ಕಂಪೆನಿಗಳು ಕಾರ್ಯನಿರ್ವಹಿಸಲಾರಂಭಿಸಿದರೆ ನಮ್ಮ ಬೆಲೆ ವಿಧಾನವೇ ಬದಲಾಗುತ್ತದೆ. ರಫ್ತು ಮಾರುಕಟ್ಟೆಗಳ ಅಗತ್ಯವೇ ಆಗ ಮುಖ್ಯವಾಗುತ್ತವೆ. ಇದರಿಂದ ಪ್ರಯೋಜನವಾಗುವುದು ಮೇಲ್ವರ್ಗದ ಕೆಲವು ರೈತರಿಗೆ ಮಾತ್ರ. ಹೀಗೆ ಮಾಡುವಾಗ ಬಹುಪಾಲು ಜನರ ಆಹಾರ ಮತ್ತಿತರ ಕನಿಷ್ಠ ಅಗತ್ಯಗಳನ್ನು ನ್ಯಾಯ ಬೆಲೆಯಲ್ಲಿ ಪೂರೈಸುವ ಕೆಲಸ ಮೂಲೆಗುಂಪಾಗುತ್ತದೆ ಎಂದು ಕೇಂದ್ರ ಕಿಸಾನ್ ಮಂಡಳಿ ಹೇಳಿದೆ.

ನರಸಿಂಹಂ ಸಮಿತಿಯ ಶಿಫಾರಸುಗಳು - ಗ್ರಾಮೀಣ ಬ್ಯಾಂಕುಗಳ ವಾಣಿಜ್ಯ ರೀತಿಯಲ್ಲಿ ಕೇವಲ ಲಾಭದ ಉದ್ದೇಶದಿಂದ ಕೆಲಸ ಮಾಡಬೇಕು, ಕೃಷಿಕರಿಗೆ ಆದ್ಯತೆಯ ಕಮ್ಮಿ ಬಡ್ಡಿ ದರಗಳನ್ನು ಬಿಟ್ಟು ಮಾರುಕಟ್ಟೆ ದರಗಳಲ್ಲೇ ಸಾಲ ಕೊಡಬೇಕು, ಆದ್ಯತೆಯ ವಲಯಕ್ಕೆ ಸಾಲ ಶೇ. 10 ಮೀರಬಾರದು ಎಂಬಿತ್ಯಾದಿ ಶಿಫಾರಸುಗಳು ಕೃಷಿಕರಿಗೆ ಸಾಲ ಪೂರೈಕೆಯ ಮೇಲೆ ವಿಪರೀತ ಪರಿಣಾಮಬೀರುತ್ತವೆ. ಇದರಿಂದ ಹಲವಾರು ಗ್ರಾಮೀಣ ಬ್ಯಾಂಕ್ ಶಾಖೆಗಳು ಮುಚ್ಚುವ ಭಯವಿದೆ ಎಂದು ಸಿ.ಕೆ.ಸಿ. ಹೇಳಿದೆ.

ಸರಕಾರದ ಕರಡು ಕೃಷಿ ನೀತಿ ಕೃಷಿಯಲ್ಲಿ ಬೆಳವಣಿಗೆ ಮತ್ತು ಅಭಿವೃದ್ಧಿ ಸಾಧಿಸಲು ಭೂ ಸುಧಾರಣೆಯ ಮಹತ್ವವನ್ನೇ ನಿರಾಕರಿಸುತ್ತದೆ. ಕೃಷಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ, ರೈತಾಪಿ ವರ್ಗ ದಿವಾಳಿಯಾಗುತ್ತಿರುವ ಬಗ್ಗೆ, ಪ್ರಾದೇಶಿಕ ಅಸಮಾನತೆ, ರೈತಾಪಿ ಜನಗಳ ಅಸಮಾನತೆ ಹೆಚ್ಚುತ್ತಿರುವ ಬಗ್ಗೆ ಈ ಕರಡು ನೀತಿ ಮೌನವಾಗಿದೆ. ಆದ್ದರಿಂದ ಈ ಸಮಸ್ಯೆಗಳ ಪರಿಹಾರದ ಮಾತೇ ಇಲ್ಲ. ಕೇವಲ ಗ್ರಾಮೀಣ ಪ್ರದೇಶಗಳ ಮೇಲ್ವರ್ಗದ ವಿಭಾಗಗಳ ಬೇಡಿಕೆಗಳ ಬಗೆಗಷ್ಟೇ ಚರ್ಚಿಸುತ್ತದೆ. ಇದು ಕೃಷಿಯ ಅಥವಾ ಗ್ರಾಮೀಣ

ಪುಟ 8ಕ್ಕೆ



ಧ್ವಜವಂದನೆ ಸಲ್ಲಿಸಿ ನೆರೆದವರನ್ನು ಉದ್ದೇಶಿಸಿ ಮಾತನಾಡುತ್ತಿರುವ ಕಾಂ. ಸೂರ್ಯನಾರಾಯಣರಾವ್ ನೆರೆದ ಬೀಡಿ ಕಾರ್ಮಿಕ ಮಹಿಳೆಯರು ಮತ್ತಿತರರು.

ನಡೆ ಮುಂದೆ ಭಾರತ್ ಬಂದ್‌ಗೆ ನುಗ್ಗಿ ನಡೆ ಮುಂದೆ

ಏಪ್ರಿಲ್ 15ರಂದು ನವದೆಹಲಿಯಲ್ಲಿ ನಡೆದ ವಿವಿಧ ಕಾರ್ಮಿಕ ಸಂಘಗಳು ಹಾಗೂ ಸಾಮೂಹಿಕ ಸಂಘಟನೆಗಳ ಸರಕಾರದ ಆರ್ಥಿಕ ನೀತಿಗಳು ಹಾಗೂ ಕೋಮುವಾದೀ-ವಿರೋಧಿ ಬೃಹತ್ ಸಮಾವೇಶ ಒಂದು ಮಹತ್ವದ ಘಟನೆ. ದೇಶದ ಪ್ರಮುಖ ಕಾರ್ಮಿಕ ಸಂಘಗಳು, ರೈತ, ಕೃಷಿ ಕೂಲಿಕಾರ, ಯುವಜನ, ವಿದ್ಯಾರ್ಥಿ ಹಾಗೂ ಮಹಿಳಾ ಸಂಘಟನೆಗಳ ಈ ಐಕ್ಯವೇದಿಕೆ ರೂಪುಗೊಳ್ಳುತ್ತಿರುವುದಕ್ಕೆ ಸಿಪಿಐ(ಎಂ) ಕೇಂದ್ರ ಸಮಿತಿ ಬಹಳ ಮಹತ್ವ ನೀಡುತ್ತದೆ ಎಂದು ಏಪ್ರಿಲ್ 16ರಿಂದ 18ರವರೆಗೆ ದೆಹಲಿಯಲ್ಲಿ ನಡೆದ ಕೇಂದ್ರ ಸಮಿತಿಯ ಸಭೆ ಅಭಿಪ್ರಾಯಪಟ್ಟಿದೆ.

ಸಭೆಯ ನಂತರ ಹೊರಡಿಸಿದ ಪತ್ರಿಕಾ ಹೇಳಿಕೆ 5000 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮಾವೇಶ ಅದು ಜೂನ್ 1993ರಿಂದ ಆರಂಭವಾಗುವಂತೆ ರೂಪಿಸಿರುವ ಕಾರ್ಯಾಚರಣೆಯ ಕಾರ್ಯಕ್ರಮಕ್ಕೆ ತನ್ನ ಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಸಾಧ್ಯವಾದಷ್ಟು ವ್ಯಾಪಕವಾದ ರೀತಿಯಲ್ಲಿ ಎಲ್ಲಾ ಜನವಿಭಾಗಗಳನ್ನು ಈ ಕಾರ್ಯಾಚರಣೆಗಳಲ್ಲಿ ಅಣಿನೆರಸಿ ಈ ಆಂದೋಲನ ಯಶಸ್ವಿಯಾಗಿ ನಡೆಯುವಂತೆ, ನರಸಿಂಹ ರಾವ್ ಸರಕಾರದ ಜನ-ವಿರೋಧಿ ನೀತಿಗಳಿಗೆ ಬಲವಾದ ಪ್ರತಿರೋಧ ನೀಡುವಂತೆ ಮುತುವರ್ಜಿ ವಹಿಸಬೇಕು ಎಂದು ಕೇಂದ್ರ ಸಮಿತಿ ಪಕ್ಷದ ಎಲ್ಲಾ ಘಟಕಗಳಿಗೆ ಸಾಮೂಹಿಕ ಸಂಘಟನೆಗಳಿಗೆ ಕರೆ ನೀಡಿದೆ.

ಏಪ್ರಿಲ್ 14ರ ಬಿಜೆಪಿ ಬೊಬ್ಬಾಟಕ್ಕೆ ಕಾರಣ ಕೆಂಪು ಕೋಟೆ ರ‍್ಯಾಲಿಯ ಯಶಸ್ಸಿನ ಬಗ್ಗೆ ಜಾತ್ಯಾತೀತ ಶಕ್ತಿಗಳನ್ನು ಅಭಿನಂದಿಸುತ್ತಾ ಬಿಜೆಪಿ ನೇತೃತ್ವ ಕೋಮುವಾದದ ವಿರುದ್ಧ ಹೋರಾಟ ಮುಂದುವರಿಸಬೇಕಾದ ಅಗತ್ಯದ ಬಗ್ಗೆ ಒತ್ತಿ ಹೇಳುತ್ತಾ ಕೇಂದ್ರ ಸಮಿತಿಯು ಈ ಹೇಳಿಕೆ ತನ್ನ ಕಲ್ಕತ್ತಾ ಅಧಿವೇಶನದಲ್ಲಿ ಬಿಜೆಪಿ ಎಡ-ವಿರೋಧಿ, ಸಿಪಿಐ(ಎಂ) ವಿರೋಧಿ ಬೊಬ್ಬೆಗೆ ಕಾರಣ ರಾಷ್ಟ್ರೀಯ ಐಕ್ಯತೆ ರಕ್ಷಣೆಯಲ್ಲಿ ಎಡಪಕ್ಷಗಳ ನಿರಂತರ ದೃಢನಿಲುವು ಹಾಗೂ ಪಶ್ಚಿಮ ಬಂಗಾಳದಲ್ಲಿ ಕೋಮು ಸೌಹಾರ್ದವನ್ನು ನಿರಂತರವಾಗಿ ಕಾಪಾಡಿಕೊಂಡು ಬಂದದ್ದು ಎಂದಿದೆ. ತ್ರಿಪುರಾದಲ್ಲಿ ಬಿಜೆಪಿ ಎಡ-ವಿರೋಧಿ ವೇದಿಕೆಯನ್ನು ಪ್ರಯತ್ನಿಸಿತು. ಆದರೆ ಜನ ಅದನ್ನು ತುಚ್ಛೀಕರಿಸಿ ತಿರಸ್ಕರಿಸಿದ್ದಾರೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ. ಸಂವಿಧಾನದ 356ನೇ ಕಲಮಿಗೆ ಸಂಬಂಧಪಟ್ಟಂತೆ ಬಿಜೆಪಿಯ ಗೋಸುಂಬೆತನ, ರಾವ್ ಸರಕಾರದ ಆರ್ಥಿಕ ನೀತಿಗಳಿಗೆ ಸಂಬಂಧಪಟ್ಟಂತೆ ಅದರ ಸಮಯ ಸಾಧಕ ನಿಲುವು ಬಯಲಿಗೆ ಬಂದಿದೆ. ರಾವ್ ಸರಕಾರದ ತಗ್ಗಿ-ಬಗ್ಗಿ ನಡೆಯುವ ನಿಲುವಿನಿಂದಾಗಿ ಕೋಮುವಾದ- ವಿರೋಧಿ ಹೋರಾಟದಲ್ಲಿ ಕಾಂಗ್ರೆಸ್(ಐ) ಇನ್ನೂ ಅಸ್ಪಷ್ಟ ಸ್ಥಿತಿಯಲ್ಲಿದೆ. ಜಾತ್ಯಾತೀತ ವಿರೋಧ ಪಕ್ಷಗಳಲ್ಲೂ ಇನ್ನೂ ಕೆಲವು ವ್ಯಕ್ತಿಗಳು ಗುಂಪುಗಳು ಸಮಯದ ಅಗತ್ಯವನ್ನು ಮನಗಂಡು ಕೋಮುವಾದದ ಬೆದರಿಕೆಯನ್ನು ಎದುರಿಸುವ ಮಹತ್ವಪೂರ್ಣ ಹೋರಾಟದಲ್ಲಿ ಒಂದಾಗಲು ಹಿಂಜರಿಸುತ್ತಿವೆ ಎಂದು ಕೇಂದ್ರ ಸಮಿತಿ ಖೇದ ವ್ಯಕ್ತಪಡಿಸಿದೆ.

ತ್ರಿಪುರಾದ ಅಮೋಘ ವಿಜಯಕ್ಕೆ ಅಲ್ಲಿಯ ಜನತೆಯನ್ನು ಸಿಪಿಐ(ಎಂ) ರಾಜ್ಯ ಘಟಕವನ್ನು ಹಾಗೂ ಎಡರಂಗವನ್ನು ಹಾರ್ದಿಕವಾಗಿ ಅಭಿನಂದಿಸಿದಾಗ ಕೇಂದ್ರ ಸಮಿತಿ ಇದು ಬುಡಕಟ್ಟು ಹಾಗೂ ಇತರ ಜನಗಳ ಐಕ್ಯತೆಗಾಗಿ, ಪ್ರಜಾಪ್ರಭುತ್ವ ಮರುಸ್ಥಾಪನೆಗಾಗಿ ಸಿಪಿಐ(ಎಂ) ನಡೆಸಿದ ನಿರಂತರ ಹೋರಾಟದ ಫಲ, ಕಾಂಗ್ರೆಸ್(ಐ) ಸರಕಾರದ ಜನ-ವಿರೋಧಿ ಆರ್ಥಿಕ ನೀತಿಗಳನ್ನು ಕೋಮುವಾದಿ, ಛಿದ್ರಕಾರಿ ಶಕ್ತಿಗಳ ನಿಲುವನ್ನು ಜನ ಸಂಪೂರ್ಣ ತಿರಸ್ಕರಿಸಿದುದರ ಫಲ ಎಂದಿದೆ. ಎಡರಂಗ ಜನಗಳಿಗೆ ನೀಡಿದ ವಚನಗಳನ್ನು ಪಾಲಿಸುವತ್ತ ರಾಜ್ಯದಲ್ಲಿ ಶಾಂತಿ, ಪ್ರಜಾಪ್ರಭುತ್ವವನ್ನು ಮತ್ತೆ ನೆಲೆಸುವತ್ತ ತಕ್ಷಣ ಗಮನ ಹರಿಸುತ್ತದೆ ಎಂದು ಕೇಂದ್ರ ಸಮಿತಿ ಆಶಿಸಿದೆ.

ಝಾರ್ಖಂಡ್

ಝಾರ್ಖಂಡ್ ಸಮಸ್ಯೆ ಇತ್ಯರ್ಥಕ್ಕೆ ಸ್ವಾಯತ್ತ ಪ್ರಾದೇಶಿಕ ಮಂಡಳಿ ರಚನೆಯ ಪ್ರಸ್ತಾಪಗಳನ್ನು ಸ್ವಾಗತಿಸುತ್ತಾ ಕೇಂದ್ರ ಸಮಿತಿ ದಕ್ಷಿಣ ಬಿಹಾರದ 16 ಜಿಲ್ಲೆಗಳನ್ನು ಆವರಿಸುವ ಈ ಮಂಡಳಿ ಬುಡಕಟ್ಟು ಜನರ ಆಕಾಂಕ್ಷೆಗಳನ್ನು ಈಡೇರಿಸುವ ಒಂದು ಗಮನಾರ್ಹ ಹೆಜ್ಜೆಯಾಗಬಲ್ಲದು. ಕೇಂದ್ರ ಹಾಗೂ ಬಿಹಾರ್ ಸರಕಾರ ತಕ್ಷಣ ಈ ಪ್ರಸ್ತಾಪಕ್ಕೆ ನಿರ್ದಿಷ್ಟ ರೂಪ ನೀಡಬೇಕು ಎಂದು ಹೇಳಿದೆ.

ಕಾಶ್ಮೀರ

ಕಾಶ್ಮೀರದ ಗಂಭೀರ ಪರಿಸ್ಥಿತಿಯಲ್ಲಿ ತಕ್ಷಣ ಕೇಂದ್ರ ಸರಕಾರ ಒಂದು ರಾಜಕೀಯ ಪರಿಹಾರದತ್ತ ಮುತುವರ್ಜಿ ವಹಿಸಬೇಕು. 1953ರಿಂದ ಕಾಶ್ಮೀರಿಗಳ ಹಕ್ಕುಗಳ ಹ್ರಾಸವಾಗುತ್ತಾ ಬಂದಿದೆ. ಗರಿಷ್ಠ ಸ್ವಾಯತ್ತೆ ನೀಡಿ ಅವನ್ನೆಲ್ಲಾ ಮತ್ತೆ ಕೊಡಬೇಕು ಎಂದು ಕೇಂದ್ರ ಸಮಿತಿ ಒತ್ತಾಯಿಸಿದೆ. ಕೇಂದ್ರ ಸರಕಾರಕ್ಕೆ ಈ ನಿಟ್ಟಿನಲ್ಲಿ ರಾಜಕೀಯ ಮಾರ್ಗ ಅನುಸರಿಸುವುದರ ಅಗತ್ಯ ಇನ್ನೂ ಅರಿವಿಗೆ ಬಂದಂತಿಲ್ಲ ಎಂದು ಕೇಂದ್ರ ಸಮಿತಿ ಖೇದ ವ್ಯಕ್ತಪಡಿಸಿದೆ.

ಅಸ್ಸಾಂ

ಸೈಕಿಯಾ ಸರಕಾರ ಪ್ರಜಾಪ್ರಭುತ್ವ-ವಿರೋಧಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ವಿರೋಧ ಪಕ್ಷಗಳು ಸಾರ್ವಜನಿಕ ಸಭೆಗಳನ್ನು, ಮೆರವಣಿಗೆಗಳನ್ನು ನಡೆಸುವ ಸಾಮಾನ್ಯ ಹಕ್ಕನ್ನು ಚಲಾಯಿಸುವಾಗಲೂ ಕಾಂಗ್ರೆ ರಾಜ್ಯ ಸರಕಾರ ಸೆಕ್ಷನ್ 144, ಟಾಡಾ ಇತ್ಯಾದಿ ಬಳಸುತ್ತಿದೆ. ಈ ಎಲ್ಲಾ ದಮನಕಾರೀ ಕ್ರಮಗಳನ್ನು ಹಿಂತೆಗೆದುಕೊಂಡು ಎಲ್ಲಾ ರಾಜಕೀಯ ಪಕ್ಷಗಳ ಪ್ರಜಾಪ್ರಭುತ್ವ ಹಕ್ಕುಗಳ ಮರು ಸ್ಥಾಪನೆಯಾಗಬೇಕು ಎಂದು ಕೇಂದ್ರ ಸಮಿತಿ ಆಗ್ರಹಪಡಿಸಿದೆ.

"ರೈತರಂಗದಲ್ಲಿ ಪಕ್ಷದ ಕೆಲಸ"

ಕೇಂದ್ರ ಸಮಿತಿಯು ಪ್ರಸ್ತುತ ಕೃಷಿ ಪರಿಸ್ಥಿತಿಯನ್ನು ಚರ್ಚಿಸಿತು. ಹೊಸ ಆರ್ಥಿಕ ನೀತಿಗಳು ರೈತಾಪಿ ಜನಗಳ ಸಂಕಷ್ಟಗಳನ್ನು ಇಮ್ಮಡಿಗೊಳಿಸಿದೆ. ಬಂಪರ್ ಬೆಳೆ ಬಂದರೂ ಬುಡಕಟ್ಟು ಪ್ರದೇಶಗಳಲ್ಲಿ ಹಾಗೂ ಇತರ ಬರಪೀಡಿತ ಪ್ರದೇಶಗಳಲ್ಲಿ ಹಸಿವಿನಿಂದ ಸಾವಿನ ಸುದ್ದಿಗಳು ಬರುತ್ತಲೇ ಇವೆ. ಗ್ರಾಮೀಣ ಬಡತನ ನಿವಾರಣಾ ಯೋಜನೆಗಳಲ್ಲಿನ ಕಡಿತ, ರೇಶನ್ ವ್ಯವಸ್ಥೆಯನ್ನು ಮುಂದುಹಾಕುವ ಪ್ರಯತ್ನ ಇವೆಲ್ಲವರಿಂದಾಗಿ ಕೃಷಿ ಕೂಲಿಗಾರರ ಸ್ಥಿತಿ ಹದಗೆಟ್ಟಿದೆ. ಹೊಸ ಕೃಷಿ ನೀತಿ ಭೂ ಸುಧಾರಣೆಯ ಬಗ್ಗೆ ಕೃಷಿ ಕೂಲಿಕಾರರ ಹಕ್ಕುಗಳ ರಕ್ಷಣೆಗೆ ಒಂದು ಕೇಂದ್ರೀಯ ಶಾಸನ ರೂಪಿಸುವ ಬಗ್ಗೆ ಮೌನವಾಗಿದೆ. ಭೂ ಮಾಲಕರನ್ನು, ಗ್ರಾಮೀಣ ಶ್ರೀಮಂತರನ್ನು ಓಲೈಸುವ ನೀತಿಗಳು ಸರಕಾರದ್ದು.

ರೈತರಂಗದಲ್ಲಿ ಕಳೆದ ಒಂದು ದಶಕದಲ್ಲಿ ನಡೆದ ಕೆಲಸವನ್ನು ಕೇಂದ್ರ ಸಮಿತಿ ಪರಾಮರ್ಶಿಸಿತು. ರೈತರು ಹಾಗೂ ಕೃಷಿ ಕೂಲಿಕಾರರ ಹೋರಾಟಗಳನ್ನು ಸಂಘಟಿಸುವಲ್ಲಿ ಬೆಳೆಸುವಲ್ಲಿ ಪಕ್ಷದ ಪ್ರಮುಖ ಕರ್ತವ್ಯಗಳನ್ನು ರೂಪೀಕರಿಸಲಾಯಿತು. ರೈತ, ಕೃಷಿ ಕೂಲಿಕಾರ ಸಂಘಗಳನ್ನು ಬಲಪಡಿಸಲು ಸಂಘಟನಾ ಕ್ರಮಗಳ ಬಗ್ಗೆಯೂ ಸಭೆ ಚರ್ಚಿಸಿತು. ರೈತ-ಕೃಷಿ ಕೂಲಿಕಾರರ ರಂಗಗಳಲ್ಲಿ ಪಕ್ಷದ ಕರ್ತವ್ಯಗಳ ರೂಪರೇಷೆ ನೀಡುವ ದಸ್ತಾವೇಜನ್ನು ಕೇಂದ್ರ ಸಮಿತಿ ಅಂಗೀಕರಿಸಿತು. ಗ್ರಾಮೀಣ ಪ್ರದೇಶಗಳಲ್ಲಿ ಪಕ್ಷದ ಕೆಲಸ ಯಾವ ದಿಕ್ಕಿನಲ್ಲಿ ಸಾಗಬೇಕು ಎನ್ನುವುದಕ್ಕೆ ಇದು ಆಧಾರವಾಗಲಿದೆ.

ತ್ರಿಪುರಾ ಚುನಾವಣೆ

ಎಡಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಗೆ ಹೊಸಬಲ

ಇ.ಎಂ.ಎಸ್.

ತ್ರಿಪುರ ಚುನಾವಣೆಯಲ್ಲಿ ಎಡರಂಗಕ್ಕೆ ಸಿಕ್ಕ ಭಾರೀ ವಿಜಯ ಆ ರಾಜ್ಯಕ್ಕೆ ಮಾತ್ರವಲ್ಲ ಇಡೀ ಭಾರತಕ್ಕೆ ಸ್ಪಂದಿಸುತ್ತದೆ. ಐದು ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್-ಟಿಯುಜೆಎಸ್‌ನ ಪೋಲೀಸ್ ದಬ್ಬಾಳಿಕೆ ದರಬಾರಿಗೆ ಆದ ಪರಾಭವ ಅಖಿಲ ಭಾರತ ಮಟ್ಟದಲ್ಲಿ ರೂಪುಗೊಳ್ಳುವ ಎಡ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಗೆ ಚೇತೋಹಾರಿಯಾಗಿದೆ.

ಈ ಸತ್ಯವನ್ನು ಹೇಳುವ ಸಮಯದಲ್ಲೇ 1970ರಲ್ಲಿ ದಿವಂಗತ ಪ್ರಧಾನಿ ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಪಶ್ಚಿಮ ಬಂಗಾಳದಲ್ಲಿ ನಡೆಸಿದ ಪೋಲೀಸ್ ಗುಂಡಾಗಿರಿ ದರ್ಬಾರು ನೆನಪಿಗೆ ಬರುತ್ತದೆ. 1970ರಲ್ಲಿ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಅತ್ಯಾಚಾರ ನಡೆಸಿತ್ತು. ಅದೇ ರೀತಿಯಲ್ಲಿ 1980ರಲ್ಲಿ ಕೊನೆಗೆ ಮತ್ತು 1990ರಲ್ಲಿ ತ್ರಿಪುರದಲ್ಲಿ ಕಾಂಗ್ರೆಸ್(ಐ)ನ ಅರೆ-ಫ್ಯಾಸಿಸ್ಟ್ ಭೀಕರ ಆಡಳಿತ ಎಡಚಳುವಳಿಯನ್ನು ಪೂರ್ತಿ ಸರ್ವನಾಶ ಮಾಡಲು ಶ್ರಮಿಸಿತು. ಆದರೆ 1977ರ ಪಶ್ಚಿಮ ಬಂಗಾಳದ ರೀತಿಯಲ್ಲಿ 1980ರಲ್ಲಿ ತ್ರಿಪುರಾದಲ್ಲಿ ಎಡರಂಗ ಭಾರೀ ಬಹುಮತ ಪಡೆದಿತ್ತು. ಕಾಂಗ್ರೆ ದಯನೀಯ ಪರಾಭವಗೊಂಡಿತ್ತು.

ಪಶ್ಚಿಮ ಬಂಗಾಳದ ರೀತಿಯಲ್ಲಿ ತ್ರಿಪುರಾದಲ್ಲಿ ಕಾಂಗ್ರೆಸ್ಸಿನ ಅರೆ-ಫ್ಯಾಸಿಸ್ಟ್ ಆಡಳಿತ ಕೊನೆಗೊಂಡದ್ದು ಅಖಿಲ ಭಾರತ ರಾಜಕೀಯದಲ್ಲಿ ಬರುವಂತ ಬದಲಾವಣೆಯ ಫಲವಾಗಿದೆ.

1975ರಲ್ಲಿ ಇಂದಿರಾಗಾಂಧಿ ತಂದ ತುರ್ತು ಪರಿಸ್ಥಿತಿಗೆ ಎದುರಾಗಿ ಅಖಿಲ ಭಾರತ ರಾಜಕೀಯ ರಂಗದಲ್ಲಿ ಕಾಂಗ್ರೆಸ್ ವಿರೋಧಿ ಎಲ್ಲಾ ರಾಜಕೀಯ ಪಕ್ಷಗಳು ಒಂದಾಗಿ ನಿಂತು ಹೋರಾಟ ಮಾಡಿದವು. ಅದರ ಫಲವಾಗಿ 1977ರಲ್ಲಿ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಹೀನಾಯ ಸೋಲು ಅನುಭವಿಸಿ ಎಡರಂಗ ಭಾರೀ ಬಹುಮತದಿಂದ ಗೆದ್ದಿತು. ಅದತ್ತೇ ತ್ರಿಪುರದಲ್ಲಿ ಎಡ ಪಕ್ಷಗಳ ಸರಕಾರ ಅಧಿಕಾರಕ್ಕೆ ಬಂದು 10 ವರ್ಷ ಸರಕಾರ ನಡೆಸಿತು.

ಅಖಿಲ ಭಾರತ ಮಟ್ಟದಲ್ಲಿ ರೂಪುಗೊಂಡು ಬರುತ್ತಿರುವ ಎಡ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಗೆ ಈ ಚುನಾವಣಾ ಫಲಿತಾಂಶ ಬಲಕೊಡುತ್ತದೆ. ಯಾಕೆಂದರೆ ಪೋಲೀಸ್ ಗುಂಡಾ ಆಡಳಿತಕ್ಕೆ ಎದುರಾಗಿ 5 ವರ್ಷಗಳ ಕಾಲ ತ್ರಿಪುರ ಸಂಗಾತಿಗಳು ನಡೆಸಿದ ಧೈರ್ಯವಾದ ಕಠಿಣ ಹೋರಾಟದ ಫಲವಾಗಿ ಈ ವಿಜಯ ಲಭಿಸಿದೆ. ಈ ವಿಜಯದ ಅಲೆ ಭಾರತದಲ್ಲೆಲ್ಲಾ ಆಗುತ್ತದೆ. ಕಾಂಗ್ರೆಸ್(ಐ) ನ ಜನವಿರೋಧಿ ಧೋರಣೆಗಳಿಗೆ ಎದುರಾಗಿ ಬಿಜೆಪಿಯಂತಹ ವಿಭಜನಕಾರಿ ಶಕ್ತಿಗಳಿಗೆ ಎದುರಾಗಿ ಉತ್ತರಪ್ರದೇಶ ಮತ್ತಿತರ ಹಿಂದಿಭಾಷಿಕ ರಾಜ್ಯಗಳಲ್ಲಿ ಜನರು ಎದುರು ನಿಂತು ಹೋರಾಟ ಮುಂದುವರಿಸುತ್ತಾರೆ.

ಕೇರಳದ ಬಗ್ಗೆ ಹೇಳುವುದಾದರೆ ಇಲ್ಲಿ ಶಕ್ತಿಯುತವಾಗಿ ಮುನ್ನಡೆಯುತ್ತಿರುವ ಎಡ ಪ್ರಜಾಪ್ರಭುತ್ವ ರಂಗ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಾಣಲು ತ್ರಿಪುರ ಸಂಗಾತಿಗಳು ಪಡೆದ ವಿಜಯ ಸ್ಫೂರ್ತಿದಾಯಕವಾಗುತ್ತದೆ. ಕರುಣಾಕರನ್ ಸರಕಾರ ರಾಜೀನಾಮೆ ನೀಡಿ ಮರು ಚುನಾವಣೆ ನಡೆಸಬೇಕೆಂಬ ಎಡ ಪ್ರಜಾಪ್ರಭುತ್ವ ಶಕ್ತಿಗಳ ಬೇಡಿಕೆಗೆ ಬಲತಂದಿದೆ ತ್ರಿಪುರಾದ ವಿಜಯ. ಕಾಂಗ್ರೆಸ್(ಐ) ನೇತೃತ್ವದ ಯುಡಿಎಫ್ ಸರಕಾರ ಎಡ ಪ್ರಜಾಪ್ರಭುತ್ವ ಚಳುವಳಿಯನ್ನು ನಾಶ ಮಾಡುವ ಉದ್ದೇಶದಿಂದ ಎಕೆಜಿ ಆಸ್ಪತ್ರೆ ಚುನಾವಣೆಯಲ್ಲಿ ಗುಂಡಾಗಿರಿ ದಬ್ಬಾಳಿಕೆ, ಕಾಂ. ಸುಶೀಲಾ ಗೋಪಾಲನ್ ಮತ್ತಿತರ ಸಂಗಾತಿಗಳ ಮೇಲೆ ಹಲ್ಲೆ, ಪೋಲೀಸರಿಂದ ಮತದಾನ ಮಾಡಿಸಿದ್ದಲ್ಲದೆ ತಿರುವನಂತಪುರ ಪಕ್ಷದ ರಾಜ್ಯ ಸಮಿತಿ ಕಾರ್ಯಾಲಯದ ಮೇಲೆ ಪೋಲೀಸರಿಂದ ಗುಂಡು ಹಾರಿಸಲು ಹಿಂದೆ ಮುಂದೆ ನೋಡಲಿಲ್ಲ. ಇಂತಹ ಪರಿಸ್ಥಿತಿಯನ್ನು ಎದುರಿಸಲು ಕೇರಳದ ಎಡ ಚಳುವಳಿ ಎಲ್ಲಾ ರೀತಿ ತಯಾರಿ ನಡೆಸಿ ಮುನ್ನಡೆಯುತ್ತಿದೆ.

ಅದೇ ರೀತಿ ನರಸಿಂಹರಾವ್ ಸರಕಾರದ ಆರ್ಥಿಕ ಧೋರಣೆಗಳ ವಿರುದ್ಧವಾಗಿ ಮುಷ್ಕರ, ಬಂದ್ ಇತ್ಯಾದಿ ಪ್ರಕ್ಷೋಭೆ ಹೋರಾಟಗಳು ಭಾರತದಲ್ಲಿ ಬೆಳೆದು ಬರುತ್ತಿದೆ. ಇದು ನಡೆಯುತ್ತಿರುವ ಸಮಯದಲ್ಲೇ ತ್ರಿಪುರ ಚುನಾವಣೆಗಳ ಅನುಭವ ನಮಗೆ ಒಂದು ಪಾಠವಾಗಿದೆ.

-ಇ. ಕೆ. ಎನ್. ರಾಜನ್
ಮತ್ತು
- ಶಾಂತಾರಾಮ ನಾಯಕ್

ತ್ರಿಪುರಾ ಚುನಾವಣೆ ಕೆಲವು ಅಂಕೆ-ಸಂಖ್ಯೆಗಳು

ಒಟ್ಟು ಮತದಾರರು	16,75,534
ನಡೆದ ಮತದಾನ	13,39,968
ಎಡರಂಗಕ್ಕೆ	691288(51.5%)
ಕಾಂಗ್ರೆ-ಟಿಯುಜೆಎಸ್	541107(40.38%)
ಬಿಜೆಪಿಗೆ	26765(2.02%)
ಪಕ್ಷೇತರರು ಮತ್ತು ಇತರರು	80,808(6.05%)

ಬಿಜೆಪಿ 30 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. ಎಲ್ಲಾ ಕಡೆ ಠೇವಣಿ ಕಳಕೊಂಡಿದೆ. 25 ಕ್ಷೇತ್ರಗಳಲ್ಲಿ 1000ಕ್ಕೂ ಕಮ್ಮಿ ಮತ ಪಡೆದಿದೆ.

"ಕಾಶ್ಮೀರಿಗಳ ಹತಾಶೆಯನ್ನು ತೊಡೆಯಿರಿ"

- ಸಿಪಿಐ(ಎಂ) ಒತ್ತಾಯ

ಸಿಪಿಐ(ಎಂ) ನಿಯೋಗವೊಂದು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಕಾಶ್ಮೀರ ಕಣಿವೆಯಲ್ಲಿನ ಪರಿಸ್ಥಿತಿ ಕುರಿತು ಒಂದು ಮನವಿ ಪತ್ರವನ್ನು ಸಲ್ಲಿಸಿತು. ಸಿಪಿಐ(ಎಂ) ಜಮ್ಮು-ಕಾಶ್ಮೀರ ರಾಜ್ಯ ಸಮಿತಿ ಕಾರ್ಯದರ್ಶಿ ಮಹಮ್ಮದ್‌ಯುಸುಫ್ ತರಿಗಾಮಿ ಹಾಗೂ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಹಾಗೂ ಸಂಸತ್ ಸದಸ್ಯ ಸೈಫುದ್ದೀನ್ ಚೌಧುರಿ ಈ ನಿಯೋಗದಲ್ಲಿದ್ದರು. ನಂತರ ಇನ್ನೊಂದು ನಿಯೋಗ ಗೃಹರಾಜ್ಯಮಂತ್ರಿ(ಆಂತರಿಕ ಭದ್ರತೆ) ರಾಜೇಶ್ ಪೈಲಟ್‌ರವರನ್ನು ಭೇಟಿ ಮಾಡಿ ಪ್ರಧಾನಿಗಳಿಗೆ ಅರ್ಪಿಸಿದ ಮನವಿ ಪತ್ರದಲ್ಲಿ ನೀಡಿದ ಆಧಾರದ ಮೇಲೆ ಆದ್ಯತೆ ಮೇಲೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಪಡಿಸಿತು. ಈ ನಿಯೋಗದಲ್ಲಿ ಮಹಮ್ಮದ್ ತರಿಗಾಮಿಯವರು ಮತ್ತು ಲೋಕಸಭೆಯಲ್ಲಿ ಸಿಪಿಐ(ಎಂ) ಗುಂಪಿನ ಮುಖಂಡ ಸೋಮನಾಥ್ ಚಟರ್ಜಿ ಇದ್ದರು.

ಸರಕಾರ ಹಾಗೂ ದೇಶ ಕಾಶ್ಮೀರದತ್ತ ಗಂಭೀರ ಗಮನ ಕೇಂದ್ರೀಕರಿಸಬೇಕು ಎಂದು ಮನವಿ ಪತ್ರ ತಿಳಿಸಿದೆ. ಕಾಶ್ಮೀರ ಕುರಿತು ಒಂದು ಸ್ಪಷ್ಟ ಧೋರಣೆ ರೂಪಿಸಿ ಕಾಶ್ಮೀರಿ ಕಣಿವೆಯ ಜನ ಮತ್ತೆ ರಾಷ್ಟ್ರೀಯ ಮುಖ್ಯ ಪ್ರವಾಹದಲ್ಲಿ ಸೇರಿಕೊಳ್ಳಲು ಅನುವಾಗುವಂತಹ ದೀರ್ಘಕಾಲದ ಹಾಗೂ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಇದರಲ್ಲಿ ಕಾಶ್ಮೀರಿಗಳ ಸ್ವಂತಿಕೆಯನ್ನು ಮತ್ತೆ ಸ್ಥಾಪಿಸಿ, ರಕ್ಷಿಸುವುದು ಒಂದು ಮೂಲಭೂತ ಅಂಶ. ಏನೇ ಬರಲಿ ಜಾತ್ಯಾತೀತ ಭಾರತದಲ್ಲಿ ಕಾಶ್ಮೀರಿಗಳ ಸ್ವಂತಿಕೆಯನ್ನು ರಕ್ಷಿಸಲಾಗುವುದು ಎಂದು ಗಂಭೀರ ಭರವಸೆ ಅವರಲ್ಲಿ ಉಂಟುಮಾಡಬೇಕಾಗಿದೆ. ಹೀಗಾಗಬೇಕಾದರೆ 1952ರ ದಿಲ್ಲಿ ಒಪ್ಪಂದದಂತೆ ಸ್ವಾಯತ್ತತೆಯ ಗ್ಯಾರಂಟಿ ನೀಡಬೇಕು. ಜಮ್ಮು-ಕಾಶ್ಮೀರ ಸಂವಿಧಾನದ ಚೌಕಟ್ಟಿನೊಳಗೆ ಜಮ್ಮು ಮತ್ತು ಲಡ್ಡಾಖ್ ಪ್ರದೇಶಗಳಿಗೆ ಪ್ರಾದೇಶಿಕ ಸ್ವಾಯತ್ತತೆ ಇರಬೇಕು ಎಂದು ಮನವಿ ಪತ್ರ ಹೇಳಿದೆ. ಈ ತೊಂದರೆಗೊಳಗಾದ ರಾಜ್ಯದಲ್ಲಿ ಶಾಂತಿ, ಸುವ್ಯವಸ್ಥೆ ನೆಲೆಸುವಂತೆ ಮಾಡಲು ಇಡೀ ದೇಶದ ಎಲ್ಲಾ ಪ್ರಗತಿಪರ, ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಶಕ್ತಗಳ ಸಹಕಾರ ಪಡೆಯಬೇಕು ಎಂದು ಸಿಪಿಐ(ಎಂ) ನಿಯೋಗ ಸಲ್ಲಿಸಿದ ವರದಿ ಒತ್ತಾಯಿಸಿದೆ.

ಒಂದೆಡೆ ಉಗ್ರಗಾಮಿಗಳ, ಇನ್ನೊಂದು ಕಡೆ ಭದ್ರತಾ ಪಡೆಗಳ ಗುಂಡು ಹಾರಾಟಗಳ ನಡುವೆ ಜನಸಾಮಾನ್ಯರ ಕಷ್ಟ ಹೇಳತೀರದ ಎನ್ನುತ್ತಾ ಮನವಿ ಪತ್ರ ಜನಸಾಮಾನ್ಯರ ಪರಿಸ್ಥಿತಿಯ ಗಮನ ಸೆಳೆದಿದೆ. ಜೀವ-ಆಸ್ತಿ ಹಾನಿ ಕಾಶ್ಮೀರ ಕಣಿವೆಯ ದೈನಂದಿನ ವ್ಯವಹಾರವಾಗಿಬಿಟ್ಟಿದೆ. ಒಮ್ಮೆ ಉತ್ಕರ್ಷದಲ್ಲಿದ್ದ ಪ್ರವಾಸೋದ್ಯಮ ನಾಶವಾಗಿ ಸಾವಿರಾರು ಮಂದಿ ನಿರುದ್ಯೋಗಿಗಳಾಗಿದ್ದಾರೆ. ನಿರುದ್ಯೋಗಿ ಯುವಕರ, ಶಿಕ್ಷಣದಲ್ಲಿ ಅಡೆ- ತಡೆಗಳನ್ನೆದುರಿಸಬೇಕಾದ ವಿದ್ಯಾರ್ಥಿಗಳ ಹಾಗೂ ವಲಸೆಹೋದ ಲಕ್ಷಾಂತರ ಜನರ ಪರಿಸ್ಥಿತಿಯನ್ನು ಮನವಿ ನೆನಪಿಸಿದೆ.

ಕಾಶ್ಮೀರದ ಜನರಲ್ಲಿ ...

ಪ್ರವಾಹದಿಂದ ದೂರ ಪರಕೀಯ ಭಾವನೆ, ಹತಾಶೆ, ಅಸಹಾಯಕತೆಯ ಭಾವನೆಯನ್ನು ಗಮನಿಸಿರುವ ಮನವಿ ಪತ್ರ ಕಾಶ್ಮೀರಿ ಜನತೆಯ ಮುಖ್ಯ ಲಕ್ಷಣವಾದ ಕೋಮು ಸೌಹಾರ್ದತೆಯ ದೀರ್ಘ ಕಾಲದ ಪರಂಪರೆಗೇ ಬೆದರಿಕೆ ಬಂದಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದೆ. ಅಲ್ಲಿನ ಸ್ಫೋಟಕ ಪರಿಸ್ಥಿತಿಯನ್ನು ಎದುರಿಸಲು ಕ್ರಮ ಕೈಗೊಳ್ಳದಿದ್ದರೆ ಪರಿಸ್ಥಿತಿ ಇನ್ನಷ್ಟು ಕ್ಲಿಷ್ಟವಾಗುತ್ತದೆ ಎಂದು ಮನವಿ ಎಚ್ಚರಿಸಿದೆ.

ಕಾಶ್ಮೀರದ ಜನಸಾಮಾನ್ಯರ ಕುಂದು ಕೊರತೆಗಳತ್ತ ಕಿವಿಗೊಟ್ಟು ಅವರ ತುರ್ತು ಅಗತ್ಯಗಳನ್ನು ಪೂರೈಸಲು ವ್ಯವಸ್ಥಿತ ಕ್ರಮ ಕೈಗೊಂಡು ಅವರೊಂದಿಗೆ ಮತ್ತೆ ಸಂಪರ್ಕ ಬೆಸೆಯಬೇಕಾಗಿದೆ. ಈಗ ನಿಷ್ಕ್ರಿಯವಾಗಿರುವ ಸಲಹಾ ಮಂಡಳಿಯ ಪುನರ್ರಚನೆ ಮಾಡಿ ಅದರಲ್ಲಿ ಹಿರಿಯ ರಾಜಕೀಯ ಪಕ್ಷಗಳ ಮುಖಂಡರನ್ನು ಸೇರಿಸಿಕೊಂಡು ಈ ಮಂಡಳಿಗಳಿಗೆ ಜನಗಳ ದೂರುಗಳನ್ನು ಕೇಳಿ ಪರಿಹರಿಸುವಲ್ಲಿ ಹೆಚ್ಚಿನ ಅಧಿಕಾರ ನೀಡಿದರೆ ಒಂದು ರೀತಿಯ ರಾಜಕೀಯ ಚಟುವಟಿಕೆ ಆರಂಭಿಸಲು ಹಾದಿ ಮಾಡಿಕೊಟ್ಟಂತಾಗುತ್ತದೆ. ಇದು ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸಲು ರಾಜ್ಯದ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಗೆ ಅಗತ್ಯವಾದ ಸನ್ನಿವೇಶವನ್ನು ಕಲ್ಪಿಸಲು ಅನುವು ಮಾಡಕೊಡುತ್ತದೆ ಎಂದು ಸಿಪಿಐ(ಎಂ) ನಿಯೋಗದ ಮನವಿ ಪತ್ರ ಎತ್ತಿ ಹೇಳಿದೆ.

ಕಾಂ.ಸೂರಿ ನೇತೃತ್ವದಲ್ಲಿ ಸಿಐಟಿಯು ನಿಯೋಗದ ಯಶಸ್ವಿ ಇರಾಕ್ ಭೇಟಿ

ಇರಾಕ್‌ನ ಕಾರ್ಮಿಕ ಸಂಘಗಳ ಸಾರ್ವತ್ರಿಕ ಒಕ್ಕೂಟ, ಜಿಎಫ್‌ಟಿಯು, ಇರಾಕ್‌ನ ಆಹ್ವಾನದ ಮೇರೆಗೆ ಇರಾಕಿಗೆ ಹೋದ ಸಿಐಟಿಯು ನಿಯೋಗ ಏಪ್ರಿಲ್ 8ರಿಂದ 15 ರವರೆಗಿನ ಯಶಸ್ವೀ ಭೇಟಿಯ ನಂತರ ಭಾರತಕ್ಕೆ ಹಿಂದಿರುಗಿದೆ.

ಸಿಐಟಿಯುನ ಅಖಿಲ ಭಾರತ ಉಪಾಧ್ಯಕ್ಷರೂ, ರಾಜ್ಯ ಅಧ್ಯಕ್ಷರೂ ಆಗಿರುವ ಕಾಂ. ಎಸ್. ಸೂರ್ಯನಾರಾಯಣರಾವ್ ನೇತೃತ್ವದ ಈ ನಿಯೋಗದಲ್ಲಿದ್ದ ಇತರ ಸದಸ್ಯರೆಂದರೆ ಸಿಐಟಿಯು ಕಾರ್ಯಕಾರಿ ಸಮಿತಿಯ ಸದಸ್ಯ ಕಾಂ.ಸುಖಮಯ್ ಪಾಲ್ ಹಾಗೂ ಜನರಲ್ ಕೌನ್ಸಿಲ್ ಸದಸ್ಯ ಕಾಂ.ಫಾಟಕ್ ಅಮಲೇಂದು.

30 ದೇಶಗಳ ಜಂಟಿ ಆಕ್ರಮಣ ಹಾಗೂ ಅನ್ಯಾಯಪೂರ್ಣ ನಿರ್ಬಂಧದ ಪರಿಣಾಮವನ್ನು ಅನುಭವಿಸುತ್ತಿರುವ ಇರಾಕಿನ ಕಷ್ಟ-ಕೋಟಲೆಗಳ ಬಗ್ಗೆ ಈ ನಿಯೋಗ ಹತ್ತಿರದಿಂದ ನೋಡಿತು ಎಂದು ಭೇಟಿಯ ಕೊನೆಯಲ್ಲಿ ನೀಡಿರುವ ಜಂಟಿ ಹೇಳಿಕೆ ತಿಳಿಸಿದೆ.

ಈ ಕಷ್ಟ ಕೋಟಲೆಗಳ ನಡುವೆ ಇರಾಕ್ ಪುನರ್ರಚನೆಯಲ್ಲಿ ತೊಡಗಿರುವ ರೀತಿಯ ಬಗ್ಗೆ ಸಿಐಟಿಯು ನಿಯೋಗ ತನ್ನ ಮೆಚ್ಚುಗೆ ವ್ಯಕ್ತಪಡಿಸಿತು. ಜಿಎಫ್‌ಟಿಯುವಿನ ಮುಖಂಡರೊಡನೆ ಹಾಗೂ ಸರಕಾರದ ಮುಖಂಡರೊಡನೆ ... ಪತುಶಾಹಿಯ ವಿರುದ್ಧ ಜಂಟಿ ಹೋರಾಟದ ಪ್ರಯತ್ನ ನಡೆಸಬೇಕೆಂದು ಅಭಿಪ್ರಾಯಪಡಲಾಯಿತು.

ಎರಡು ಸಮರಶೀಲ ಸಂಘಟನೆಗಳ ನಡುವೆ ಸಂಬಂಧಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ಕಾರ್ಮಿಕ ಸಂಘಗಳ ಮಟ್ಟದಲ್ಲಿ ನಿಯೋಗಗಳ ವಿನಿಮಯ, ಕರಪತ್ರಗಳ ಪ್ರಕಟಣೆಗಳ ವಿನಿಮಯ, ಇರಾಕಿನ ಜನಗಳಿಗೆ ಬೆಂಬಲವಾಗಿ ಭಾರತೀಯ ಕಾರ್ಮಿಕರಿಂದ ರ‍್ಯಾಲಿ, ಸೆಮಿನಾರ್ ಇತ್ಯಾದಿ, ಇರಾಕಿಗಳಿಗೆ ಆಹಾರ, ಮಕ್ಕಳ ಆಹಾರ, ಔಷಧಿಗಳನ್ನು ಕೊಡುಗೆಯಾಗಿ ಸಂಗ್ರಹಿಸಲು ಪ್ರಚಾರ ನಡೆಸುವ ಮೂಲಕ ವಿಶ್ವಾದ್ಯಂತ ಈ ಎರಡು ಕಾರ್ಮಿಕ ಸಂಘಟನೆಗಳ ಸಂಬಂಧಗಳನ್ನು ಬಲಪಡಿಸಬೇಕೆಂದು ಭೇಟಿಯ ಕೊನೆಯಲ್ಲಿ ಹೊರಡಿಸಿದ ಜಂಟಿ ಹೇಳಿಕೆ ತಿಳಿಸಿದೆ. ಸಂಕಷ್ಟಪೀಡಿತ ಇರಾಕಿಯರ ಪರಿಸ್ಥಿತಿಯತ್ತ ಗಮನ ಸೆಳೆಯಲು ಒಂದು ವಿಶೇಷ ವಿಚಾರಸಂಕಿರಣ ನಡೆಸಬೇಕೆಂದೂ ಅಭಿಪ್ರಾಯಪಡಲಾಯಿತು. ಜಂಟಿ ಕಾರ್ಮಿಕ ಕಾರ್ಯಾಚರಣೆ ಹಾಗೂ ಹೋರಾಟಗಳ ಮೂಲಕ ವಿಶ್ವಾದ್ಯಂತ ವಿವಿಧ ಕಾರ್ಮಿಕ ಕೇಂದ್ರಗಳನ್ನು ಒಂದುಗೂಡಿಸುವ ವಿಶ್ವಾದ ಕಾರ್ಮಿಕರ ಸಂಘಟನೆಯ ಅಗತ್ಯವಿದೆಯೆಂದೂ ಎರಡೂ ಸಂಘಟನೆಗಳು ಒಪ್ಪಿಕೊಂಡಿವೆ.

ಅಯೋಧ್ಯಾಕಾಂಡ



ಕೋಮು ಸಂಘಟನೆಗಳ ಕಚೇರಿಗಳ ಮೇಲೆ ಸಿಬಿಐ ದಾಳಿ
ಯಾರ ಕಣ್ಣೊರೆಸಲು?

ಏಪ್ರಿಲ್ 8. ಕೇಂದ್ರ ತನಿಖಾ ಪಡೆ ಸಿಬಿಐ ದಿಲ್ಲಿ, ಉತ್ತರಪ್ರದೇಶ, ಮಹಾರಾಷ್ಟ್ರಗಳಲ್ಲಿ ಒಂದೇ ವೇಳೆಗೆ 24 ವಿಹೆಚ್‌ಪಿ, ಶಿವಸೇನೆ, ಭಜರಂಗ ದಳದ ಕಚೇರಿಗಳ ಮೇಲೆ ದಾಳಿ ನಡೆಸಿದ, ಹತ್ತು ಗಂಟೆಗಳ ಕಾಲ ಪರಿಶೀಲನೆ ನಡೆಸಿದ ಸುದ್ದಿ ಪ್ರಕಟಗೊಂಡಿತು. ಕಾಂಗ್ರೆ ಪುಢಾರಿಗಳು ತಕ್ಷಣ "ಭಲೇ ನರಸಿಂಹರಾವ್" ಎಂದು ಜನ ಚಪ್ಪಾಳೆ ತಟ್ಟುತ್ತಾರೋ ಎಂದು ತಿರುಗಿ ನೋಡಿದರು. ಮಸೀದಿ ಕೆಡವಿದ ನಾಲ್ಕು ತಿಂಗಳ ನಂತರ ಎಂತಹ ತನಿಖಾ ದಾಳಿಯಿದು ಎಂದು ಜನ ಕೇಳುತ್ತಿದ್ದರು. 'ಬಾಬ್ರಿ ಮಸೀದಿ ನಾಶ ಪೂರ್ವಯೋಜಿತ ಪಿತೂರಿ' ಎಂಬ ಬಗ್ಗೆ ಪುರಾವೆ ಹುಡುಕಲು ಧಾಳಿಯೆಂಬುದು ಸಿಬಿಐ ಹೇಳಿಕೆ. ಪುರಾವೆ ಸಿಕ್ಕಿತೇ? ಸಿಕ್ಕಿತು ಎನ್ನುತ್ತಾರೆ ಸಿಬಿಐನವರು. ಏನು ಎಂದು ಇನ್ನೂ ಹೇಳಿಲ್ಲ. ಇರಲಿ.

ಈ ತನಿಖೆ ನಡೆಸಿದ ವೈಖರಿ ನೋಡಿ. ಫೈಜಾಬಾದಿನಲ್ಲಿ ಈ 'ಧಾಳಿ' ಎಷ್ಟೊಂದು ನಿರೀಕ್ಷಿತವಾಗಿತ್ತೆಂದರೆ ಬೆಳಿಗ್ಗೆ ಏಳು ಗಂಟೆಗೆ ಸಿಬಿಐ ತಂಡ ವಿಹೆಚ್‌ಪಿ ಮುಖಂಡರಾದ ಮಹಂತ್ ಪರಮಹಂಸ, ಮಹಂತ್ ನಬ್ ಗೋಪಾಲ್ ದಾಸ್ ಹಾಗೂ ಮಹಂತ್ ರಾಮ್‌ವಿಲಾಸ್ ವೇದಾಂತಿಯ ಮನೆಗೆ ಹೋದಾಗ ಅವರೆಲ್ಲಾ ಸುದ್ದಿ ತಿಳಿದು ಆಗಲೇ ಪರಾರಿಯಾಗಿದ್ದರು. ಭಜರಂಗ ದಳದ ಮುಖಂಡ ವಿನಯ್ ಕತಿಯಾರ್ ಮನೆಗೆ ಬೀಗ ಹಾಕಿತ್ತು.

ಈ ಧಾಳಿಗಳಲ್ಲಿ ಮಸೀದಿ ಒಡೆಯುವ ಬಗ್ಗೆ ಮೊದಲೇ ತರಬೇತಿ ನೀಡಲಾಗಿತ್ತು ಎಂಬುದಕ್ಕೆ ಪುರಾವೆ ದೊರೆತಿದೆ ಎಂದು ಸಿಬಿಐ ಹೇಳಿದೆ. ಇದರಲ್ಲಿ ಹೊಸದೇನಿದೆ? ಇದಕ್ಕೆ ಪುರಾವೆ ನಾಲ್ಕು ತಿಂಗಳ ಹಿಂದೆಯೇ ಸಿಕ್ಕಿಲ್ಲವೆ ಎಂದು ಪತ್ರಕರ್ತರು ಕೇಳುತ್ತಾರೆ. ಕರಸೇವಕರು ತರಬೇತಿ ಪಡೆಯುತ್ತಿದ್ದುದರ ದೃಶ್ಯಗಳನ್ನೂ, ವರದಿಗಳನ್ನೂ ವಿಡಿಯೋಗಳು, ಪತ್ರಿಕೆಗಳ ಆಗಲೇ ಪ್ರಕಟಿಸಲಿಲ್ಲವೇ, ಬಿಜೆಪಿ ಮುಖವಾಣಿ 'ಪಾಂಚಜನ್ಯ'ವಂತೂ ಮಸೀದಿ ಕೆಡವಿದ ಕರಸೇವಕರ ಹೆಸರುಗಳನ್ನು ಪ್ರಕಟಿಸಿವೆ.

ಈಗಾಗಲೇ ತನ್ನ ಬಳಿಯಿರುವ ಮಾಹಿತಿಗಳನ್ನು ಬಳಸದ ಸರಕಾರ ಈ 'ಧಾಳಿ' ಗಳಿಂದ ಏನು ಸಾಧಿಸಬಯಸಿತ್ತು? ಬಿಜೆಪಿ ಬಗ್ಗೆ ತನ್ನದು ಮೆದು ನಿಲುವಲ್ಲ ಎಂದು ಅರ್ಜುನ್‌ಸಿಂಗ್ ಹಾಗೂ ಬೆಂಬಲಿಗರ ಬಾಯಿ ಮುಚ್ಚಿಸುವುದು ಈ ಧಾಳಿಗಳ ಮುಖ್ಯ ಉದ್ದೇಶ, ಕೋಮುವಾದಿಗಳ ಕ್ರಿಮಿನಲ್ ಚಟುವಟಿಕೆಗಳನ್ನು ಬಯಲು ಮಾಡುವುದಲ್ಲ ಎಂಬುದು 'ಧಾಳಿ' ನಡೆದ ರೀತಿಯಿಂದಲೇ ತಿಳಿಯುತ್ತದೆ ಎನ್ನುತ್ತಾರೆ ಪತ್ರಕರ್ತರು.

ನಡಿನಲ್ಲೀಗ ಎರಡು ದನಿಗಳು

ನಮ್ಮದೊಂದು ಅವರದೊಂದು - ನಾಡಿನಲ್ಲೀಗ ಎರಡು ದನಿ
ಆರಿಸಬೇಕೀಗ ನೀವು- ಕೇಳುವಿರಾವ ದನಿ - ಒಪ್ಪುವಿರಾವ ದನಿ

ನಾವನ್ನುತ್ತೇವೆ - ಮನುಜರ ಜಾತಿ-ಧರ್ಮಗಳಿಂದ ಗುರುತಿಸಬೇಡಿ
ಅವರನ್ನುತ್ತಾರೆ - ಮನುಕುಲ ಒಂದೇ ಎಂದು ದೊಬ್ಬಡಬೇಡಿ

ನಾವನ್ನುತ್ತೇವೆ - ದ್ವೇಷದ ಹೊಗೆಯೆಬ್ಬಿಸುವ ಆಹ್ವಾನ ತಪ್ಪು
ಅವರನ್ನುತ್ತಾರೆ - ಇದನ್ನೊಪ್ಪಿದರೆ ಇಡೀ ಹಿಂದೂಸ್ಥಾನ ತಪ್ಪು

ನಾವನ್ನುತ್ತೇವೆ - ಹಗೆತನ ಮರೆತು ಪ್ರೀತಿಯ ಮಾತನಾಡಿ
ಅವರನ್ನುತ್ತಾರೆ - ರಕ್ತದೋಕುಳಿ ಹರಿಯುತ್ತಿದೆಯೋ ಹರಿಯಲಿ ಬಿಡಿ

ನಮ್ಮದೊಂದು ಅವರದೊಂದು - ನಾಡಿನಲ್ಲೀಗ ಎರಡು ದನಿ
ಆರಿಸಬೇಕೀಗ ನೀವು - ಕೇಳುವಿರಾವ ದನಿ - ಒಪ್ಪುವಿರಾವ ದನಿ

ನಾವನ್ನುತ್ತೇವೆ - ಮನುಜ ಮನುಜರ ನಡುವೆ ಪ್ರೀತಿಯಿರಲಿ
ಅವರನ್ನುತ್ತಾರೆ - ಒಂದು ಕೈಯಲ್ಲಿ ತ್ರಿಶೂಲ, ಮತ್ತೊಂದರಲಿ ಕತ್ತಿಯಿರಲಿ

ನಾವನ್ನುತ್ತೇವೆ - ಮನೆ ಮಠ ಎಲ್ಲವ ಕಳಕೊಂಡವರಿಗೆ ನೆರಳು ಕೊಡಿ
ಅವರನ್ನುತ್ತಾರೆ - ಮರೆತು ಮಸುಕಾದ ಮಂದಿರ ಮಸೀದಿಗಳ ನೆನಪು ಕೊಡಿ

ನಾವನ್ನುತ್ತೇವೆ - ರಾಮರಾಜ್ಯದಲ್ಲಿ ಹೇಗಿತ್ತೋ ಹಾಗೆಯೇ ಆಗಲಿ
ಅವರನ್ನುತ್ತಾರೆ - ರಕ್ತದೋಕುಳಿ ಹರಿಯುತ್ತದೆಯೋ - ಹರಿಯಲಿ ಬಿಡಿ

ನಮ್ಮದೊಂದು ಅವರದೊಂದು - ನಾಡಿನಲ್ಲೀಗ ಎರಡು ದನಿ
ಆರಿಸಬೇಕೀಗ ನೀವು - ಕೇಳುವಿರಾವ ದನಿ- ಒಪ್ಪುವಿರಾವ ದನಿ

ಹಿಂದಿ ಮೂಲ - ಜಾವೇದ್ ಅಖ್ತರ್

ರಾಮನಾಮದ ಬಲವೂ ಕೈಗಾರಿಕೋದ್ಯಮಿಗಳ ಹಣವೂ

'ಅಯೋಧ್ಯಾಕಾಂಡ'ದ ನಂತರ ಕೋಮುವಾದಿ ಘೋಷಣೆಗಳೇ ತನ್ನ ಅಸ್ತಿತ್ವದ, ಅಲ್ಲ- ಅಧಿಕಾರಗಳಿಕೆಯ ಜೀವಾಳ ಎಂದು ಬಿಜೆಪಿ ದೃಢಪಡಿಸಿದ ಕಲ್ಕತ್ತಾ ಅಧಿವೇಶನದ ಒಂದು ಘಟನೆ.

ಹಗಲು ಅಧಿವೇಶನ ನಡೆಯುತ್ತಿರುವಾಗ ಬಿಜೆಪಿ ಮುಖಂಡರೆಲ್ಲಾ 'ಹರ್ಯಾಣಾ ಭವನ್' ದಲ್ಲಿದ್ದರು. ರಾತ್ರಿ? ಹೋಟೆಲುಗಳಲ್ಲೋ ಅಥವಾ ವಿರಾಮಧಾಮಗಳಲ್ಲೋ - ಅಲ್ಲ. ಅವರೆಲ್ಲಾ ಇದ್ದದ್ದು ಕಲ್ಕತ್ತೆಯ ಕೈಗಾರಿಕೋದ್ಯಮಿಗಳ ಬಂಗಲೆಗಳಲ್ಲಿ. ಅಡ್ವಾಣಿ, ವಾಜಪೇಯಿ, ಎಸ್.ಎನ್.ಭಂಡಾರಿ ಕೈಗಾರಿಕೋದ್ಯಮಿ ಎಸ್.ಡಿ. ಬೆರಿವಾಲಾರ ಬಂಗಲೆಯಲ್ಲಿದ್ದರು. 'ಬಾಬ್ರಿ ಮಸೀದಿ' ಹೀರೋ ಕಲ್ಯಾಣಸಿಂಗ್ ಇನ್ನೊಬ್ಬ ಕೈಗಾರಿಕೋದ್ಯಮಿ ಪಿ.ಡಿ.ಚಿತ್ಲಾಂಗಿಯಾರ ಅತಿಥಿಯಾಗಿದ್ದರು. ಮತ್ತೊಬ್ಬ ಉದ್ಯಮಿ ದುರ್ಗಾಪ್ರಸಾದ್‌ನಥಾನಿ ಮುರಳಿ ಮನೋಹರ ಜೋಷಿಯವರಿಗೆ ಅತಿಥ್ಯ ಒದಗಿಸುವ ಭಾಗ್ಯ ಪಡೆದಿದ್ದರು. ಇವರಿಬ್ಬರು ಹಿಂದೆಯೂ ಕೈಗಾರಿಕೋದ್ಯಮಿಗಳ ಆತಿಥ್ಯ ಪಡೆಯಲಿಕ್ಕಾಗಿ ಕಲ್ಕತ್ತೆಗೆ ಬಂದಿದ್ದರು. ಬಿಜೆಪಿ ಅಧಿವೇಶನದಲ್ಲಿಯೂ ಕೆಲವು ಕೈಗಾರಿಕೋದ್ಯಮಿಗಳು ಸಕ್ರಿಯವಾಗಿ ಭಾಗವಹಿಸಿದ್ದರಂತೆ. ಬಾಯಲ್ಲಿ ರಾಮ ದೇವಸ್ಥಾನದ ಜಪ, ಕೈ ಉದ್ಯಮಿಗಳ ಜೇಬಿನಲ್ಲಿ ಕಣ್ಣು ದಿಲ್ಲಿ ದರ್ಬಾರಿನ ಮೇಲೆ.

ಬಿಜೆಪಿ ಪೀಕಲಾಟ

ಬಾಬ್ರಿ ಮಸೀದಿ ರಕ್ಷಿಸುವುದಾಗಿ ಸುಪ್ರೀಂ ಕೋರ್ಟ್‌ಗೆ ಮಾತುಕೊಟ್ಟು ಮುರಿದ ಕಲ್ಯಾಣ ಸಿಂಗ್ ಮೊನ್ನೆ-ಮೊನ್ನೆ ಕಾಂಗ್ರೆಸ್ "ಕಾನೂನು ಉಲ್ಲಂಘಿಸುತ್ತಿದೆ" ಎಂದು ಹಾರಾಡಿದರಂತೆ. ಜಬಲ್‌ಪುರ್ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರು ತಮ್ಮ ಹದ್ದುಮೀರಿ ಹೋಗಬಾರದು ಎಂದು ಉಪದೇಶ ನೀಡುತ್ತಿದ್ದ ಬಿಜೆಪಿ ಮುಖಂಡರು ಜಬಲ್‌ಪುರ್ ಹೈಕೋರ್ಟ್ ಮಧ್ಯಪ್ರದೇಶ ಬಿಜೆಪಿ ಸರಕಾರದ ವಜಾ ಕಾನೂನುಬಾಹಿರ ಎಂದಾಗ ಕುಣಿದಾಡಿದರಂತೆ. ಆದರೆ ಕುಣಿಯಲು ಮೇಲೆತ್ತಿದ ಕಾಲು ನೆಲವನ್ನು ತಲುಪುವಷ್ಟರಲ್ಲಿ ಕಳ್ಳ ಸುಳ್ಳನ ಮೇಲೆ ದೊಟ್ಟು ಮಾಡಿದಂತೆ ಎಂಬುದು ನೆನಪಾಯಿತಂತೆ. ತಕ್ಷಣ ಕಾನೂನು ಪಂಡಿತರನ್ನು ಕರೆಸಿ ಏನು ಮಾಡಬೇಕೆಂದು ಕೇಳಿದರಂತೆ. ಅವರು ನ್ಯಾಯಾಂಗದ ಹೊಗಳಿಕೆಯನ್ನು ತಗ್ಗಿಸಿ ಎಂದರಂತೆ. ಬದಲು ವಿಸರ್ಜನೆಗೊಂಡ ವಿಧಾನಸಭೆಯನ್ನು ಪುನರುಜ್ಜೀವನಗೊಳಿಸಿ ಎನ್ನಲಾರಂಭಿಸಿ ಎಂದರಂತೆ. ಆದರೆ ಹೀಗೆ ಒಬ್ಬ ವಿಸರ್ಜನೆಗೊಂಡು ಇಲ್ಲವಾದ ವಿಧಾನಸಭೆಯನ್ನು ಮತ್ತೆ 'ಬದುಕಿಸಿದ' ಉದಾಹರಣೆಗಳು ಎಷ್ಟು ಹುಡುಕಾಡಿದರೂ ಬಿಜೆಪಿ ಕಾನೂನು ಪಂಡಿತರಿಗೆ ಇದುವರೆಗೂ ಸಿಕ್ಕಿಲ್ಲವಂತೆ.

(ಕೃಪೆ : ಇಂಡಿಯಾ ಟುಡೇ)

ಜೋಷಿ ನೇಮಕಕ್ಕೆ ವಿಜ್ಞಾನಿಗಳ ಪ್ರತಿಭಟನೆ

ಪ್ರೊಫೆಸರ್ ಮೇಘನಾದ್ ಸಾಹಾ ಭಾರತದ ಹೆಮ್ಮೆಯ ವಿಜ್ಞಾನಿ. ಅವರ ಜನ್ಮಶತಾಬ್ದಿಯ ಸಂದರ್ಭದಲ್ಲಿ ಈ ಅಕ್ಟೋಬರ್‌ನಲ್ಲಿ ಅಲಹಾಬಾದ್ ವಿಶ್ವವಿದ್ಯಾಲಯ ಒಂದು ಅಂತರ್ರಾಷ್ಟ್ರೀಯ ವಿಚಾರ ಸಂಕಿರಣವನ್ನು ಏರ್ಪಡಿಸಲಿದ್ದು ಬಿಜೆಪಿ ಮುಖಂಡ ಮುರಳೀ ಮನೋಹರ ಜೋಷಿಯವರನ್ನು ಇದಕ್ಕೆ ನಿರ್ದೇಶಕರನ್ನಾಗಿ ನೇಮಕ ಮಾಡಿದೆ. ಈ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದರೂ ಕಳೆದ ಎರಡು ವರ್ಷಗಳಿಂದ ತನ್ನ ವಿಭಾಗದೊಡನೆ ಯಾವುದೇ ಶೈಕ್ಷಣಿಕ ಸಂಬಂಧವನ್ನು ಜೋಷಿಯವರು ಇರಿಸಿಕೊಂಡಿಲ್ಲ.

ಭಾರತದ ಪ್ರಮುಖ ವೈಜ್ಞಾನಿಕ ಸಂಸ್ಥೆಗಳಲ್ಲೊಂದಾದ ಹಾಗೂ ಪ್ರೊ. ಮೇಘನಾದ ಸಾಹಾರವರ ಹೆಸರು ಹೊತ್ತಿರುವ ಸಾಹಾ ನ್ಯೂಕ್ಲಿಯರ್ ಭೌತಶಾಸ್ತ್ರ ಸಂಸ್ಥೆಯ ವಿಜ್ಞಾನಿಗಳು ಈ ನೇಮಕವನ್ನು ಪ್ರತಿಭಟಿಸಿ ಅಧ್ಯಾಪಕ ವೃಂದಕ್ಕೆ ಒಂದು ಬಹಿರಂಗ ಪತ್ರ ಬರೆದಿದ್ದಾರೆ. "ಅಯೋಧ್ಯೆಯಲ್ಲಿ ಇತ್ತೀಚೆಗೆ ನಡೆದ ಗೂಂಡಾಕೃತ್ಯಗಳಿಗೆ ಧರ್ಮಾಂಧರು ಹಾಗೂ ಮೂಲಭೂತವಾದಿಗಳು ಪ್ರೋತ್ಸಾಹ, ಬೆಂಬಲ ನೀಡಿದ್ದರು. ಇವರಲ್ಲಿ ಜೋಷಿಯವರ ಹೆಸರು ಪ್ರಮುಖವಾದುದು. ಇಂತಹ ಒಬ್ಬ ವ್ಯಕ್ತಿಯನ್ನು ನಮ್ಮ ದೇಶದ ಒಬ್ಬ ಮಹಾನ್ ವಿಜ್ಞಾನಿಯ, ಎಲ್ಲಾ ರೀತಿಯ ಕಂದಾಚಾರ, ಧಾರ್ಮಿಕ ಸಂಕುಚಿತತೆಯನ್ನು ಸತತವಾಗಿ ವಿರೋಧಿಸುತ್ತಿದ್ದ ವಿಜ್ಞಾನಿಯ ಶತಾಬ್ದಿ ಆಚರಣೆಯ ಭಾಗವಾಗಿ ಹೂಡುವುದು ಭಾರತದ ಈ ಮಹಾನ್ ಸುಪುತ್ರನಿಗೆ ಮಾಡುವ ಅವಮಾನ" ಎಂದು ಈ ಬಹಿರಂಗ ಪತ್ರ ಹೇಳಿದೆ.

ಶ್ರೀಯುತ ಜೋಷಿ ದೇಶವನ್ನು ಮಧ್ಯಕಾಲದ ಅಂಧಕಾರ ಯುಗಕ್ಕೆ ಹಿಂದೊಯ್ಯಬಯಸುವ ವ್ಯಕ್ತಿ ಎಂಬುದು ಸ್ವಯಂವೇದ್ಯ. ಇಂತಹವರನ್ನು ವೈಜ್ಞಾನಿಕ ಮನೋಭಾವ ಬೆಳೆಸಲು ನೆರವಾಗಬೇಕಾಗಿರುವ ಒಂದು ವಿಚಾರಸಂಕಿರಣಕ್ಕೆ ನಿರ್ದೇಶಕರನ್ನಾಗಿ ಮಾಡಿರುವುದು ತಪ್ಪು ಎಂದು ಈ ವಿಜ್ಞಾನಿಗಳು ಪ್ರತಿಭಟಿಸಿದ್ದಾರೆ.

ಈ ನಡುವೆ ವಿಜ್ಞಾನಿಗಳ ಬಹಿರಂಗ ಪತ್ರಕ್ಕೆ ವ್ಯಾಪಕ ಸ್ಪಂದನೆ ದೊರೆತಿದೆ ಎಂದು ತಿಳಿದುಬಂದಿದೆ. ವೈಜ್ಞಾನಿಕ ಕೈಗಾರಿಕಾ ಸಂಶೋಧನಾ ಮಂಡಳಿ(ಸಿಎಸ್‌ಐಆರ್)ನ ಮಹಾ ನಿರ್ದೇಶಕ ಪ್ರೊ.ಎಸ್.ಕೆ. ಜೋಷಿ, ಟಾಟಾ ಸಂಶೋಧನಾ ಸಂಸ್ಥೆ(ಟಿಐಎಫ್‌ಆರ್) ಪ್ರೊ.ಗೋವಿಂದ ಸ್ವರೂಪ್, ಹಾಗೂ ಖ್ಯಾತ ವಿಜ್ಞಾನಿ ಪ್ರೊ. ಎಂ.ಜಿ.ಕೆ.ಮೆನನ್ ಈ ನೇಮಕವನ್ನು ಪ್ರತಿಭಟಿಸಿದ್ದಾರೆ.

(ಐ.ಎನ್.ಎಸ್)

ಆಹಾ! ಎಂತಹ ಆಡಳಿತ 'ದಕ್ಷತೆ'!

ಡಿಸೆಂಬರ್ 6, 1992ರಂದು ಬಾಬ್ರಿ ಮಸೀದಿ ಧ್ವಂಸ ಮಾಡಲು, ನಂತರ ಮುಸ್ಲಿಂ ಮನೆಗಳಿಗೆ ಕೊಳ್ಳಿಯಿಡಲು ಅವಕಾಶ ನೀಡಿದ ಅಯೋಧ್ಯೆಯ 'ದಕ್ಷ' ಆಡಳಿತ ಈಗ ಆ ದಿನ ಕರಸೇವಕರ ಮತಾಂಧತೆಗೆ ಬಲಿಯಾದ ತಮ್ಮ ಮನೆಗಳನ್ನು ದೆವರು ಸುರಿಸಿ ಕಟ್ಟಿಕೊಂಡ 270 ಕುಟುಂಬಗಳಿಗೆ 1986ರ ಯುಪಿ ವಿಶೇಷ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಕಾನೂನಿನ ಪ್ರಕಾರ ನೋಟೀಸು ನೀಡಿದೆ - ದಂಡ ಕಟ್ಟಿ ಇಲ್ಲವೆ ಮನೆ ಕೆಡವುತ್ತೇವೆ ಎಂದು ದೆದರಿಸಿದೆ. ಎಂತಹ 'ದಕ್ಷತೆ' ಅಲ್ಲವೇ? ಅತ್ತ ವಿವಾದಗ್ರಸ್ತ ಪ್ರದೇಶದ ಸ್ಥಾನಮಾನದ ಬಗ್ಗೆ ಇನ್ನೂ ನಿರ್ದಿಷ್ಟ ತೀರ್ಮಾನಕ್ಕೆ ಬರದಿದ್ದರೂ "ತಾತ್ಕಾಲಿಕ" ದೇವಸ್ಥಾನದ ಕೆಲಸವನ್ನು ಅಸಮಾನ್ಯ ಉತ್ಸಾಹದಿಂದ ಕೈಗೆತ್ತಿಕೊಂಡಿರುವ ಅಯೋಧ್ಯಾ ಪಟ್ಟಣದ ಆಡಳಿತದ 'ದಕ್ಷತೆ' ಇದಕ್ಕೆ ಅನುರೂಪವಾಗಿಯೇ ಇದೆಯಲ್ಲವೇ!

ಇವೆಲ್ಲಾ ಕ್ರಮ ಕೈಗೊಂಡಿರುವುದು ಉತ್ತರ ಪ್ರದೇಶದಲ್ಲಿ ರಾಷ್ಟ್ರಪತಿ ಆಡಳಿತ ತಂದ ಮೇಲೆ. 'ಸಂಘಪರಿವಾರ'ದ ರಾಜಕೀಯಕ್ಕೆ ತನ್ನ ವಿರೋಧವಿದೆಯೆನ್ನುವ ಆಳುವ ಪಕ್ಷಕ್ಕೆ ಈ ರೀತಿ 'ಹಿಂದುತ್ವ' ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳಲು ನಾಚಿಕೆಯಾಗುವುದಿಲ್ಲವೇ?



ಭಾರತ್ ಬಂದ್ ಘೋಷಣೆ ದೇಶದಲ್ಲೆಲ್ಲಾ ಮೊಳಗಲಿ

ಸಿಐಟಿಯು ಮೇ ದಿನದ ಕರೆ

ಮೇ ದಿನ 1993 ಭಾರತದ ಸಾರ್ವಭೌಮತೆ ಸರಕಾರದ ಆರ್ಥಿಕ ನೀತಿಗಳಿಂದ ಬಂದಿರುವ ಅಪಾಯ ಹಾಗೂ ಭಾರತದ ಐಕ್ಯತೆಗೆ ಕೋಮುವಾದಿಗಳಿಂದ ಬಂದಿರುವ ಅಪಾಯ ಇವೆರಡರ ವಿರುದ್ಧವೂ ಒಂದಾಗಿ ಹೋರಾಡಿ ಎಂದು ಕಾರ್ಮಿಕ ವರ್ಗ, ಇತರ ದುಡಿಯುವ ಜನಗಳು ಹಾಗೂ ದೇಶಪ್ರೇಮಿ ಜನಗಳಿಗೆ ಸಮರ ಘೋಷ ನೀಡಲಿ. ಸಾಮ್ರಾಜ್ಯಶಾಹಿಗಳ ದುಷ್ಟ ತಂತ್ರಗಳನ್ನು, ಕೋಮುವಾದಿ ಶಕ್ತಿಗಳ ಕರಾಳ ಶಕ್ತಿಗಳನ್ನು ಸೋಲಿಸಿ ಒಂದು ಸ್ವಾವಲಂಬೀ ಆರ್ಥಿಕದ ಮೇಲೆ ನಿಂತ ಜಾತ್ಯಾತೀತ, ಪ್ರಜಾಪ್ರಭುತ್ವ ಭಾರತವನ್ನು ರಕ್ಷಿಸಿಕೊಳ್ಳೋಣ ಎಂದು ಸಿಐಟಿಯು ತನ್ನ ಮೇ ದಿನದ ಪ್ರಣಾಳಿಕೆಯಲ್ಲಿ ಭಾರತದ ದುಡಿಯುವ ಜನಗಳಿಗೆ ಕರೆ ನೀಡಿದೆ.

ಕಳೆದ ಮೇ ದಿನದಂದು ಇದುವರೆಗಿನ ಬೆಳವಣಿಗೆಗಳ ಅವಲೋಕನ ಮಾಡುತ್ತಾ ಸಿಐಟಿಯು ಮೇ ದಿನ ಪ್ರಣಾಳಿಕೆ ಅಂತರ್ರಾಷ್ಟ್ರೀಯ ರಂಗದಲ್ಲಿ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ.ಕ್ರಿಸ್ ಹನಿಯವರ ಕೊಲೆಯನ್ನು ಬಲವಾಗಿ ಖಂಡಿಸಿದೆ. ಒಂದು ಸ್ವತಂತ್ರ, ಜನಾಂಗ ಭೇದವಿಲ್ಲದ ಪ್ರಜಾಪ್ರಭುತ್ವ ದಕ್ಷಿಣ ಆಫ್ರಿಕಾದ ಸ್ಥಾಪನೆಗಾಗಿ ಅಲ್ಲಿಯ ಕಾರ್ಮಿಕ ವರ್ಗ ಹಾಗೂ ಜನತೆಯ ವೀರ ಹೋರಾಟ ಬೇಗನೇ ಯಶಸ್ವಿಯಾಗಲಿ ಎಂದು ಹಾರೈಸಿದೆ. ಅಮೇರಿಕಾ, ಜರ್ಮನಿ ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳು ಯುಗೋಸ್ಲಾವಿಯಾವನ್ನು ತುಂಡರಿಸಿಹಾಕಲು ಉದ್ಯುಕ್ತವಾಗಿದೆ ಎಂದು ಖಂಡಿಸಿದೆ. ಹಿಂದಿನ ಯುಗೋಸ್ಲಾವಿಯಾದ ದುಡಿಯುವ ವರ್ಗ ಈ ಪಿತೂರಿಗಳನ್ನು ಸೋಲಿಸಬೇಕುಎಂದು ಸಿಐಟಿಯು ಕರೆ ನೀಡಿದೆ.

ಭಾರತದ ಕಳೆದ ಒಂದು ವರ್ಷದ ಬೆಳವಣಿಗೆಗಳ ಅವಲೋಕನ ಮಾಡುತ್ತಾ ಕಾರ್ಮಿಕ ವರ್ಗದ ಕಾರ್ಯಾಚರಣೆಗಳನ್ನು ನೆನಪಿಸಿಕೊಳ್ಳುತ್ತಾ ಏಪ್ರಿಲ್ 15ರ [illegible] ದೇಶದ ಕಾರ್ಯಕ್ರಮಗಳನ್ನು ಜ್ಞಾರಿಗೆ ಇತರೆಲ್ಲಾ [illegible] ಹಿಕ ಸಂಘಟನೆಗಳೊಡಗೂಡಿ ಐಕ್ಯ ಕಾರ್ಯಾಚ[illegible] ಯುವುದಾಗಿ ಈ ಮೇ ದಿನ ಭಾರತದ ಕಾರ್ಮಿ[illegible] ಮಾಡಬೇಕು, ದೇಶದ ಪ್ರತಿಯೊಂದು ಕಾರ್ಖಾ[illegible] ಕಚೇರಿ, ಸಂಸ್ಥೆ, ಕಾರ್ಯಾಲಯದಿಂದ ಭಾರತ್ [illegible] ಕೈಗಾರಿಕಾ ಮುಷ್ಕರದ ಘೋಷಣೆ ಮೊಳಗ[illegible] ಸಿಐಟಿಯುವಿನ 1993ರ ಮೇ ದಿನ ಪ್ರ[illegible] ಸಿದೆ.

ಭಾರತ ದೇಶದ ನೆತ್ತಿಯ ಮೇಲೆ ಕತ್ತಿ ತೂಗಾಡುತ್ತಿದೆ. ಭಾರತದ ರೈತರನ್ನು, ಕೂಲಿಕಾರರನ್ನು ಕೈಗಾರಿಕೆಗಳನ್ನು, ಕಾರ್ಮಿಕರನ್ನು, ಬ್ಯಾಂಕ್, ವಿಮೆ ಮೊದಲಾದ ಉದ್ದಿಮೆಗಳನ್ನು, ಕೊನೆಗೆ ಭಾರತದ ಜನರ ಸ್ವಯಮಾಡಳಿತದ ಪರಮರೂಪವಾದ ಸಂಸತ್ತಿನ ಅಧಿಕಾರಗಳನ್ನು ಕತ್ತರಿಸುವ ಕತ್ತಿ ತೂಗಾಡುತ್ತಿದೆ ಎಲ್ಲರ ನೆತ್ತಿಯ ಮೇಲೆ. ಯಾವಾಗಳಿಗೆಯಲ್ಲಿ ಬೀಳುವುದೋ ಎಂಬ ಆತಂಕ ಮೂಡಿದೆ ಬಲ್ಲವರಿಗೆ. ಉಳಿದರಿಗೆ ಈ ಕತ್ತಿಯ ಪರಿವೆಯೇ ಇಲ್ಲ. ಹೇಗಿರಲು ಸಾಧ್ಯ? ಭಾರತದ ಅಸಂಖ್ಯಾತ ಅನಕ್ಷರಸ್ಥ, ಅಕ್ಷರಸ್ಥರಿಗೂ ಕೂಡ - ಗ್ಯಾಟ್(GATT) ಟ್ರಿಪ್ಸ್(TRIPS) ಟ್ರಿಮ್ಸ್(TRIMS) ಡಂಕೆಲ್, ಗ್ಯಾಟ್ಸ್(GATS) ಇತ್ಯಾದಿಗಳು ನಮ್ಮ ಬೆನ್ನನ್ನು ಇರಿಯುವ ಕತ್ತಿಗಳೆಂದು ತಿಳಿಯುವುದು ಹೇಗೆ ಸಾಧ್ಯ? ಅದನ್ನು ಸಾಧ್ಯ ಮಾಡಿಸುವ ದಾರಿಯಲ್ಲೊಂದು ಲೇಖನ ಮಾಲೆ ಇದೋ ಇಲ್ಲಿದೆ. ಉಪಯೋಗಿಸಿ. ನಮ್ಮ ಬಾಯ್ಮಾತಿನ ಪ್ರಚಾರ ಎಲ್ಲ ಅಬ್ಬರದ ಧ್ವನಿಗಳನ್ನು ಓಮ್ಮೆಟ್ಟಿಸಲಿ:

ಗ್ಯಾಟ್ - ಏನದು?

ಗ್ಯಾಟ್ ಎಂಬುದು ನಾವೀಗ ಐಎಂಎಫ್-ವಿಶ್ವಬ್ಯಾಂಕ್ ಎಂಬ ಪದಗಳಂತೆ ಪ್ರತಿ ದಿನ ಕೇಳುವ ಪದ. ದುಡಿಯುವ ಜನಗಳಿಗೆ ಈ ಪದಗಳನ್ನು ಕೇಳಿದರೆ ಮೈ ಉರಿಯುವಂತಾಗುತ್ತದೆ. ಏಕೆಂದರೆ ಅವರ ಮೇಲೆ ಇತ್ತೀಚೆಗೆ ಬಿದ್ದಿರುವ ಬೀಳಲಿರುವ ಹೊರೆಗಳ ಮೂಲ ನಮ್ಮ ಘನ ಸರಕಾರ ಈ ಅಂತರಾಷ್ಟ್ರೀಯ ಸಂಘಟನೆಗಳಿಗೆ ಸಾಷ್ಟಾಂಗ ನಮಸ್ಕಾರ ಹಾಕುತ್ತಿರುವುದರ ದುಷ್ಫಲ.

ಗ್ಯಾಟ್(GATT) ಅಂದರೆ 'ಸುಂಕ ಪಟ್ಟಿಗಳು ಹಾಗೂ ವ್ಯಾಪಾರ ಕುರಿತಾದ ಸಾರ್ವತ್ರಿಕ ಒಪ್ಪಂದ' ಎಂಬರ್ಥದ ಇಂಗ್ಲೀಷ್ ಪದಗುಚ್ಛಗಳ ಸಂಕ್ಷಿಪ್ತ ರೂಪ. ವಿಶ್ವ ಬ್ಯಾಂಕ್ ಹಾಗೂ ಐಎಂಎಫ್‌ನಂತೆ ಎರಡನೇ ಮಹಾಯುದ್ಧದಲ್ಲಿ ಸಾಮ್ರಾಜ್ಯಶಾಹಿ ದೇಶಗಳು ದುರ್ಬಲಗೊಂಡ ಹಿನ್ನೆಲೆಯಲ್ಲಿ ಹುಟ್ಟಿದ ಸಂಘಟನೆ ಇದು. ಐಎಂಎಫ್, ವಿಶ್ವ ಬ್ಯಾಂಕ್‌ಗಳಂತೆ ಇದೊಂದು ಶಾಶ್ವತ ಸಂಸ್ಥೆಯುಲ್ಲ. ವಿಶ್ವಸಂಸ್ಥೆ ಹಾಗೂ ಅದರ ಅಂಗ ಸಂಸ್ಥೆಗಳಂತಹ ಅಂತರ್ರಾಷ್ಟ್ರೀಯ ಸಂಘಟನೆಯೂ ಅಲ್ಲ. ಅಂತರ್ರಾಷ್ಟ್ರೀಯ ವ್ಯಾಪಾರ, ಇದಕ್ಕೆ ಸಂಬಂಧಪಟ್ಟಂತೆ ಸುಂಕದ ದರಗಳು ಎಷ್ಟಿರಬೇಕು, ಹೇಗಿರಬೇಕು ಎಂಬ ಬಗ್ಗೆ ಒಂದು ತಾತ್ಕಾಲಿಕ ಒಪ್ಪಂದ ಎಂದು ಇದು ಆರಂಭವಾಗಿತ್ತು. 'ಅಂತರ್ರಾಷ್ಟ್ರೀಯ ವ್ಯಾಪಾರ ಕಚೇರಿ' ಆರಂಭವಾಗುವವರೆಗೆ ಇದು ಜ್ಯಾರಿಯುಲ್ಲಿರುತ್ತದೆ ಎಂದು ಹೇಳಲಾಗಿತ್ತು. ಆದರೆ ಈಗ 45 ವರ್ಷಗಳ ನಂತರವೂ ಈ "ತಾತ್ಕಾಲಿಕ ಒಪ್ಪಂದ" ಶಾಶ್ವತ ಸಂಘಟನೆಯ ರೂಪ ಪಡೆದಿಲ್ಲ. ಆದರೂ ತನ್ನ ಇತರ ಎರಡು ಸಾಮ್ರಾಜ್ಯಶಾಹಿ-ಪರ ಮಿತ್ರ ಸಂಸ್ಥೆಗಳಂತೆ ಮೂರನೇ ಜಗತ್ತಿನ ಬಡ ದೇಶಗಳ ಹಿತಾಸಕ್ತಿಗಳನ್ನು ಕಡೆಗಣಿಸಿ ಶ್ರೀಮಂತ ಬಂಡವಾಳಶಾಹೀ ದೇಶಗಳ ಹಿತಾಸಕ್ತಿಗಳನ್ನು ಕಾಪಾಡುವುದರಲ್ಲಿ ಈ 'ತಾತ್ಕಾಲಿಕ' ರೂಪ ಅದಕ್ಕೇನೂ ಅಡಚಣೆಯಾಗಿಲ್ಲ. ಬಹುಶಃ ಅನುಕೂಲವೇ ಆಗಿದೆ. ಏಕೆಂದರೆ ವಿಶ್ವಸಂಸ್ಥೆ ಅಥವಾ ಅದರ ಅಂಗ ಸಂಸ್ಥೆಗಳಲ್ಲಿ ನಡೆದಂತೆ ಅಂತರ್ರಾಷ್ಟ್ರೀಯ ಪ್ರತಿನಿಧಿಗಳ ಬಹಿರಂಗ ಚರ್ಚೆ ನಿರ್ಣಾಯಕವಾಗಿರುವುದಿಲ್ಲ. ಗ್ಯಾಟ್‌ನ ಮಹಾನಿರ್ದೇಶಕರ ಕಚೇರಿಯುಲ್ಲಿ ನಡೆಯುವ 'ಸಮಾಲೋಚನೆ'ಗಳು ಒಟ್ಟು ಮಾತುಕತೆಗಳ ಮುಖ್ಯ ಆಧಾರವಾಗುತ್ತವೆ. ಆದರೆ ಇಂತಹ ಮಹತ್ವದ 'ಸಮಾಲೋಚನೆ'ಗಳಿಗೆ ಎಲ್ಲರಿಗೂ ಪ್ರವೇಶವಿರುವುದಿಲ್ಲ. "ಆಹ್ವಾನಿತರಿಗೆ" ಮಾತ್ರ. ಇಂತಹ ವ್ಯವಸ್ಥೆಯಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅಭಿಪ್ರಾಯಗಳಿಗೆ, ಅಗತ್ಯಗಳಿಗೆ ಮನ್ನಣೆ ದೊರೆಯಲು ಅವಕಾಶವಾಗುವುದಿಲ್ಲ.

1948ರಲ್ಲಿ 23 ಪಾಶ್ಚಿಮಾತ್ಯ ದೇಶಗಳು ಈ 'ತಾತ್ಕಾಲಿಕ' ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಗ್ಯಾಟ್ ಅಸ್ತಿತ್ವಕ್ಕೆ ಬಂತು. ಎರಡನೇ ಮಹಾಯುದ್ಧದಿಂದ ದುರ್ಬಲಗೊಂಡ ಮುಂದುವರಿದ ಪಾಶ್ಚಿಮಾತ್ಯ ದೇಶಗಳು ತಂತಮ್ಮ ದೇಶಗಳ ಉದ್ದಿಮೆಗಳ ರಕ್ಷಣೆಗಾಗಿ ಬೇರೆ ದೇಶಗಳ ಸರಕುಗಳ ಮೇಲೆ ವಿಪರೀತ ಸುಂಕಗಳನ್ನು ಹೇರಿ ಈ ದೇಶಗಳ ನಡುವೆ ಸರಾಗವಾದ ವ್ಯಾಪಾರ ವಹಿವಾಟುಗಳಿಗೆ ತೊಂದರೆಯಾಗದಿರಲಿ ಎಂದು ಪಾಶ್ಚಿಮಾತ್ಯ ಬಂಡವಾಳಶಾಹಿಗಳ ಪ್ರತಿನಿಧಿಗಳು 1947ರಲ್ಲಿ ಜಿನೇವಾದಲ್ಲಿ ಆರಂಭಿಸಿದ ಮಾತುಕತೆಗಳ ಆಧಾರದ ಮೇಲೆ ಈ ಒಪ್ಪಂದ ಆರಂಭವಾಯಿತು.

ಆ ನಂತರ 1964-67ರಲ್ಲಿ ಆರನೇ ಸುತ್ತಿನ ಮಾತುಕತೆಗಳು ಆರಂಭವಾಗುವವರೆಗೆ ಇದು ಕೇವಲ ಶ್ರೀಮಂತ ದೇಶಗಳಿಗಷ್ಟೇ ಮೀಸಲಾದ ವಿಶೇಷ ಕ್ಲಬ್‌ನಂತೆಯೇ ವರ್ತಿಸುತ್ತಿತ್ತು. ಇದರ ಮೊದಲಿನ ಐದು ಸುತ್ತುಗಳ ಮಾತುಕತೆಗಳ ಪರಿಣಾಮವಾಗಿ ವ್ಯಾಪಾರ ಸುಂಕಗಳು ಇಳಿದು ಅಂತರಾಷ್ಟ್ರೀಯ ವ್ಯಾಪಾರ ಉತ್ಕರ್ಷ ಹೊಂದಿದ್ದರೂ ಇದರಿಂದ ಬಡದೇಶಗಳಿಗೆ ಏನೂ ಪ್ರಯೋಜನವಾಗಿರಲಿಲ್ಲ.

1973-79ರಲ್ಲಿ ಜಿನೇವಾದಲ್ಲಿ 'ಟೋಕಿಯೋ ಸುತ್ತಿನ ಮಾತುಕತೆಗಳು' ಎಂದು ಕರೆಯಲ್ಪಡುವ ಮಾತುಕತೆಗಳು ನಡೆದವು. ಇದರಲ್ಲಿ 99 ದೇಶಗಳು ಭಾಗವಹಿಸಿದ್ದವು.

1986ರಿಂದ ನಡೆಯುತ್ತಿರುವ ಅಂತರ್ರಾಷ್ಟ್ರೀಯ ವ್ಯಾಪಾರ ಹಾಗೂ ಸುಂಕಗಳ ಕುರಿತಾದ ಮಾತುಕತೆಗಳು(ಇವನ್ನೂ ಉರುಗ್ವೇ ಸುತ್ತಿನ ಮಾತುಕತೆಗಳು ಎನ್ನುತ್ತಾರೆ) ಅತ್ಯಂತ ವ್ಯಾಪಕವಾದ ಮಾತುಕತೆಗಳು ಎನ್ನಲಾಗುತ್ತಿದೆ 108 ದೇಶಗಳು ಭಾಗವಹಿಸುತ್ತಿರುವ ಈ ಮಾತುಕತೆಗಳಲ್ಲಿ ಬಡದೇಶಗಳ ಹಿತಾಸಕ್ತಿಗಳನ್ನು, ಒತ್ತಾಯಗಳನ್ನು ಮೂಲೆಗೊತ್ತುವ ಪ್ರಯತ್ನ ನಡೆಯುತ್ತಿದೆ. ಗ್ಯಾಟ್‌ನ ಈಗಿನ ಮಹಾನಿರ್ದೇಶಕ ಅರ್ಥರ್ ಡಂಕೆಲ್ ಈ ಮಾತುಕತೆಗಳಲ್ಲಿ ಇಟ್ಟಿರುವ ಪ್ರಸ್ತಾಪಗಳು ಶ್ರೀಮಂತ ದೇಶಗಳ ಪರವಾದ ಇತ್ಯರ್ಥ್ಯವನ್ನು ಹೇರಲು ಹೆಣಗುತ್ತಿವೆ.

ಬಡದೇಶಗಳ ಪ್ರತಿನಿಧಿಗಳು ಮೊತ್ತ ಮೊದಲು ಭಾಗವಹಿಸಿದ 1964-67ರ 'ಕೆನಡಿ ಸುತ್ತಿನ' ಮಾತುಕತೆಗಳಲ್ಲಿ ಬಡದೇಶಗಳ ರಫ್ತುಗಳಿಗೆ ಹೊಸ ತಡೆಗಳನ್ನು ಹಾಕಬಾರದು, ಉಷ್ಣ ವಲಯದ ಉತ್ಪನ್ನಗಳಿಗೆ ಸುಂಕ ಹಾಕಬಾರದು, ಕೃಷಿ, ಗಣಿಗಾರಿಕೆ ಉತ್ಪನ್ನಗಳು ಮೊದಲಾದವುಗಳ ಮೇಲಿನ ಸುಂಕಗಳನ್ನು ತೆಗೆಯಬೇಕು, ಬಡ ದೇಶಗಳ ಉತ್ಪಾದನೆಗಳ ಮೇಲಿನ ಸುಂಕಗಳನ್ನು ಇಳಿಸಬೇಕು ಎಂಬ ಭರವಸೆ ಕೊಟ್ಟಿದ್ದರೂ ಅದು ಜಾರಿಯಾಗಲಿಲ್ಲ. ಅಷ್ಟೇ ಅಲ್ಲ, ಇದಕ್ಕೆ ವಿರುದ್ಧವಾಗಿ 1986ರಲ್ಲಿ ಇತ್ತೀಚಿನ ಸುತ್ತಿನ ಮಾತುಕತೆಗಳು ಆರಂಭವಾದಾಗ ಅದುವರೆಗೆ ಗ್ಯಾಟ್ ಮಾತುಕತೆಗಳ ವ್ಯಾಪ್ತಿಯಲ್ಲಿರದ

ಗ್ಯಾಟ್ 'ಸುತ್ತು'ಗಳು

ವರ್ಷ	ಸ್ಥಳ	ಭಾಗವಹಿಸಿದ ದೇಶಗಳು
1947	ಜಿನೇವಾ	23
1949	ಅನೇಸಿ	13
1951	ಟೋರ್ಕ್ವೆ	38
1956	ಜಿನೇವಾ	26
1960-61	ಜಿನೇವಾ (ಡಿಲಿಯನ್ ಸುತ್ತು)	26
1964-67	ಜಿನೇವಾ (ಕೆನಡಿ ಸುತ್ತು)	62
1973-79	ಜಿನೇವಾ (ಟೋಕಿಯೋ ಸುತ್ತು)	99
1986ರಿಂದ	ಜಿನೇವಾ (ಉರುಗ್ವೇ ಸುತ್ತು)	108

ಮಾರಿ, ಹೆಮ್ಮಾರಿ ಭಾರತವನ್ನು ಕಾಡುತ್ತಿರುವ ಡಂಕೆಲ್ ಮಹಾಮಾರಿ

ಜಿ.ಎನ್. ನಾಗರಾಜ್

ಸಪ್ತ ಸಾಗರದಾಚೆಯಿಂದ ಚಾಚಿದೊಂದು ಕೈ, ಆ ಕೈಯಲ್ಲೊಂದು ಚಾವಟಿ, ಯಾವುದೀ ಕೈ, ಯಾವುದೀ ಚಾವಟಿ ಎಲ್ಲರೂ ಕೇಳುತ್ತಿದ್ದಾರೆ ಯಾವುದೀ ಕೈ? ಯಾವುದೀ ಚಾವಟಿ? ತಮ್ಮ ಬೆನ್ನ ಮೇಲೆ ಎದ್ದ ಬಾಸುಂಡೆಗಳ ನೋವಿನಿಂದ ಚೀತ್ಕರಿಸುತ್ತಾ ಕೇಳುತ್ತಿದ್ದಾರೆ. ಮತ್ತೆ ಮತ್ತೆ ಕೈ ಆಡುತ್ತಲೇ ಇದೆ, ಹೆಚ್ಚು ಹೆಚ್ಚು ಬಿರುಸಾಗುತ್ತಲಿದೆ. ನೋಡ ನೋಡುತ್ತಿದ್ದಂತೆ ಆ ಕೈಯ ಜೊತೆಗೆ ಕೈಗಳು ಸೇರುತ್ತಲಿವೆ ಒಂದು ಕೈಯಲ್ಲಿ ಒಂದೊಂದು ಆಯುಧ. ಹೆಚ್ಚುತ್ತಿರುವ ಚೀತ್ಕಾರ, ಕೂಗಾಟ. ನಮ್ಮ ಕಿವಿಗಳಲ್ಲಿ ಮೊರೆಯುತ್ತಿರುವ ನಮ್ಮದೇ ಚೀರಾಟ ಕೇಳುವ ಕಿವಿಗಳೆಲ್ಲಿ? ಎಲ್ಲ ಚಾಚಿ ಹಿಡಿದ ಕೈಗಳೇ! ಕಿವಿಗಳೆಲ್ಲಿ?

ಯಾವುದೀ ಕೈ? ಯಾವುದೀ ಚಾವಟಿ?

ಇಲ್ಲಿಯವರೆಗೆ ಹೆಸರಿಲ್ಲದ ಈ ಕೈಯ ಮೇಲೆ ಮೂಡಿದೆ ಹೆಸರೊಂದು. ಡಂಕೆಲ್. ಡಂಕೆಲ್, ಯಾರಪ್ಪಾ ಈ ಸೈತಾನ. ಧುತ್ತೆಂದು ಎಲ್ಲಿಂದ ಉದಿಸಿದ. ನೋವು ಚೀರಾಟಗಳ ನಡುವೆ ಮೂಡಿದ ಬೆರಗು ನಮ್ಮ ಜನಕ್ಕೆ ಹಳ್ಳಿ ಹಳ್ಳಿಗಳ ಜನಕ್ಕೆ ಜರ್ಮನಿಯಲ್ಲಿ ಹುಟ್ಟಿದ ಇವನು ಸೈತಾನನಾಗಿ ಬೆಳೆದದ್ದು ಗ್ಯಾಟ್(GATT) ಎಂಬ ಕಣದಲ್ಲಿ. ಅವನ ಕೈಯಿಂದ ಬಂದ ಡಂಕೆಲ್ ಪ್ರಸ್ತಾವಗಳೆಂಬುವು ಇಂದು ಪ್ರಪಂಚದೆಲ್ಲ ಬಡದೇಶಗಳ ಜನರ ಕತ್ತಿಗೆ ಉರುಳಾಗಿ ಪರಿಣಮಿಸುತ್ತಿವೆ.

ಇವುಗಳಲ್ಲಿ ಇಂದು, ಸಾವಿರಾರು ವರ್ಷಗಳಿಂದ ನಮ್ಮ ರೈತರು ಬಿತ್ತಿ ಬೆಳೆದ ಬೀಜಗಳನ್ನು ಇದು ನಿಮ್ಮದಲ್ಲವೆಂದು ಕಿತ್ತುಕೊಳ್ಳಲೆತ್ನಿಸುತ್ತಿರುವ ಬೀಜಾಪಹರಣದ ಬಗ್ಗೆ ಬಹಳ ಜನಕ್ಕೆ ಗೊತ್ತಾಗಿದೆ. ಡಂಕೆಲ್ ಎಂದರೆ ಬೀಜ ಮಾರಿ ಎಂದಷ್ಟೇ ಎಂಬಂತೆಯೂ ತಪ್ಪುಕಲ್ಪನೆ ಮೂಡಿದೆ. ನಂಜುಂಡಸ್ವಾಮಿಯುವರಂತಹ ನಾಯಕವರೇಣ್ಯರುಗಳು ಡಂಕೆಲ್ ಎಂಬುದೊಂದು ಸೈತಾನ ಎಂದು ರೈತರಿಗೆ ಗೊತ್ತು ಮಾಡಲು ಚಳುವಳಿ ನಡೆಸಿದ್ದಾರೆಯಾದರೂ ಡಂಕೆಲ್‌ನ ಇತರ ಮಾರಿ ಮುಖಗಳು-ಇನ… ಕ್ರೂರ ಮಾರಿಮುಖಗಳು ಜನರಿಗೆ ಪರಿ… ಯವಾಗದೆ ಹೋಗಿವೆ ಅಥವಾ ನಂಜುಂ… ಸ್ವಾಮಿಯಂತಹವರು ಜನರಿಂದ ಅದ… ಮುಚ್ಚಿಡಬಯಸುತ್ತಾರೆ. ಡಂಕೆಲ್‌ನ ಉಳಿ… ಮಾರಿ ಮುಖಗಳಲ್ಲಿ ಅನ್ನಮಾರಿ, ಆರೋ… ಮಾರಿ, ಹಣಮಾರಿ ಬುದ್ಧಿಮಾರಿ ಎಲ್ಲಕ್ಕಿ… ಮಿಗಿಲಾಗಿ ದೇಶಕ್ಕೆ ಮಾರಿಯಾದ ಮು… ಳಿವೆ.

ಅನ್ನಮಾರಿ

ಭಾರತ ಆಹಾರ ಉತ್ಪಾದನೆಯ… ಸ್ವಯಂಪೂರ್ಣವೆಂದು ಲೆಕ್ಕ ಆದರೆ ಒಂ… ಕಡೆ ಕೋಟ್ಯಾಂತರ ಹಸಿದ ಮಂದಿ ಅನ್ನ ಅ… ಎಂದು ಬಾಯ್ಬಿಡುತ್ತಿದ್ದಾರೆ. ಮತ್ತೊಂದು ಕ… ರೈತರಮನೆ, ಕಣಗಳಲ್ಲಿ ಭತ್ತವನ್ನು ಕೇಳುವ… ರಿಲ್ಲದೆ ಬಿದ್ದಿದೆ. ಸ್ವಾತಂತ್ರ್ಯ ಭಾರತದ ಸರಕಾ… ನಗರಗಳ ಕಾರ್ಮಿಕರಿಗೆ ಕೂಲಿಕಾರರಿಗೆ ಪ… ತರ ಅಥವಾ ರೇಷನ್ ಪದ್ಧತಿಯ ಮೂಲ… ಕುಟುಂಬದ ಸದಸ್ಯರಲ್ಲಿ ತಲಾವಾರು ಲೆ… ಮಾಡಿ ಪ್ರತಿ ವಾರ ಅಕ್ಕಿ ಗೋಧಿ, ಸಕ್ಕ… ಸೀಮೆ ಎಣ್ಣೆ ಕೊಡುತ್ತಿದ್ದಾರೆ. ಇತರ ನಗ… ಪಟ್ಟಣಗಳಿಗೆ, ಹಳ್ಳಿಗಳಿಗೆ ನಾಮ್‌ಕಾವಾ… ತಿಂಗಳಿಗೊಮ್ಮೆ ಅಕ್ಕಿ ಸಕ್ಕರೆ, ಗೋಧಿ ಕೊ… ತ್ತಿದ್ದಾರೆ. ಪೂರ್ಣ ಪ್ರಮಾಣದ ರೇಷನ್ ವ್ಯ… ಸ್ಥೆಯನ್ನು ಭಾರತದ ಎಲ್ಲಾ ಕಡೆಗಳಿಗೆ ಹ… ಪಟ್ಟಣ ಬೇಧವಿಲ್ಲದಂತೆ ವಿಸ್ತರಿಸಿ ಎಂ… ರೈತರ, ಕೃಷಿಕೂಲಿಕಾರರ ಕೇಳಿಕೆಯಿದೆ. ಅ… ಕ್ಕಾಗಿ ತೀವ್ರ ಹೋರಾಟ ನಡೆಸಿದ್ದಾರೆ. ಎಡ… ಕ್ಷಗಳ ನೇತೃತ್ವದ ಆಳ್ವಿಕೆ ಇರುವ ಪ.ಬಂಗಾ… ಕೇರಳ, ತ್ರಿಪುರಾಗಳಲ್ಲಿ ಇದನ್ನು ತಮ್ಮ… ಖರ್ಚಿನಲ್ಲಿ ಹಳ್ಳಿ ಹಳ್ಳಿಗಳಿಗೂ ವಿಸ್ತ… ವರ ಬದುಕನ್ನು ರಕ್ಷಿಸಿ ದೇಶಕ್ಕೆ ಮಾದ… ಯಾಗಿವೆ. ತಮಿಳುನಾಡು, ಆಂಧ್ರ, ಕರ್ನಾ… ಟಕಗಳಂತಹ ವಿರೋಧ ಪಕ್ಷಗಳ ಆ… ಇದ್ದ, ಇರುವ ರಾಜ್ಯಗಳಲ್ಲಿಯೂ ಸ್ವಲ್ಪ… ಟ್ಟಿಗೆ ಹಸಿರು ಕಾರ್ಡ್ ರೀತಿಯ ವ್ಯವಸ್ಥೆಗಳ… ಬಡವರಿಗೆ ಪ್ರಯೋಜನವಾಗಿವೆ. ಇಂತ… ವ್ಯವಸ್ಥೆಗಳಿಲ್ಲದ ರಾಜ್ಯಗಳಲ್ಲಿ ಬರಗಾಲವೋ… ನೆರೆಯೋ ಮತ್ತಾವುದೋ ಪ್ರಕೋಪವೋ…

ಆರೋಗ್ಯ ಮಾರಿ ಡಂಕೆಲ್

ಏಡ್ಸ್ 20ನೇ ಶತಮಾನದ ಭಯಂಕರ ವ್ಯಾಧಿ. ಇನ್ನೂ ಅದನ್ನು ಗುಣಪಡಿಸಬಹುದಾದ ಔಷಧಿ ಕಂಡುಹಿಡಿಯಲಾಗಿಲ್ಲ. ಭಾರತದಲ್ಲಿ ಈ ಶತಮಾನದ ಕೊನೆಯ ಹೊತ್ತಿಗೆ ಅಂದರೆ ಕ್ರಿ.ಶ. 2000 ದ ಹೊತ್ತಿಗೆ 50 ಲಕ್ಷ ಏಡ್ಸ್ ರೋಗಿಗಳಿರುತ್ತಾರೆ ಎಂದು ಅಂದಾಜು ಮಾಡಲಾಗಿದೆ. ಅಷ್ಟರಮಟ್ಟಿಗೆ ಏಡ್ಸ್ ಗುಣಪಡಿಸುವ ಔಷಧಿಯೂ ಬಹುಶಃ ಕಂಡು ಹಿಡಿಯಲ್ಪಟ್ಟಿರುತ್ತದೆ. ಆದರೂ ಭಾರತದ ಏಡ್ಸ್ ರೋಗಿಗಳು ಔಷಧಿ ದೊರಕದೆ ಪಟಪಟನೆ ಸಾಯುವ ಸಂಭವ ಹೆಚ್ಚು. ಏಕೀ ವಿಪರ್ಯಾಸ?

ಏಕೆಂದರೆ ಭಾರತ ಸರಕಾರ ಡಂಕೆಲ್ ಕರಡು ಪ್ರಸ್ತಾಪಗಳನ್ನು ಅಂಗೀಕರಿಸುವ ಹಾದಿಯಲ್ಲಿದೆ. ಇದನ್ನು ಅಂಗೀಕರಿಸಿದರೆ ನಮ್ಮ ಈಗಿನ ಭಾರತೀಯ ಪೇಟೆಂಟ್ ಕಾನೂನು(1970)ನಲ್ಲಿ ಬದಲಾವಣೆಗಳಾಗುತ್ತವೆ. ಹೆಚ್ಚೆನಮಟ್ಟಿಗೆ ಏಡ್ಸ್‌ಗೆ ಕಂಡುಹಿಡಿಯಲಾದ ಪೇಟೆಂಟನ್ನು ಬಹುರಾಷ್ಟ್ರೀಯ ಕಂಪೆನಿಯೊಂದು ಮಾಡಿಕೊಂಡಿರುತ್ತದೆ. ಅದಕ್ಕೆ ಅದು ಭಾರಿ ದುಬಾರಿ ಬೆಲೆ ಇರುವುದೂ ನಿಶ್ಚಿತ. ಡಂಕೆಲ್ ಪ್ರಸ್ತಾಪ ಹೊರಿಸುವ ಪೇಟೆಂಟ್ ಕಾನೂನುಗಳ ಪ್ರಕಾರ ಒಂದ ಬಾರಿ ಪೇಟೆಂಟ್ ಆದ ಔಷಧಿ ಬೇರೆ ಯಾರೂ ಉತ್ಪಾದಿಸುವಂತಿಲ್ಲ. ಭಾರತದ ಅಥವಾ ಬೇರೆ ಯಾವುದೇ ಕಂಪೆನಿ ಸ್ವತಂತ್ರವಾಗಿ ಅದನ್ನು ತಯಾರಿಸುವ ವಿಧಾನ ಕಂಡು ಹಿಡಿದರೂ ಕೂಡಾ.

ಜಗತ್ತಿನಲ್ಲೇ ಕಡಿಮೆ ಔಷಧಿ ಬೆಲೆ

ಇದೇನು ಡಂಕೆಲ್ ಬಗ್ಗೆ ಬೆದರಿಸುವ ತಂತ್ರವಲ್ಲ. ಈಗಿನ ಔಷಧಿ ಬೆಲೆಗಳನ್ನೇ ತೆಗೆದುಕೊಳ್ಳಿ, ಅಮೇರಿಕಾದಲ್ಲಿ ಭಾರತದಲ್ಲಿ ಬೆಲೆಗಳನ್ನು ಹೋಲಿಸೋಣ. ಐಸ್ ಬ್ಲಾಷ್ಟಿನ್ ಎಂಬ ಕ್ಯಾನ್ಸರ್‌ನ ಔಷಧಿಯ ಬೆಲೆ ಅಮೇರಿಕಾದಲ್ಲಿ ಭಾರತದ ಮುಪ್ಪಟ್ಟು. ಫ್ಲ್ಯುರೋಸೆಮ್ಮೈಡ್ ಎಂಬ ಔಷಧಿಯ ಬೆಲೆ ಅಮೇರಿಕದಲ್ಲಿ ಭಾರತದ ಬೆಲೆಯ 29 ಪಟ್ಟು. ವಿಶ್ವಸಂಸ್ಥೆ ಮಾಡಿದ ಅಧ್ಯಯನವೊಂದರ ಪ್ರಕಾರ ಇಂಗ್ಲೆಂಡಿನಲ್ಲಿ ಔಷಧಿಗಳ ಬೆಲೆ 6 ಪಟ್ಟಿಗಿಂತಲೂ ಹೆಚ್ಚು. ಅದೇ ಅಧ್ಯಯನದ ಪ್ರಕಾರ ರೋಶ್ ಎಂಬ ಬಹುರಾಷ್ಟ್ರೀಯ ಕಂಪನಿ 27.5 ದಶಲಕ್ಷ ಡಾಲರಿನಷ್ಟು ದುಬಾರಿ ಬೆಲೆ ಹೇರಿತು. ಇದು ವಿಕಸಿತ ದೇಶಗಳ ಕಥೆ. ಇದಕ್ಕೆ ಕಾರಣ ಈ ದೇಶಗಳಲ್ಲಿ ಜಾರಿಯುಲ್ಲಿರುವ 'ಪ್ಯಾರೀಸ್ ಒಪ್ಪಂದ'ಕ್ಕೆ ಅನುಗುಣವಾದ ಪೇಟೆಂಟ್ ಕಾ… ಧಿಯ ಪೇಟೆಂಟ್ ಹೊಂ… ಸ್ವಾಮ್ಯ ನೀಡುತ್ತದೆ. ಅ… ಕೊಂಡು ಸೂಪರ್ ಲಾಭ ಗ…

ಭಾರತದ ಪೇ… ಕಾನೂನು…

ಭಾರತದ ಪೇಟೆಂಟ್… ಇಂತಹ ಅವಕಾಶಗಳ ಮೇ… ಜನತೆಯ ಹಾಗೂ ರಾಷ್ಟ್ರೀಯ… ಆಗದಂತೆ ಸಂಶೋಧಕನ… ವ್ಯಕ್ತಿಯ ಕಂಪನಿಗಳ ಹಿತಾಸ… ದಂತೆ ಸಮತೋಲನವನ್ನು… ಕಾನೂನು ಕಾಯ್ದುಕೊಂಡಿ… ಕದಲ್ಲಿ ನಮ್ಮ ರಾಸಾಯನಿಕ ಕ… ರಿಕೆ ಹೆಚ್ಚಾಗಿ ಬೆಳೆದಿರಲಿಲ್ಲ. … ಬೆಲೆ ಜಗತ್ತಿನಲ್ಲೇ ಅತಿ ಹೆಚ್ಚು… ಪೇಟೆಂಟ್ ಕಾನೂನು ಬ…

ಪೇಟೆಂಟ್ ಎಂದರೇನು?

ಪೇಟೆಂಟ್ ಎಂದರೆ ಒಂದು ಹೊಸ ಉತ್ಪನ್ನ(ಯಂತ್ರವಾಗಿರಬಹುದು, ಔಷಧಿಯಾಗಿರಬಹುದು......) ಅಥವಾ ಒಂದು ಹೊಸ ಉತ್ಪಾದನಾ ವಿಧಾನವನ್ನು ಆವಿಷ್ಕಾರ(ಅಥವಾ ಪರಿಶೋಧಿಸಿದ) ಮಾಡಿದ ವ್ಯಕ್ತಿಗೆ ಸರಕಾರ ಕೊಡುವ ವಿಶೇಷ ಸವಲತ್ತು. ಇದರ ಪ್ರಕಾರ ಉಳಿದವರಿಗೆ ಒಂದು ನಿರ್ದಿಷ್ಟ ವರ್ಷಗಳವರೆಗೆ ಪೇಟೆಂಟ್ ಆದ ಉತ್ಪನ್ನ, ಉತ್ಪಾದನಾ ವಿಧಾನವನ್ನು, ಉತ್ಪಾದನೆಗೆ ಬಳಸುವ ಅಧಿಕಾರವಿರುವುದಿಲ್ಲ. ಇದು ಆವಿಷ್ಕಾರಕನ ಶ್ರಮಕ್ಕೆ ಪ್ರತಿಫಲ ಕೊಡುವ ಒಂದು ವಿಧಾನ.

ಭಾರತದ ಪೇಟೆಂಟ್ ಕಾನೂನು 197…

ಈ ಕಾನೂನು ಸ್ವತಂತ್ರ ಭಾರತದಲ್ಲಿ ಅಂಗೀಕರಿಸಲಾದ ಅತ್ಯಂತ ಪ್ರಮುಖ ಕಾನೂನು… ದಶಕಗಳ ಕಾಲ ಎರಡು ಕಾನೂನು ತಜ್ಞರ ಸಮಿತಿ, ಮೂರು ಮಸೂದೆಗಳ ಹಾಗೂ ಪಾರ್ಲಿ… ಸಮಿತಿಗಳ ಅಧ್ಯಯನ ಮತ್ತು ಚರ್ಚೆಯ ಮಂಥನದ ಫಲ ಈ ಕಾನೂನು. ಈ ಕಾನೂನು ಬ್ರಿ… ಗಳು ಹೇರಿದ್ದ 1911ರ ಹಳೇ ಪೇಟೆಂಟ್ ಕಾನೂನನ್ನು ಬದಲಾಯಿಸಿ ಬಂದದ್ದು. ಈ ಕಾನೂನಿ… ಈ ಕೆಳಗಿನಂತಿವೆ.

1. ಆಹಾರ, ಔಷಧಿ, ರಾಸಾಯನಿಕ ವಸ್ತುಗಳನ್ನು ಬಿಟ್ಟರೆ ಉಳಿದ ಎಲ್ಲಾ ರೀತಿಯ ಅ… ಪೇಟೆಂಟ್.
2. ಆಹಾರ, ಔಷಧಿ ರಾಸಾಯನಿಕ ವಸ್ತುಗಳಲ್ಲಿ ಉತ್ಪಾದನಾ ವಿಧಾನವನ್ನು ಮಾತ್ರ ಪೇಟೆ… ಈ ವಿಧಾನಗಳಿಗೆ ಪೇಟೆಂಟ್‌ನ ಅವಧಿ ಏಳು ವರ್ಷ.
3. ಅಣುಶಕ್ತಿ, ಕೃಷಿ, ತೋಟಗಾರಿಕೆಗೆ ಸಂಬಂಧಪಟ್ಟ ಆವಿಷ್ಕಾರಗಳಿಗೆ, ಸಂಶೋಧನೆಗಳಿಗೆ… ಮನ್ನಿಸಲಾಗುವುದಿಲ್ಲ.
4. ಪೇಟೆಂಟ್ ಹೊಂದಿರುವವನು ಭಾರತೀಯನಾಗಿರಲಿ ವಿದೇಶಿಯನಾಗಿರಲಿ, ಪೇಟೆಂಟ… ಉತ್ಪಾದನಾ ವಿಧಾನ ಬಳಸಿ ಭಾರತದಲ್ಲಿ ಉತ್ಪಾದನೆಯಲ್ಲಿ ತೊಡಗುವುದು ಕಡ್ಡಾಯ…
5. ಪೇಟೆಂಟ್ ಹೊಂದಿರುವವನು ಅದನ್ನು ಭಾರತದಲ್ಲಿ ಉತ್ಪಾದಿಸದೆ ಹೋದರೆ ನಿ… ಸರಕಾರ ಇನ್ನೊಂದು ವ್ಯಕ್ತಿಗೆ ಕಂಪನಿಗೆ ಆ ಉತ್ಪನ್ನ/ಉತ್ಪಾದನಾ ವಿಧಾನ ಬಳಸುವ ಅ…
6. ಆಹಾರ, ಔಷಧಿ ಹಾಗೂ ರಾಸಾಯನಿಕ ವಸ್ತುಗಳ ಪೇಟೆಂಟ್‌ಗಳನ್ನು ಮೂರು ವರ್ಷ… ಅಥವಾ ಉತ್ಪನ್ನದ ಬೆಲೆ ಹಾಗೂ ದೊರೆಯುವಿಕೆಯಲ್ಲಿ ಸಾರ್ವಜನಿಕ ಹಿತಕ್ಕೆ ವಿರುದ್ಧ… ಈ ಉತ್ಪಾದನಾ ವಿಧಾನವನ್ನು ಬೇರೆಯವರಿಗೆ ಕೊಡುವ ಅಧಿಕಾರ ಹೊಂದಿರುತ್ತದೆ.
7. ಪೇಟೆಂಟ್ ಹಕ್ಕನ್ನು ಬೇರೆಯವರು ಉಲ್ಲಂಘಿಸಿದಾಗ, ಅದಕ್ಕೆ ಬೇಕಾದ ಪುರಾವೆ ಕೊಟ್ಟು… ಹೊಣೆ ಪೇಟೆಂಟ್ ಹೊಂದಿರುವವನದ್ದು ಅಥವಾ ದೂರು ಸಲ್ಲಿಸುವವನದ್ದು.

ಮರಾವರೆ, ನೇಕಾರರು, ಇತರ ಕಸುಬುದಾ ರು ಮಾರುಕಟ್ಟೆಯು ಬರವನ್ನು ಎದುರಿಸ ಬೇಕಾದರೆ ಹಸಿವು, ಅನ್ನ ಎಂದು ಬಾಯಿಬಿಡುತ್ತಾ ಸಾಯುತ್ತಿದ್ದಾರೆ. ಅದು ಕಾಲಹಂಡಿಯಿರಲಿ, ಆಂಧ್ರದ ರಾಯಲಸೀಮಾ ಪ್ರದೇಶವಿರಲಿ, ಉ.ಪ್ರದೇಶದ ವಾರಣಾಸಿ ಇರಲಿ.

• ರೇಷನ್ ಪದ್ಧತಿಯ ನಾಶ

ಇಂತಹ ಸಂದರ್ಭದಲ್ಲಿ ಡಂಕೆಲ್ ಯೋಜನೆ ಹೇಳುತ್ತಾನೆ ದೇಶದೆಲ್ಲೆಡೆ ಯಾವುದೇ ರೀತಿಯ ಪಡಿತರ ಅಥವಾ ಸಾರ್ವಜನಿಕ ವಿತರಣಾ ವ್ಯವಸ್ಥೆಯೇ ಇರಬಾರದು. ಇದ್ದರೂ ದುರ್ಬಲ ಗಿರಿಜನ ಮುಂತಾದವರಿಗೆ ಪೋಷಕಾಂಶಗಳ ಕೊರತೆಯಿಂದ ನರಳುವ ಜನ ಭಾಗಗಳಿಗೆ ಮಾತ್ರ ಅದು ಮೀಸಲಾಗಿರಬೇಕು. ಉಳಿದವರಿಗೆ ಕೂಲಿಕಾರರು, ಕಾರ್ಮಿಕರುಗಳಿಗೆ ಪಂಗನಾಮವೇ ಗತಿ.

ಈಗಾಗಲೇ ಐಎಂಎಫ್ ಒತ್ತಡಗಳಿಗೆ ಮಣಿದು ಪಡಿತರ ಪದ್ಧತಿಯ ಮೂಲಕ ವಿತರಣೆಯಾಗುವ ಎಲ್ಲಾ ವಸ್ತುಗಳ ಬೆಲೆಯನ್ನು ವಿಪರೀತ ಏರಿಸಲಾಗಿದೆ. ಆಹಾರ ಸಬ್ಸಿಡಿಯನ್ನು ಕಡಿತ ಮಾಡಲಾಗಿದೆ. ಕಾರ್ಮಿಕ ಕೂಲಿಕಾರರ ಸಂಬಳ, ಕೂಲಿಯನ್ನು ಏರುತಗೊಳಿಸುವ ಬೆಲೆಯೇರಿಕೆಗೆ ಸಮನಾಗಿ ಕೊಡಬೇಕಾದ ತುಟ್ಟಿಭತ್ಯೆಯನ್ನೇ ನಿರಾಕರಿಸುವ ಪ್ರಯತ್ನಗಳೂ ನಡೆಸುತ್ತಿವೆ. ಪರಿಣಾಮವಾಗಿ ಆಹಾರ ವಸ್ತುಗಳ ಬೆಲೆಯೇರಿಕೆ, ಸಂಬಳ, ಕೂಲಿಗಳು ತಗ್ಗುತ್ತಿವೆ. ಜನಕ್ಕೆ ಉಪವಾಸ ಬೀಳುವ ಪರಿಸ್ಥಿತಿ ಹೆಚ್ಚಾಗುತ್ತಿದೆ.

ಅಗ್ಗದ ಬೆಲೆಗೆ ರೇಷನ್ ಇಲ್ಲ

ಅದರ ಮಧ್ಯೆ ಡಂಕೆಲ್ ಪ್ರಸ್ತಾವಗಳು ಜಾರಿಯಾಗುತ್ತಿರುವಾಗ ಸರಕಾರ ಆಹಾರ ಪದಾರ್ಥಗಳನ್ನು ಲೇವಿ ಮೂಲಕ ಅಗ್ಗದ ಬೆಲೆಯಲ್ಲಿ ಪಡೆದುಕೊಳ್ಳಬಾರದು. ಮಾರುಕಟ್ಟೆಯ ಬೆಲೆಯಲ್ಲಿಯೇ ತೆಗೆದುಕೊಳ್ಳಬೇಕು. ಜೊತೆಗೆ ಭಾರತದಲ್ಲಿ ಆಹಾರ ವಸ್ತುಗಳ ಬೆಲೆ ಏಪ ಏರಲು ಅವಕಾಶವಾಗಬಾರದೆಂದು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಆಹಾರ ವಸ್ತುಗಳ ಸಾಗಾಣಿಕೆಯ ಮೇಲೆ ನಿರ್ಬಂಧವಿದೆ. ಈ ನಿರ್ಬಂಧಗಳನ್ನು ತೆಗೆಯಬೇಕು. ಒಟ್ಟಾರೆ ಈ ಎರಡು ಕಾರಣಗಳಿಂದ ದೇಶದಲ್ಲಿ ಆಹಾರ ವಸ್ತುಗಳ ಬೆಲೆ ಹೆಚ್ಚಬೇಕು. ಹೀಗೆ ಹೆಚ್ಚಾದ ಬೆಲೆಯಲ್ಲಿಯೇ ಆಹಾರ ವಸ್ತುಗಳನ್ನು ಸರಕಾರ ಕೊಳ್ಳಬೇಕು ಮತ್ತು ಜನಕ್ಕೆ ಮಾರಬೇಕು. ಅತ್ಯಂತ ದೀನ ಸ್ಥಿತಿಯಲ್ಲಿರುವ ಗಿರಿಜನರಿಗೂ ಕೂಡ.

ನಮಗೆ ಬೇಡವಾದರೂ ತರಿಸಿಕೊಳ್ಳಲೇಬೇಕು

ಇವೆಲ್ಲದರ ಜೊತೆಯಲ್ಲಿ ಇನ್ನೊಂದು ವಿಚಿತ್ರ ಕಾನೂನು ಇದರದು. ನಮ್ಮ ದೇಶಕ್ಕೆ ಬೇಕಾದ ಆಹಾರ ಧಾನ್ಯವನ್ನು ನಾವು ಉತ್ಪಾದನೆ ಮಾಡಿಕೊಂಡಿದ್ದೇವೆ ಬೇರೆ ದೇಶಗಳಿಂದ ಧಾನ್ಯ ತರಿಸಿಕೊಳ್ಳುವ ಅಗತ್ಯ ನಮಗಿಲ್ಲವೆಂದರೂ ನಮ್ಮ ದೇಶದ ಉತ್ಪಾದನೆಯ ಶೇ. 2ರಷ್ಟನ್ನು ಬೇರೆ ದೇಶಗಳಿಂದ ತರಿಸಿಕೊಳ್ಳಲೇ ಬೇಕು. ಇದರ ಫಲವಾಗಿ ಕೃಷಿ ವಸ್ತುಗಳನ್ನು ಅತಿಯಾಗಿ ಉತ್ಪಾದಿಸಿ ತಮಗೆ ಕಟ್ಟರೆಯಾಗಿರುವ ಪಾಶ್ಚಿಮಾತ್ಯದೇಶಗಳಿಂದ ನಾವು ಕೃಷಿ ವಸ್ತುಗಳನ್ನು ಆಮದು ಮಾಡಿಕೊಳ್ಳಬೇಕು. ಅಂದರೆ ಈ ದೇಶಗಳಲ್ಲಿ ಲಕ್ಷಗಟ್ಟಲೆ ಎಕರೆ ಇರುವ ಕಂಪೆನಿಗಳ ಒಡೆಯರು ಹಲವಾರು ಟ್ರಾಕ್ಟರುಗಳು, ಕುಯಿಲು, ಕಣ ಒಮ್ಮೆಗೆ ಮಾಡುವ ಕಂಬೈನ್ ಹಾರ್ವೆಸ್ಟರ್‌ಗಳ ಪ್ಲಟೂನ್(ಒಂದು ಸೈನಿಕ ತುಕಡಿ)ಗಳನ್ನೇ ಹೊಂದಿರುವ ಕೆಲವೊಮ್ಮೆ ಔಷಧಿ ಸಿಂಪಡಿಸಲು ಹೆಲಿಕಾಪ್ಟರ್‌ಗಳನ್ನು ಪಡೆದಿರುವ ಕಂಪನಿಗಳ ಜೊತೆ ಭಾರತದ ಒಂದು ಎಕರೆ, ಎರಡು ಎಕರೆ, 10-12 ಎಕರೆಗಳ ರೈತರು ಸ್ಪರ್ಧಿಸಬೇಕು. ಭಾರತದ ನಗರ, ಪಟ್ಟಣಗಳಲ್ಲಿ ನಮ್ಮ ರೈತರು ಬೆಳೆದ ಗೋಧಿ ಅಮೇರಿಕಾ, ಕೆನಡಾ, ಆಸ್ಟ್ರೇಲಿಯಾಗಳ ಬ್ರಾಂಡಿನ ಗೋಧಿಯ ಜೊತೆ ಮತ್ತಿತರ ವಸ್ತುಗಳ ಜೊತೆ ಸ್ಪರ್ಧೆ ಮಾಡಬೇಕು.

ಇಂತಹ ದೊಡ್ಡ ಕಂಪನಿಗಳ ಜೊತೆ ಸ್ಪರ್ಧಿಸಿ ಭಾರತದ ರೈತ ಯಶಸ್ವಿಯಾಗಲು

ಪುಟ 8ಕ್ಕೆ

ಮತ್ತೆ ಭಾರತದ ಕೈ ತಿರುಚುತ್ತಿರುವ ಅಮೇರಿಕಾ

ಬೌದ್ಧಿಕ ಆಸ್ತಿ ಹಕ್ಕುಗಳ ಬಗ್ಗೆ ಮತ್ತೆ ಅಮೇರಿಕಾ ಭಾರತದ ಮೇಲೆ ಒತ್ತಡ ಹೇರತೊಡಗಿದೆ. ನಮ್ಮಲ್ಲಿನ ಕಾನೂನುಗಳನ್ನು ಬದಲಾಯಿಸಬೇಕೆಂದು ಹೇಳುತ್ತಿರುವ ಅಮೇರಿಕ ಮತ್ತೆ ಸೂಪರ್ 301 ರಂತಹ ಅಮೇರಿಕಾದ ಕಾನೂನಿನಡಿ ಭಾರತದೊಂದಿಗಿನ ತನ್ನ ವ್ಯಾಪಾರದ ಮೇಲೆ ಅನಾವಶ್ಯಕ ನಿರ್ಬಂಧಗಳನ್ನು ಹೇರುವ ಬೆದರಿಕೆ ಹಾಕತೊಡಗಿದೆ.

ಡಂಕೆಲ್ ಮಹಾಶಯ ಹೇಳುತ್ತಿರುವದನ್ನೇ ಅಮೇರಿಕ ಹೇಳುತ್ತಿದೆ. ಅಮೇರಿಕ ಹೇಳುವುದನ್ನೇ ಡಂಕೆಲ್ ಹೇಳಿದ್ದು.

ಎಂತಹ ಒತ್ತಡ ವೈಖರಿ ಅಲ್ಲವೇ?



ನರಸಿಂಹರಾವ್ ಸರಕಾರದ 22ನೇ ತಿಂಗಳಲ್ಲಿ

ಬೋಫೋರ್ಸ್‌ನ ಇನ್ನೊಂದು ಅವತಾರ!!

ಭಾರತ ರಷ್ಯದೊಂದಿಗಿನ ತೈಲ ವ್ಯಾಪಾರದ ಒಪ್ಪಂದ ಈಗ ಸುದ್ದಿಯಲ್ಲಿದೆ. ರಷ್ಯದ ಉಪಾಧ್ಯಕ್ಷ ಅಲೆಕ್ಸಾಂಡರ್ ರುಟ್ಸ್ಕೋಯಿ ರಷ್ಯದ ಅಂದಿನ ಮಂತ್ರಿ ಶಿಬಾಯೆವ್ ಭಾರತದಿಂದ ಲಂಚ ಪಡೆದಿದ್ದಾರೆ ಎಂದು ಆಪಾದನೆ ಮಾಡಿದ್ದಾರೆ.

ಈ ವ್ಯವಹಾರದಲ್ಲಿ ಲಂಡನ್‌ನ ಸೇಥಿಯಾ ಎಂಬ ವ್ಯಾಪಾರಿ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸಿದ್ದಾನಂತೆ.

ಈ ಸೇಥಿಯಾನ ಹಿನ್ನೆಲೆ : ಈತ ಲಂಡನ್‌ನಲ್ಲಿರುವ ಮೂರು ಭಾರತೀಯ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಮೋಸ ಮಾಡಿರುವ ಸಾಹಸಿ. ಬ್ರಿಟನ್ನಿನ ಕೋರ್ಟುಗಳು ಈತನನ್ನು ದಿವಾಳಿಕೋರನೆಂದು ಘೋಷಿಸಿವೆ.

ಇನ್ನೊಂದು ಬೋಫೋರ್ಸ್‌ನ ವಾಸನೆ ಬರುತ್ತಿರುವಂತೆ ಅನಿಸುತ್ತಿದೆಯಲ್ಲವೇ?

ಕಾರ್ಮಿಕ ಕಾನೂನುಗಳನ್ನು ಬದಲಿಸಲು ಸೂಕ್ತ ಕಾಲ

ಯಾರು ಗೊತ್ತೆ ಮೇಲಿನ ಮಾತು ಹೇಳಿದವರು? ಬಹುರಾಷ್ಟ್ರೀಯ ಕಂಪೆನಿ 'ಹಿಂದೂಸ್ತಾನ್ ಲಿವರ್ಸ್'ನ ಮುಖ್ಯಸ್ಥ ಎಸ್.ಎಮ್. ದತ್ತಾ ಈ ಮಾತು ಹೇಳಿದ್ದಾರೆ. ಕೆಲವೇ ದಿನಗಳ ಹಿಂದೆ ಟಾಟಾ ಕಂಪೆನಿಗಳ ಗುಂಪಿಗೆ ಸೇರಿದ ಟೊಮ್ಕೊ ಎಂಬ ಕಂಪೆನಿಯನ್ನು ನುಂಗಿಹಾಕಿದ ಈ ಹಿಂದುಸ್ತಾನ್ ಲಿವರ್ಸ್ ಭಾರತ ಸರಕಾರದ ಆರ್ಥಿಕ ಉದಾರೀಕರಣದ ಪೂರ್ಣ ಲಾಭ ಗಳಿಸಲು ಎಲ್ಲಾ ಪ್ರಯತ್ನ ನಡೆಸಿದೆ.

ಕಾರ್ಮಿಕ ಕಾನೂನುಗಳನ್ನು ಬದಲಿಸುವುದೆಂದರೆ ಏನು?

'ಎಕ್ಸಿಟ್ ನೀತಿಯನ್ನು ಬೇಗ ಜಾರಿಗೊಳಿಸಿ' ಈ ಕಂಪೆನಿಗಳು ನೌಕರರನ್ನು ಕಾರ್ಮಿಕರನ್ನು ಬೇಕಾದಾಗ ಮನೆಗೆ ಕಳಿಸುವ ಅಧಿಕಾರ ನೀಡುವುದು. ಅಂತಹ ಕಾನೂನು ಬದಲಾವಣೆಗಾಗಿ ಆತುರದಿಂದ ಕಾದಿದ್ದಾರೆ ಈ ಕಂಪೆನಿಗಳು.

ವಿದೇಶೀ ಹಣ ಹೂಡಿಕೆ, ಉದ್ಯೋಗ ಸೃಷ್ಟಿ ಇತ್ಯಾದಿಗಳನ್ನು ಮಾತನಾಡುವ ಸರಕಾರದ ಉದಾರೀಕರಣದ ನೀತಿಗಳ ಹಿಂದಿನ ದುರುದ್ದೇಶಗಳನ್ನು ಈ ಕಂಪೆನಿಗಳೂ ಈಗ ಉಸುರತೊಡಗಿದ್ದಾವೆ.

ಬಾಡಲಿರುವ ಹೂಗಳು

ಬ್ಯಾಂಕುಗಳ ಸಾಲಗಳನ್ನು ವರ್ಗೀಕರಿಸುವ ಹೊಸ ನಿಯಮಗಳನ್ನು ತಂದ ಮೇಲೆ ಬ್ಯಾಂಕುಗಳ ಹಾನಿ ತೀವ್ರವಾಗಿ ಹೆಚ್ಚುತ್ತಿದೆ ಎಂದು ನಿರೀಕ್ಷಿಸಲಾಗಿತ್ತು. ಈಗ ಲಭ್ಯವಿರುವ ಮಾಹಿತಿಗಳ ಪ್ರಕಾರ ಬ್ಯಾಂಕುಗಳು ಅತೀ ಹೆಚ್ಚಿನ ಲಾಭ ಪಡೆದಿರದಿದ್ದರೂ ತಕ್ಕ ಮಟ್ಟಿಗೆ ಚೆನ್ನಾಗಿ ಕಾರ್ಯನಿರ್ವಹಿಸಿವೆ.

ಸರಕಾರ ತನ್ನ ಸ್ವಾಮ್ಯದಲ್ಲಿದ್ದ ಬ್ಯಾಂಕುಗಳನ್ನು ತನ್ನ ರಾಜಕೀಯ ಉದ್ದೇಶಗಳಿಗಾಗಿ ಬೇಕಾದಂತೆ ಹಿಂಡಿದರೂ ಬ್ಯಾಂಕುಗಳು ಒಳ್ಳೆಯ ಪರಿಣಾಮಗಳನ್ನು ತೋರುತ್ತಿರುವುದು ನಿಜಕ್ಕೂ ಅವುಗಳ ನಿಜವಾದ ತಾಕತ್ತನ್ನು ತೋರುತ್ತಿದೆ.

ಖಾಸಗೀಕರಣ ಮತ್ತು ವಿದೇಶೀ ಬ್ಯಾಂಕುಗಳಿಗೆ ಆಹ್ವಾನದೊಂದಿಗೆ ಈ ಬ್ಯಾಂಕುಗಳು ಬಾಡುವ ದಾರಿಯಲ್ಲಿವೆ.

ಶೇರು ಹಗರಣ

ಬಯಲಾದ ಗುಟ್ಟು

ಶೇರು ಹಗರಣದ ಮೊಕದ್ದಮೆಗಳ ತನಿಖೆ ನಡೆಸುತ್ತಿದ್ದ ಸಿಬಿಐನ ಉನ್ನತ ಅಧಿಕಾರಿ ಮಾಧವನ್ ಅವರ ಮೇಲೆ ತೀವ್ರ ಒತ್ತಡವಿತ್ತು ಎಂಬುದು ಈಗ ಬಯಲಾಗಿದೆ. ಅವರು ವೈಯಕ್ತಿಕ ಕಾರಣಗಳಿಗಾಗಿ ಮೊದಲೇ ನಿವೃತ್ತಿ ಬಯಸಿದ್ದಾರೆ ಎಂದೆಲ್ಲಾ ಹೇಳಿಕೆ ನೀಡಿದ ಸರಕಾರ ಮರ್ಯಾದೆಯುಳ್ಳವರೆ ತಲೆತಗ್ಗಿಸಬೇಕು.


ಶೇರು ಹಗರಣದಲ್ಲಿ ಯಾವುದೇ ರಾಜಕಾರಣಿಯ ಪಾತ್ರವಿಲ್ಲ ಎಂದು ಹೇಳಿಕೆ ನೀಡಲು ಮಾಧವನ್ ಮೇಲೆ ಸತತವಾಗಿ ಒತ್ತಡ ಹೇರಲಾಯಿತು. ಆದರೆ ಮಾಧವನ್ ಮಣಿಯಲಿಲ್ಲ. ತನಿಖೆ ಮುಂದುವರಿದಿರುವಾಗ ರಾಜಕಾರಣಿಗಳು ಕೈವಾಡ ಇಲ್ಲವೆನ್ನುವುದು ಸ್ಪಷ್ಟವಾಗದೇ ಇರುವಾಗ ಅಂತಹ ಹೇಳಿಕೆ ಹೇಗೆ ನೀಡಲಿ ಎಂದು ಅವರು ಪ್ರಶ್ನಿಸಿದ್ದರು. ಅಂತೂ ಮಾಧವನ್ ಸಿಬಿಐನಿಂದ ಹೊರಹೋಗುವಂಥೆ ನೋಡಿಕೊಳ್ಳಲಾಯಿತು.

'ಕಳ್ಳನ ಮನಸ್ಸು ಹುಳ್ಳಗೆ' ಎನ್ನುವಂತೆ ಎಷ್ಟು ಜನ ರಾಜಕಾರಣಿಗಳು ಮನಸ್ಸು ಹುಳ್ಳಗೋ ಯಾರಿಗೆ ಗೊತ್ತು. ಸಂಸದೀಯ ಸಮಿತಿಯ ತನಿಖೆಯಿಂದಲಾದರೂ ಅಲ್ಪ ಸ್ವಲ್ಪ ಹೊರಬಂದೀತೆ?

ಸಂಸದೀಯ ಸಮಿತಿಯ ಅವಧಿಯ ವಿಸ್ತರಣೆ

ಬಜೆಟ್ ಅಧಿವೇಶನದ ಅಂತ್ಯಕ್ಕೆ ಮೊದಲು ವರದಿ ಸಲ್ಲಿಸಬೇಕಾಗಿರುವ ಸಂಸದೀಯ ಸಮಿತಿಯ ಅವಧಿಯನ್ನು ಮತ್ತೊಮ್ಮೆ ವಿಸ್ತರಿಸಲಾಗುವುದೇ? ಸಮಿತಿಯ ಹಲವು ಸದಸ್ಯರು ಅವಧಿ ವಿಸ್ತರಣೆಗೆ ಒತ್ತಾಯ ಮಾಡುತ್ತಿದ್ದಾರೆನ್ನಲಾಗಿದೆ.

ಕೇಂದ್ರದ ಮಂತ್ರಿಗಳು ಇನ್ನೂ ಸಮಿತಿಯ ಮುಂದೆ ಸಾಕ್ಷ್ಯ ನೀಡಬೇಕಾಗಿದೆ. ಅಲ್ಲದೆ ಕಂಪೆನಿಗಳ ಸಾಕ್ಷ್ಯ ಪಡೆಯದೇ ಇದ್ದರೆ ಹಗರಣದ ಮೊತ್ತ ಎಷ್ಟು ಎಂಬುದನ್ನು ಖಚಿತ ಪಡಿಸಿಕೊಳ್ಳುವುದು ಸಾಧ್ಯವಾಗದೇ ಹೋಗಬಹುದು. ಜಾನಕೀರಾಮನ್ ಸಮಿತಿ ತನ್ನ ಅಂತಿಮ ವರದಿ ಸಲ್ಲಿಸುವುದೋ ಇಲ್ಲವೋ ಗೊತ್ತಿಲ್ಲ. ಇಂತಹ ಸನ್ನಿವೇಶದಲ್ಲಿ ಜವಾಬ್ದಾರಿಗಳನ್ನು ನಿರ್ಧರಿಸುವುದು ಕಠಿಣವಾಗುತ್ತಿದೆ. ಆದ್ದರಿಂದ ಸಮಿತಿಯ ಅವಧಿ ವಿಸ್ತರಣೆ ಬೇಕೆಂದು ಇವರು ಕೇಳುತ್ತಿದ್ದಾರೆ.



ಡಂಕೆಲ್ ಬಯಸುವ ಬದಲಾವಣೆಗಳೇನು?

1. 'ಉತ್ಪನ್ನ' ಅಥವಾ 'ಉತ್ಪಾದನಾ ವಿಧಾನ' ಎಲ್ಲಾ ಕ್ಷೇತ್ರಗಳಲ್ಲಿ ಪೇಟೆಂಟ್ ತೆಗೆದುಕೊಳ್ಳಲು ಅವಕಾಶವಿರಬೇಕು ಅಂದರೆ ಆಹಾರ, ಔಷಧಿ, ರಾಸಾಯನಿಕ ವಸ್ತುಗಳ ಮೇಲೂ 'ಉತ್ಪನ್ನ' ಪೇಟೆಂಟ್ ನೀಡಬೇಕು.
2. ಪೇಟೆಂಟ್ ಅವಧಿ 20 ವರ್ಷಗಳಿರಬೇಕು.
3. ಪೇಟೆಂಟ್ ಹೊಂದಿರುವ ವಿದೇಶಿ ಕಂಪನಿ ತನ್ನ ದೇಶದಿಂದ ಪೇಟೆಂಟ್ ಮಾಡಿದ ಉತ್ಪನ್ನ ಆಮದು ಮಾಡಿದರೆ ಅದು ಭಾರತದಲ್ಲಿ ಉತ್ಪಾದಿಸಿದಂತೆ ಎಂದು ತೆಗೆದುಕೊಳ್ಳಬೇಕು.
4. 'ಕಡ್ಡಾಯ ಲೈಸೆನ್ಸ್' ಇತ್ಯಾದಿ ನಿರ್ದಿಷ್ಟ ಸನ್ನಿವೇಶಗಳಲ್ಲಿ ಸರಕಾರ ಸಾರ್ವಜನಿಕ ಹಿತಕ್ಕಾಗಿ ಪೇಟೆಂಟ್ ಸವಲತ್ತು ವಾಪಸು ತೆಗೆದುಕೊಳ್ಳುವ ವಿಧಿ ಹಿಂತೆಗೆದುಕೊಳ್ಳಬೇಕು.
5. ಪೇಟೆಂಟ್ ಹೊಂದಿರುವವನು ತನ್ನ ಪೇಟೆಂಟ್ ಉಲ್ಲಂಘನೆ ಬಗ್ಗೆ ದೂರು ಕೊಟ್ಟಾಗ, ದೂರು ಸರಿಯಲ್ಲ ಎಂದು ಪುರಾವೆ ಸಹಿತ ರುಜುವಾತು ಮಾಡುವ ಹೊಣೆ ದೂರು ಯಾರ ವಿರುದ್ಧ ಇದೆಯೋ ಅವರದ್ದು. ಅಂದರೆ ರುಜುವಾತು ಮಾಡುವ ಹೊಣೆ ದೂರು ಕೊಡುವವರದ್ದಲ್ಲ, ಅಪರಾಧಿಯದು ಎಂದರೆ ಭಾರತದ ಪೇಟೆಂಟ್ ಕಾನೂನು 1970 ರದ್ದು ಮಾಡಿ 1991ರ ವಸಾಹತುಶಾಹಿ ಕಾನೂನು

ಕಪ್ಪು ಹಣದ ಧನಿಕರಿಗೆ ಪೂಸಿ ಹೊಡೆಯುತ್ತಿರುವ ಸರಕಾರ

ಈ ವರ್ಷದ ಬಜೆಟ್‌ನಲ್ಲಿ 'ಚಿನ್ನದ ಬಾಂಡ್ ಯೋಜನೆ' ಎಂಬ ಹೊಸ ಯೋಜನೆಯೊಂದನ್ನು ಮನಮೋಹನಸಿಂಗ್‌ರು ಘೋಷಿಸಿದರು. 'ದೇಶಪ್ರೇಮಿ ಜನಗಳಿಗೆ ದೇಶಸೇವೆಗೆ ಒಂದು ಅವಕಾಶ' ಎಂದು ಇದನ್ನು ವರ್ಣಿಸಿತು ಸರಕಾರ. ಈ ಯೋಜನೆಯ ನಿಜವಾದ ಉದ್ದೇಶ ಏನು ಎಂಬುದನ್ನು ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸಸ್‌ನ ಮಾಜಿಅಧ್ಯಕ್ಷರಾದ ಶ್ರೀ ಟಿ.ಎನ್.ಪಾಂಡೆಯವರು ತಮ್ಮ ಇತ್ತೀಚಿನ ಲೇಖನವೊಂದರಲ್ಲಿ ವಿವರಿಸಿದ್ದಾರೆ. ಅದರ ಸಂಗ್ರಹಾನುವಾದ ಕೆಳಗಿದೆ.

ಚಿನ್ನದ ಬಾಂಡ್ ಯೋಜನೆಯ ಪ್ರಕಾರ 500 ಗ್ರಾಂ ಚಿನ್ನ ಅಥವಾ ಇದರ ಗುಣಕಗಳಲ್ಲಿ ಸಾರ್ವಜನಿಕರು ಈ ಬಾಂಡ್‌ಗಳನ್ನು ಪಡೆಯಬಹುದು. ಆ ಪ್ರಮಾಣದ ಉತ್ತಮ ಚಿನ್ನವನ್ನು ಅವರು ಸರಕಾರಕ್ಕೆ ನೀಡಬೇಕು. ಬಾಂಡುಗಳು ಪ್ರಾಮಿಸರಿ ನೋಟು ಅಥವಾ ಸ್ಟಾಕ್ ಸರ್ಟಿಫಿಕೇಟ್‌ನ ರೂಪದಲ್ಲಿರುತ್ತದೆ. ಭಾರತೀಯ ನಿವಾಸಿಗಳು, ಅವಿಭಕ್ತ ಹಿಂದೂಕುಟುಂಬಗಳು, ಟ್ರಸ್ಟುಗಳು, ಕಂಪೆನಿಗಳು ಈ ಯೋಜನೆಯಲ್ಲಿ ಭಾಗವಹಿಸಬಹುದು.

ಈ ಯೋಜನೆಯ ಲಾಭಗಳೇನು?

1. ಕರರಹಿತ ಬಡ್ಡಿ - ಐದು ವರ್ಷಗಳಲ್ಲಿ 20,000 ರೂಪಾಯಿಗಳಷ್ಟು... ವ್ಯಕ್ತಿಗಳಿಗೆ ಇದು ರೂ. 289,60ರವರೆಗೂ ಏರುತ್ತದೆ.
2. ಭಾಗವಹಿಸುವವರನ್ನು ಅವರ ಈ ಚಿನ್ನದ ಮೂಲವನ್ನು ಪ್ರಶ್ನಿಸಲಾಗುವುದಿಲ್ಲ.
3. ಆದಾಯ ತೆರಿಗೆ, ಸಂಪತ್ತಿನ ತೆರಿಗೆ ಇತ್ಯಾದಿಗಳಿಂದ ವಿನಾಯಿತಿ ಇರುತ್ತದೆ.
4. ಈ ಬಾಂಡುಗಳನ್ನು ಆಧಾರವಾಗಿಟ್ಟು ಬ್ಯಾಂಕುಗಳಿಂದ ಸಾಲ ಪಡೆಯಬಹುದು.
5. ಐದು ವರ್ಷಗಳ ನಂತರ ಚಿನ್ನದ ಬೆಲೆಯಲ್ಲಿ ಆಗಬಹುದಾದ ಏರಿಕೆಯ ಲಾಭವನ್ನು ಭಾಗವಹಿಸುವವರಿಗೆ ನೀಡಲಾಗುವುದು.
6. ಐದು ವರ್ಷಗಳ ನಂತರ ಬಾಂಡ್‌ನ ಬೆಲೆಗೆ ಸಮನಾದ ಚಿನ್ನವನ್ನು ನೀಡಲಾಗುವುದು.

ಈ ಯೋಜನೆಯಿಂದ ದೇಶದ ಚಿನ್ನದ ನಿಧಿ ಹೆಚ್ಚುವುದೆಂದು ಸರಕಾರ ಹೇಳುತ್ತಿದೆ.

ಇದು ಕಪ್ಪು ಹಣವನ್ನು ಬಿಳಿ ಮಾಡುವವರಿಗೆ ನೀಡಿರುವ ವರ ಎಂಬುದು ಮೇಲಿನದರಿಂದ ಸ್ಪಷ್ಟವಾಗುತ್ತದೆ.

ಸರಕಾರವನ್ನು, ದೇಶವನ್ನು ತೆರಿಗೆಗಳ ತಪ್ಪಿಸುವದರಿಂದ ಮೋಸ ಮಾಡಿ ಕಪ್ಪು ಹಣದ ಧನಿಕರಾಗಿರುವ ಇವರಿಗೆ ಇಂತಹ ವಿನಾಯಿತಿಗಳ ಅವಶ್ಯಕತೆ ಇದೆಯೇ? ದೇಶಕ್ಕೆ ಇದರಿಂದ ಲಾಭವಿದೆಯೇ? ಖಂಡಿತವಾಗಿಯೂ ಇಲ್ಲ. ಲಾಭಕ್ಕೆ ಬದಲು ಇದರಿಂದ ಹಾನಿಯೇ ಹೆಚ್ಚು.

ಮೊದನೆಯದಾಗಿ ಇದು ಕಪ್ಪು ಹಣ ಇರುವವರನ್ನು ಶಿಕ್ಷಿಸುವ ಬದಲು ಬಹುಮಾನಿಸುತ್ತದೆ. ಎರಡನೆಯದಾಗಿ ಇದು ಕಪ್ಪು ಹಣಕ್ಕೆ ಸರಕಾರದ ಪ್ರೋತ್ಸಾಹವಿದೆ ಎಂಬ ಸೂಚನೆ ನೀಡುತ್ತದೆ.

ನಮ್ಮ ಹಿಂದಿನ ಅನುಭವಗಳೂ ಹಿತಕರವಾಗಿಲ್ಲ. ಹಿಂದೆ ಇಂತಹ ಯೋಜನೆಗಳನ್ನು ತಂದಾಗ ಅವು ವಿಫಲವಾಗಿವೆ. ಹಿಂದೆ ತರಲಾಗಿದ್ದ ಈ ಕೆಳಕಂಡ ಯೋಜನೆಗಳು ವಿಫಲವಾದವು.

1. 1951ರ ತ್ಯಾಗಿ ಪ್ರಕಟಣೆ ಯೋಜನೆ 2. 1965 ಮತ್ತು 1975ರ ಸ್ವಯಂಪ್ರೇರಿತ ಪ್ರಕಟಣೆ ಯೋಜನೆ, 3. 1981ರ ವಿಶೇಷ ಬೇರರ್ ಬಾಂಡ್ ಯೋಜನೆ 4. 1985-87ರ ಅಮ್ನೆಸ್ಟಿ ಯೋಜನೆ, 5. 1991-92ರ ರಾಷ್ಟ್ರೀಯ ವಸತಿ ಬ್ಯಾಂಕ್ [illegible] ಯೋಜನೆ.

ಈ ಎಲ್ಲಾ ಯೋಜನೆಗಳು ವಿಫಲ [illegible] ವರೂ ಈಗ ಈ ಯೋಜನೆ ತಂದಿದೆ ಸರಕಾರ [illegible]

ಕಪ್ಪು ಹಣದ ಧನಿಕರಿಗೆ [illegible] ವುದ ವರದಾನ ಅಲ್ಲವೆ ಇದು?

ಪಂಚಾಯತ್ ಚುನಾವಣೆಗೆ ಪ.ಬಂಗಾಳ ಸನ್ನದ್ಧ



ಪಶ್ಚಿಮ ಬಂಗಾಳದಲ್ಲಿ ಮೂರು ಹಂತಗಳ ಪಂಚಾಯತ್ ಚುನಾವಣೆಗಳಿಗೆ ಸಿದ್ಧತೆಗಳು ಆರಂಭವಾಗಿವೆ. ಇದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಅತ್ಯಂತ ದೊಡ್ಡ ಪ್ರಯೋಗಗಳಲ್ಲಿ ಒಂದಾಗಿದೆ. ಚುನಾವಣೆ ದಿನಾಂಕ ಮೇ 30.

ಅಧಿಕಾರದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ, ಆಡಳಿತ ಚಟುವಟಿಕೆಗಳಲ್ಲಿ ಜನರ ಭಾಗವಹಿಸುವಿಕೆ ಮತ್ತು ಅಧಿಕಾರಶಾಹಿಗಳ ಅಧಿಕಾರದಲ್ಲಿ ತೀವ್ರ ಕಡಿತ ಇವುಗಳನ್ನು ರಾಜ್ಯದ ಎಡರಂಗ ಸರಕಾರ ಖಾತರಿಗೊಳಿಸಿದೆ. ಇವರೊಂದಿಗೆ ಪಂಚಾಯತ್‌ರಾಜ್ ಸಂಸ್ಥೆಗಳ ಮೂಲಕ ಅತ್ಯಂತ ದೊಡ್ಡ ರೀತಿಯಲ್ಲಿ ಪ್ರಜಾಸತ್ತಾತ್ಮಕ ಪಕ್ಕನ್ನು ಚಲಾಯಿಸುವ ಒಂದು ಮಾದರಿಯನ್ನು ಅದು ಸ್ಥಾಪಿಸಿದೆ. ರಾಜ್ಯದ ಪ್ರಸ್ತುತ ಈ ಮೂರು ಹಂತಗಳ ಪಂಚಾಯತ್‌ಗಳಲ್ಲಿ ಗ್ರಾಮೀಣ ಪ್ರದೇಶಗಳ 68000 ಚುನಾಯಿತ ಸದಸ್ಯರು ಇರುತ್ತಾರೆ.

ರಾಜ್ಯದಲ್ಲಿ 1977ರಲ್ಲಿ ಎಡರಂಗ ಆಡಳಿತಕ್ಕೆ ಬಂದಿತ್ತು. ಅಂದಿನಿಂದಲೂ ನಿಗದಿತ ಅವಧಿಯೊಳಗೆ ಪಂಚಾಯತ್ ಚುನಾವಣೆಗಳು ನಡೆದಿವೆ. ಕಾಂಗ್ರೆಸ್(ಐ) ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಮಾಡಲಾಗುವಂತೆ ಈ ಚುನಾವಣೆಗಳನ್ನು ಯಾವತ್ತೂ ತಪ್ಪಿಸಿಲ್ಲ.

ಅಂದಿನಿಂದ ಇಂದಿನವರೆಗೆ ಚುನಾವಣಾ ಘೋಷಣೆಗಳು ಗಣನೀಯ ರೀತಿಯಲ್ಲಿ ಬದಲಾಗುತ್ತಾ ಬಂದಿವೆ. ಪ್ರತಿಯೊಂದು ಚುನಾವಣೆ ಸಂದರ್ಭದಲ್ಲೂ ಒಂದು ಹೊಸ ಘೋಷಣೆ ಅನುರಣಿಸಿದೆ. ಅದು ಪಂಚಾಯತ್ ರಾಜ್ ವ್ಯವಸ್ಥೆಯ ಗುರಿ ಹಾಗೂ ಉದ್ದೇಶವನ್ನು ಪ್ರತಿನಿಧಿಸುವಂಥದ್ದಾಗಿದೆ. ಆಯಾ ಕಾಲಘಟ್ಟದ ಪರಿಸ್ಥಿತಿಯ ಆಧಾರದ ಮೇಲೆ ಆ ಘೋಷಣೆಗಳನ್ನು ರೂಪಿಸಲಾಗಿತ್ತು.

ಉದಾಹರಣೆಗೆ ಹೇಳುವುದಾದರೆ 'ಪಾಳೆದ ಗೂಡನ್ನು ಕೆಡವಿ ಹಾಕಿ' ಎನ್ನುವುದು 1978ರ ಪ್ರಥಮ ಪಂಚಾಯತ್ ಚುನಾವಣೆಗಳ ಘೋಷಣೆಯಾಗಿತ್ತು. ದೊಡ್ಡ ಭೂಮಾಲೀಕರು, ಲೇವಾದೇವಿಗಾರರ ಹಿತಾಸಕ್ತಿಗಳು ಮತ್ತು ಪಾಳೇಗಾರಿ ಅವಶೇಷಗಳ ಮೇಲೆ ಆಕ್ರಮಣ ನಡೆಸುವಂತೆ ಗ್ರಾಮೀಣ ಜನರಿಗೆ ಕರೆ ಕೊಡಲಾಯಿತು. 1988ರ ನಂತರ ಸ್ವಯಂ ಪರಿಪೂರ್ಣತೆಗೆ ಆದ್ಯತೆ ಕೊಡಲಾಯಿತು. ಆಗ, 'ನಿಮ್ಮದೇ ಆದ ಗ್ರಾಮವನ್ನು ಕಟ್ಟಿ' ಎಂಬ ಘೋಷಣೆಯನ್ನು ಮುಂದಿಡಲಾಗಿತ್ತು. ಜಿಲ್ಲಾ ಮಟ್ಟದ ಯೋಜನೆ ಹಾಗೂ ಬಜೆಟ್ ರೂಪಿಸುವುದರಲ್ಲಿ ಪಂಚಾಯತ್ ಸಂಸ್ಥೆಗಳು ಸಕ್ರಿಯ ಪಾತ್ರ ವಹಿಸತೊಡಗಿದ್ದವು.

ಸದ್ಯ ರಾಜ್ಯದ ಒಟ್ಟು ಯೋಜನಾ ವೆಚ್ಚದಲ್ಲಿ ಶೇಕಡಾ 50 ರಷ್ಟನ್ನು ಜಿಲ್ಲಾ ಮತ್ತು ಬ್ಲಾಕ್ ಮಟ್ಟದ ಯೋಜನೆಗಳಿಗೆ ಮೀಸಲಿಡಲಾಗುತ್ತದೆ. ಪಂಚಾಯತ್‌ರಾಜ್ ಸಂಸ್ಥೆಗಳು, ಅಥವಾ ಅವುಗಳ ಜೊತೆ ಸಮಾಲೋಚನೆ ನಡೆಸಿ ಅವುಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

ಈ ನೀತಿಯನ್ನು ಮುಂದುವರಿಸಿಕೊಂಡು ಹೋಗುವುದರ ಅಂಗವಾಗಿ ಎಡರಂಗ ಸರಕಾರ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮೂಲ ಸೌಕರ್ಯಗಳ ಬೆಂಬಲ ಒದಗಿಸಲು 1992-93ರ ಬಜೆಟ್‌ನಲ್ಲಿ ಒತ್ತು ನೀಡಿದೆ. ತರಬೇತಿ ಮೂಲಕ ಈ ಸಂಸ್ಥೆಗಳ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲೂ ಉದ್ದೇಶಿಸಿದೆ. ಅದಕ್ಕೆ ಸರಿಯಾಗಿ ಬಜೆಟನ್ನು ರೂಪಿಸಲಾಗಿದೆ.

ಕಾಂಗ್ರೆಸ್(ಐ) ಪಕ್ಷ ಎಡರಂಗದ ಪ್ರಮುಖ ಎದುರಾಳಿ. ಈ ವರ್ಷದ ಪಂಚಾಯತ್ ಚುನಾವಣೆ ಅವರ ಜತೆಗಿನ ತೀಕ್ಷ್ಣ ರಾಜಕೀಯ ಹೋರಾಟವಾಗಲಿದೆ. ಕಾಂಗ್ರೆಸ್ ಅಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿ ಮೂಗು ತೂರಿಸಲು ಭಾರತೀಯ ಜನತಾ ಪಕ್ಷ(ಬಿಜೆಪಿ) ಭಾರೀ ಪ್ರಯತ್ನಗಳನ್ನು ನಡೆಸಲಿದೆ.

ಕೆಳ ಹಂತದಲ್ಲಿ ಈ ಎರಡು ಪಕ್ಷಗಳ ನಡುವೆ ಚುನಾವಣಾ ಹೊಂದಾಣಿಕೆ ಆಗುವ ನಿರೀಕ್ಷೆಯಿದೆ ಎಂದು ರಾಜ್ಯದ ರಾಜಕೀಯ ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ಕೆಲವು ಸ್ಥಳೀಯ ಕಾಂಗ್ರೆಸ್ ನಾಯಕರು ಬಿಜೆಪಿಯ ಟಿಕೆಟ್ ಬಯಸುತ್ತಿದ್ದಾರೆ ಎಂದೂ ಹೇಳಲಾಗಿದೆ. ಕೆಲ ಮಂದಿ ಕಾಂಗ್ರೆಸ್ ನಾಯಕರು ಮತ್ತು ಬಿಜೆಪಿ ನಡುವಿನ ಮೈತ್ರಿ ಹಗಲು ಬೆಳಕಿನಷ್ಟೇ ಸ್ಪಷ್ಟವಾಗಿದೆ. ಹೀಗಾಗಿ ಬಿಜೆಪಿಯನ್ನು ಎದುರಿಸುವ ಪೂರ್ಣ ಹೊಣೆಗಾರಿಕೆ ಎಡಶಕ್ತಿಗಳ ಹೆಗಲ ಮೇಲೆ ಬಿದ್ದಿದೆ. ಆದ್ದರಿಂದ ಚುನಾವಣಾ ಪ್ರಚಾರದ ವೇಳೆ ಎಡ ಪಕ್ಷಗಳು ಕಳೆದ ಐದು ವರ್ಷಗಳ ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳು ಮಾತ್ರವಲ್ಲದೆ ಕೋಮು ಶಕ್ತಿಗಳನ್ನು ಎದುರಿಸುವುದರ ಹೋರಾಟದ ಮೇಲೆಯೂ ಗಮನವನ್ನು ಕೇಂದ್ರೀಕರಿಸಲಿವೆ.

ಮಹಿಳೆಯರಿಗೆ ಸ್ಥಾನ ಮೀಸಲು :

ಎಲ್ಲಾ ಮೂರು ಹಂತಗಳಲ್ಲಿ ಮಹಿಳೆಯರಿಗೆ ದೊಡ್ಡ ಪ್ರಮಾಣದಲ್ಲಿ ಸ್ಥಾನಗಳನ್ನು ಮೀಸಲಿಟ್ಟಿರುವುದು ಈ ಬಾರಿಯ ಪಂಚಾಯತ್ ಚುನಾವಣೆಯ ಒಂದು ಮುಖ್ಯ ಅಂಶವಾಗಿದೆ. ದೇಶದಲ್ಲಿ ಇದೇ ಪ್ರಥಮ ಬಾರಿಗೆ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ. 30 ಸ್ಥಾನಗಳನ್ನು ಮೀಸಲಿಡಲಾಗಿದೆ. ಇದು ಗ್ರಾಮೀಣ ಬಂಗಾಳದ ಮಹಿಳೆಯರಿಗೆ ಒಂದು ಮಹತ್ವದ ವಿದ್ಯಮಾನವಾಗಲಿದೆ. ಸುಮಾರು 23000 ಸ್ಥಾನಗಳನ್ನು ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವ ಈ ಕ್ರಮ ಪಂಚಾಯತ್ ರಾಜ್ ಸಂಸ್ಥೆಗಳು ಮಾತ್ರವಲ್ಲದೆ ಇಡೀ ಸಮಾಜದ ಮೇಲೆ ಭಾರೀ ಪರಿಣಾಮ ಬೀರಲಿದೆ.

ಆಂಧ್ರಪ್ರದೇಶ: ಸಿಪಿಐ(ಎಂ) ಅಭ್ಯರ್ಥಿಗೆ ಬೆಂಬಲಕ್ಕೆ ಮನವಿ

ನೆಲ್ಲೂರು ಜಿಲ್ಲೆಯ ಕೋವೂರು ವಿಧಾನಸಭಾ ಉಪಚುನಾವಣೆ ನಡೆಯಲಿದೆ. ಅದರಲ್ಲಿ ಸಿಪಿಐ(ಎಂ) ಅಭ್ಯರ್ಥಿಗೆ ಬೆಂಬಲ ನೀಡುವಂತೆ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯ ಎಲ್.ಬಿ.ಗಂಗಾಧರ ರಾವ್ ಮತ್ತು ರಾಜ್ಯ ಕಾರ್ಯದರ್ಶಿ ಕೊರಟಾಲ ಸತ್ಯನಾರಾಯಣ ತೆಲುಗುದೇಶಂ, ಸಿಪಿಐ ಮತ್ತು ಜನತಾದಳಕ್ಕೆ ಮನವಿ ಮಾಡಿದ್ದಾರೆ.

ಇತ್ತೀಚೆಗೆ ಅವರು ಗುಂಟೂರಿನಲ್ಲಿ ಸುದ್ದಿಗೋಷ್ಠಿಯೊಂದರಲ್ಲಿ ಮಾತನಾಡುತ್ತಾ ಈ ಮನವಿ ಮಾಡಿಕೊಂಡರು. ಕೋವೂರು ಸಾಂಪ್ರದಾಯಿಕವಾಗಿ ಕಮ್ಯುನಿಸ್ಟ್ ಚಳುವಳಿಯ ಒಂದು ಪ್ರಮುಖ ನೆಲೆಯಾಗಿದೆ. ಕಮ್ಯುನಿಸ್ಟ್ ವಿರೋಧಿ ರಂಗವೊಂದು ರಚಿತವಾಗಿದ್ದರೂ 1952 ಮತ್ತು 1955ರ ಚುನಾವಣೆಗಳಲ್ಲಿ ಈ ಕ್ಷೇತ್ರದಿಂದ ಕಮ್ಯುನಿಸ್ಟ್ ಅಭ್ಯರ್ಥಿ ಜಯ ಗಳಿಸಿದ್ದರು. 1962ರಲ್ಲಿ ಕಮ್ಯುನಿಸ್ಟ್ ಅಭ್ಯರ್ಥಿ ಅಲ್ಪಮತಗಳ ಅಂತರದಿಂದ ಸೋತಿದ್ದರು.

1983ರ ಅಸೆಂಬ್ಲಿ ಚುನಾವಣೆಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿ 18000 ಮತಗಳನ್ನು ಗಳಿಸಿ ಎರಡನೇ ಸ್ಥಾನದಲ್ಲಿದ್ದರು. ನಂತರ, ತೆಲುಗುದೇಶಂ ನಾಯಕ ಶ್ರೀನಿವಾಸುಲು ರೆಡ್ಡಿಗೆ ಅನುಕೂಲಮಾಡಿಕೊಡಲು ಸಿಪಿಐ(ಎಂ) ನೆರೆಯ ಅಲ್ಲೂರು ಕ್ಷೇತ್ರದಿಂದ ಸ್ಪರ್ಧಿಸಿತ್ತು. ಆದರೆ ಸ್ವಲ್ಪವೇ ಸಮಯದಲ್ಲಿ ಶ್ರೀನಿವಾಸುಲು ದೇಶಂ ಬಿಟ್ಟು ಕಾಂಗ್ರೆಸ್ ಸೇರಿದ್ದರು.

1989ರ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೈಯಲ್ಲಿ ತೆಲುಗುದೇಶಂ ಅಭ್ಯರ್ಥಿ ಸೋತಿದ್ದರು. ಈ ಕ್ಷೇತ್ರದ ಕಾಂಗ್ರೆಸ್ ಶಾಸಕ ಶ್ರೀನಿವಾಸುಲು ರೆಡ್ಡಿ ನಿಧನದಿಂದ ಸ್ಥಾನ ತೆರವಾಗಿದ್ದು ಉಪ ಚುನಾವಣೆ ನಡೆಯಲಿದೆ. ಶ್ರೀನಿವಾಸುಲು ರೆಡ್ಡಿ ಕುಟುಂಬದ ಯಾರಾದರೊಬ್ಬರನ್ನು ಈ ಕ್ಷೇತ್ರದಲ್ಲಿ ಅಭ್ಯರ್ಥಿಯನ್ನಾಗಿ ಇಳಿಸಲು ತೆಲುಗುದೇಶಂ ನಾಯಕರು ಪ್ರಯತ್ನಿಸುತ್ತಿದ್ದಾರೆ!

ಅರಣ್ಯ ಸಂಶೋಧನೆಗೆ ಕತ್ತರಿ ಹಾಕಲು ಕೇಂದ್ರ ಪಿತೂರಿ!

ಪಶ್ಚಿಮ ಬಂಗಾಳದಲ್ಲಿರುವ ಭಾರತ ಸರಕಾರದ ಅರಣ್ಯ ಮತ್ತು ಪರಿಸರ ಇಲಾಖೆಯ ಮೂರು ಸಂಶೋಧನಾ ಪ್ರಯೋಗಾಲಯಗಳನ್ನು ಮುಚ್ಚಲು ಕೇಂದ್ರ ಸರಕಾರ ಪಿತೂರಿ ನಡೆಸುತ್ತಿರುವಂತೆ ಕಾಣುತ್ತಿದೆ. ಇದು ಪಶ್ಚಿಮ ಬಂಗಾಳ ಸೇರಿದಂತೆ ಪೂರ್ವ ವಲಯದಲ್ಲಿನ ಅರಣ್ಯ ಸಂಶೋಧನೆ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಈ ರಾಜ್ಯದ ವಿಜ್ಞಾನಿಗಳ, ಸಂಶೋಧಕರು ಮತ್ತು ಪ್ರೊಫೆಸರ್‌ಗಳ ಮೇಲೆಯೂ ಪರಿಣಾಮ ಬೀಳಲಿದೆ.

ಪೂರ್ವ ವಲಯಗಳಲ್ಲಿನ ಅರಣ್ಯಗಳಷ್ಟು ವೈವಿಧ್ಯಮಯ ಅರಣ್ಯಗಳು ಭಾರತದಲ್ಲಿ ಬೇರೆಲ್ಲೂ ಇಲ್ಲ ಎನ್ನುವುದನ್ನು ಇಲ್ಲಿ ಗಮನಿಸಬೇಕು. ಪ್ರಖ್ಯಾತ ಸುಂದರ ಬನವೂ ಇದರಲ್ಲಿ ಸೇರಿದೆ.

ಈ ವಲಯದಲ್ಲಿನ ಜೀವ ವೈವಿಧ್ಯ ಕುರಿತ ಸಂಶೋಧನೆ ಜಗತ್ತಿನಾದ್ಯಂತ ಆಸಕ್ತಿ ಕೆರಳಿಸಿದೆ. ಜೀವ ವೈವಿಧ್ಯವನ್ನು ಸಂರಕ್ಷಿಸುವ ಹೆಸರಿನಲ್ಲಿ ಭಾರತವನ್ನು ಶೋಷಿಸಲು ಅಮೇರಿಕಾ ಹವಣಿಸುತ್ತಿರುವ ಈ ಹಂತದಲ್ಲಿ ಕೇಂದ್ರ ಸರಕಾರ ಪ್ರಯೋಗಾಲಯಗಳನ್ನು ಮುಚ್ಚುವುದರಿಂದ ಅಮೇರಿಕಕ್ಕೆ ನೆರವಾಗುತ್ತದೆ ಅಷ್ಟೇ.

ಬಿಹಾರದಲ್ಲಿ ಭೂ ರಹಿತ ಕೃಷಿ ಕಾರ್ಮಿಕರ ಹತ್ಯೆ

ಬಿಹಾರದ ಪೂರ್ಣಿಯಾ ಜಿಲ್ಲೆಯ ಬುಧೆಲಿ ಎಸ್ಟೇಟ್ ಪ್ರದೇಶದಲ್ಲಿ ಏಪ್ರಿಲ್ 15 ರಂದು ಮೂವರು ಭೂ ರಹಿತ ಕೃಷಿ ಕಾರ್ಮಿಕರನ್ನು ಜಮೀನ್ದಾರರ ಗೂಂಡಾಗಳು ಕೊಂದು ಹಾಕಿದರು. ಹತರಾದ ಮೂವರು ದಲಿತರಾಗಿದ್ದು ಅವರ ಶವಗಳನ್ನು ಗೂಂಡಾಗಳು ತೆಗೆದುಕೊಂಡು ಹೋಗಿರುವ ಸಂಭವವಿದೆ.

ಕಿಸಾನ್ ಸಭಾ ನೇತೃತ್ವದಲ್ಲಿ ರಾಜ್ಯಾದ್ಯಂತ ವಿಶೇಷವಾಗಿ ಪೂರ್ಣಿಯಾ ಜಿಲ್ಲೆಯಲ್ಲಿ ನಡೆಯುತ್ತಿರುವ ಭೂ ಹೋರಾಟದ ಹಿನ್ನೆಲೆಯಲ್ಲಿ ಈ ಮೂವರ ಹತ್ಯೆ ನಡೆದಿದೆ.

ಕಾಂಗ್ರೆಸ್ ಪಿತೂರಿ : ಅಖಿಲ ಭಾರತ ಕಿಸಾನ್ ಸಭಾ ಅಧ್ಯಕ್ಷ ಎಸ್.ಶಂಕರಯ್ಯ ಮತ್ತು ಪ್ರಧಾನ ಕಾರ್ಯದರ್ಶಿ ಆರ್.ಎಸ್. ಗೋಸ್ವಾಮಿ ಈ ಹೀನ ಕೃತ್ಯವನ್ನು ಕಟುವಾಗಿ ಖಂಡಿಸಿದ್ದಾರೆ. ಕ್ರಿಮಿನಲ್ ಭೂಮಾಲೀಕರನ್ನು ಬಂಧಿಸುವಂತೆ ಬಿಹಾರ ಸರಕಾರವನ್ನು ಒತ್ತಾಯಿಸಿದ್ದಾರೆ.

ಭೂ ಮಾಲೀಕರು ಒಗ್ಗಟ್ಟಾಗಿ ಭೂ ರಹಿತ ಬಡ ಕೃಷಿ ಕೂಲಿಕಾರರ ಮೇಲೆ ದೌರ್ಜನ್ಯ ನಡೆಸಲು ಕಾಂಗ್ರೆಸ್(ಐ) ನಾಯಕರು ಕುಮ್ಮಕ್ಕು ನೀಡುತ್ತಿದ್ದಾರೆಂದು ಈ ಇಬ್ಬರು ಮುಖಂಡರು ಆರೋಪಿಸಿದ್ದಾರೆ.

"ತ್ರಿಪುರಾ ವಿಜಯ : ಕರ್ನಾಟಕ ಜನತೆಯ ಹರ್ಷ

ತ್ರಿಪುರಾದಲ್ಲಿ ಎಡ-ಪ್ರಜಾಪ್ರಭುತ್ವ ರಂಗದ ಭಾರೀ ವಿಜಯ ಇಡೀ ದೇಶದ ಗಮನ ಸೆಳೆದ ದೇಶದ ಎಡ-ಪ್ರಜಾಪ್ರಭುತ್ವ ಶಕ್ತಿಗಳಿಗೆ ಅಪಾರ ಸಂತಸ, ಸ್ಫೂರ್ತಿ ತಂದ ಘಟನೆ. ಕಾಂಗ್ರೆಸ್ ಕೂಟದ ಭಾರೀ ಪರಾಭವ, ಬಿಜೆಪಿಗಾಗಿರುವ ಮುಖಭಂಗವೂ ಎಡ-ಜಾತ್ಯಾತೀತ ಶಕ್ತಿಗಳಿಗೆ ಹೊಸಬಲ ನೀಡಿದಂತಾಗಿದೆ. ದೇಶದಲ್ಲೆಡೆ ಈ ಮಹತ್ವದ ವಿಜಯೋತ್ಸವ ನಡೆಯುತ್ತಿದೆ. ಕರ್ನಾಟಕವೂ ಇದರಲ್ಲಿ ಹಿಂದೆ ಬಿದ್ದಿಲ್ಲ. ಕರ್ನಾಟಕದ ಹಲವೆಡೆ ನಡೆದ ವಿಜಯೋತ್ಸವಗಳ ವರದಿ:

ಬೆಂಗಳೂರು : ಏಪ್ರಿಲ್ 27ರಂದು ಎಡಿಎ ರಂಗಮಂದಿರದಲ್ಲಿ ನಡೆದ ವಿಜಯೋತ್ಸವ ಸಮಾರಂಭದಲ್ಲಿ ಸಿಪಿಐ(ಎಂ), ಸಿಪಿಐ, ಜನತಾದಳದ ರಾಜ್ಯ ಮುಖಂಡರುಗಳು ಭಾಗವಹಿಸಿದ್ದರು. ಕಾಂ.ಎಸ್.ಸೂರ್ಯನಾರಾಯಣರಾವ್, ರಾಜ್ಯ ಸಿಪಿಐ(ಎಂ) ಮುಖಂಡರು, ಕಾಂ.ಪಿ. ರಾಮಚಂದ್ರರಾವ್ ರಾಜ್ಯ ಕಾರ್ಯದರ್ಶಿ, ಕಾಂ. ವೆಂಕಟರಾಮ್ ಸಿಪಿಐ ರಾಜ್ಯ ಕಾರ್ಯದರ್ಶಿ, ಸಿದ್ದರಾಮಯ್ಯ ಜನತಾದಳದ ರಾಜ್ಯ ಮಹಾ ಕಾರ್ಯದರ್ಶಿ, ಕಾಂ.ನಾಗಮೋಹನದಾಸ್ ಡಿವೈಎಫ್ಐ ರಾಜ್ಯ ಅಧ್ಯಕ್ಷರು ಸಭೆಯಲ್ಲಿ ಮಾತನಾಡಿದರು. ಕಾಂ.ಆರ್.ಶ್ರೀನಿವಾಸ್ ಜಿಲ್ಲಾ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಕಾಂ.ಸೂರಿ ಮಾತನಾಡುತ್ತಾ ರೈಲ್ವೇ, ಕೈಗಾರಿಕೆ ಘಂಟಾದ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸುವ ಒಂದು ರಾಜ್ಯದಲ್ಲಿ 10 ವರ್ಷ ಆಡಳಿತ ಮಾಡಿದ ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರ ಬುಡಕಟ್ಟು ಜನರ ಸಮಸ್ಯೆಗೆ 'ಬುಡಕಟ್ಟು ಮಂಡಲಿ' ರಚಿಸಿತ್ತು. ಬುಡಕಟ್ಟು ಮತ್ತು ಇತರ ಜನರ ಸಾಮರಸ್ಯಕ್ಕೆ ಕೆಲಸ ಮಾಡಿತು. ಸರಕಾರ ನೀಡಿದ ಕಾಮಗಾರಿಗಳ ಕಾಂಟ್ರಾಕ್ಟ್‌ನಲ್ಲಿ ಆದ ಖರ್ಚು ವೆಚ್ಚ ವಿವರಗಳನ್ನು ಹುದ್ದೆಗಳ ನೇಮಕಾತಿಯಲ್ಲಿ 'ಾರಿಗೆ ಅವರ ಮೆರಿಟ್ ಏನು ಎಂಬುದನ್ನು ಬಹಿರಂಗವಾಗಿ ಪ್ರಕಟಿಸುವ ವ್ಯವಸ್ಥೆ ಮಾಡಲಾಗಿತ್ತು. ಸ್ವಚ್ಛ ದಕ್ಷ ಆಡಳಿತ ನೀಡಿತು.

ಆದರೆ 1989ರ ಚುನಾವಣೆಯಲ್ಲಿ [illegible] ಸರಕಾರ ತ್ರಿಪುರಾದಲ್ಲಿ ಪ್ರಕ್ಷುಬ್ಧ ವಾತಾವರಣದ ಹೆಸರಿನಲ್ಲಿ ಮಿಲಿಟರಿ ಕಳಿಸಿ, ಕಾಂಗ್ರೆಸ್-ಟಿಯುಜೆಎಸ್‌ನ ವ್ಯವಸ್ಥಿತ, ವ್ಯಾಪಕ ದೌರ್ಜನ್ಯ ರಿಗ್ಗಿಂಗ್ ಮೂಲಕ ಚುನಾವಣೆಗಳನ್ನು ಗೆಲ್ಲಲಾಯಿತು. ಈಗಲೂ ಆಡಳಿತ ಯಂತ್ರ ಪೋಲೀಸ್ ಯಂತ್ರದ ದುರ್ಬಳಕೆಗೆ ಯತ್ನ ಸಾಗಿತು. ಆದರೆ ತ್ರಿಪುರದ ಜನ ಅದಕ್ಕೆ ತಕ್ಕ ಉತ್ತರ ನೀಡಿದ್ದಾರೆ. ವ್ಯಾಪಕ ಅಬ್ಬರ ಅಪಪ್ರಚಾರ ನಡೆಸಿದ ಬಿಜೆಪಿ ಮಣ್ಣು ಮುಕ್ಕಿದೆ - ಕಾಂಗ್ರೆಸ್ ಕೇವಲ 10 ಸ್ಥಾನ ಪಡೆದಿದೆ. ಅದರಲ್ಲೂ ಐದು ಕ್ಷೇತ್ರದಲ್ಲಿ ರಿಗ್ಗಿಂಗ್ ನಡೆದಿದೆ ಎಂದು ಅವರು ವಿವರಿಸಿದರು.

ಜನತಾದಳದ ಸಿದ್ದರಾಮಯ್ಯ ಅವರು ಮಾತನಾಡಿ ತ್ರಿಪುರಾದ ಜನರ ತೀರ್ಪು ನಿಜಕ್ಕೂ ಮಹತ್ವದ್ದೂ ಎಂದರು. ದೌರ್ಜನ್ಯ- ಹಣ- ಭ್ರಷ್ಟಾಚಾರವೇ ಬಂಡವಾಳವಾದ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು ನರಸಿಂಹರಾವ್ ನೇತೃತ್ವದಲ್ಲಿ ಉದಾರ ಆರ್ಥಿಕ ನೀತಿಯ ಹೆಸರಿನಲ್ಲಿ ಶ್ರೀಮಂತರ ಪರವಾದ ಬಹುರಾಷ್ಟ್ರೀಯ ಕಂಪನಿಗೆ ಅನುಕೂಲಕರವಾದ ಜನ ವಿರೋಧಿ ಆರ್ಥಿಕ ನೀತಿಯನ್ನು ಜಾರಿಗೆ ತರುತ್ತಿದೆ. ಅಗತ್ಯ ವಸ್ತುಗಳ ಬೆಲೆಗಳು ಏರಿವೆ.

ಹಿಂದೆ ರಾಷ್ಟ್ರೀಯ ರಂಗ ಸರಕಾರ ಅಧಿಕಾರದಲ್ಲಿದ್ದಾಗ ಮಂಡಲ್ ಪ್ರಶ್ನೆಯಲ್ಲಿ ಸಾಮಾಜಿಕ ನ್ಯಾಯದ ವಿರುದ್ಧ ಕೆಲಸ ಮಾಡಿದ ಮತಾಂಧ ಬಿಜೆಪಿ ಈಗ ಹಿಂದುತ್ವದ ಹೆಸರಿನಲ್ಲಿ ಶ್ರೀರಾಮನನ್ನು ಚುನಾವಣಾ ಏಜೆಂಟ್‌ನಾಗಿ ಮಾಡಿಕೊಂಡು ಅಧಿಕಾರಕ್ಕೆ ಬರಲು ಹವಣಿಸುತ್ತಿದೆ. ತ್ರಿಪುರಾದ ಜನ ಈ ಎಲ್ಲವನ್ನೂ ಗಮನಿಸಿದ್ದಾರೆ. ಚರ್ಚೆ ಮಾಡಿದ್ದಾರೆ ಮತ್ತು ಅವುಗಳ ವಿರುದ್ಧ ಮತ ನೀಡಿದ್ದಾರೆ ಎಂದರು.

ಕರ್ನಾಟಕದ ಕಾಂಗ್ರೆಸ್ ಸರಕಾರವು ಅಣಕವಾಗಿದ್ದು ಭ್ರಷ್ಟಾಚಾರ ಮಿತಿ ಮೀರಿದೆ ಎಂದ ಅವರು ಮೇ 19ರಂದು ನಡೆಯುವ ಯಲಹಂಕ ಉಪ ಚುನಾವಣೆಯಲ್ಲಿ ಎಡ ಮತ್ತು ಇತರ ಪಕ್ಷಗಳ ಸಹಕಾರ ಕೋರಿದರು.

ಜನಪರವಾದ ಹೋರಾಟಕ್ಕೆ ತ್ಯಾಗ ಬಲಿದಾನಗಳಿಗೆ ನಿಸ್ವಾರ್ಥ ಕೆಲಸಕ್ಕೆ ಎಂದಿಗೂ ಬೆಲೆ ಇದೆ ಎಂಬುದಕ್ಕೆ ತ್ರಿಪುರಾದ ಈ ವಿಜಯವೇ ಸಾಕ್ಷಿ ಎಂದ ಸಿಪಿಐನ ರಾಜ್ಯ ಕಾರ್ಯದರ್ಶಿ ಕಾಂ.ಎಂ.ಸಿ. ವೆಂಕಟರಾಮ್ ಅವರು ಕೇಂದ್ರ ಕಾಂಗ್ರೆಸ್‌ನ ಬಹುರಾಷ್ಟ್ರೀಯ ಕಂಪೆನಿಗಳ ಶ್ರೀಮಂತಪರವಾದ ನೀತಿಗಳಿಂದಾಗಿ ದಾರಿದ್ರ್ಯ ರೇಖೆಯ ಕೆಳಗೆ ಬದುಕು ಸಾಗಿಸುತ್ತಿರುವವರ ಸಂಖ್ಯೆ ಶೇ. 51ಕ್ಕೇರಿದೆ. ಗುತ್ತೇದಾರಿ ಬಂಡವಾಳಗಾರರು ಬೆಳೆಯುತ್ತಿದ್ದಾರೆ. ಜನರಲ್ಲಿ ಬೆಳೆಯುತ್ತಿರುವ ಅತೃಪ್ತಿಯನ್ನು ಮತ್ತು ಜನರ ಧೈವಭಕ್ತಿಯನ್ನು ದುರುಪಯೋಗ ಮಾಡಿಕೊಂಡು ಕೋಮುವಾದಿ ಬಿಜೆಪಿ ಇಟ್ಟಿಗೆ ರಥ, ಪಾದುಕಾ ಯಾತ್ರೆಗಳನ್ನು ಮಾಡುತ್ತಿದೆ. ಪ್ರತಿಗಾಮಿಗಳು ಭಾರತದ ಮಣ್ಣಿಗೆ ಕಮ್ಯುನಿಸಂ ಹೊಂದುವುದಿಲ್ಲ, ಕಮ್ಯುನಿಸಂ ಸತ್ತಿದೆ ಎಂದೆಲ್ಲಾ ವಾದಗಳನ್ನು ಮಂಡಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ತ್ರಿಪುರಾದ ಜನರ ತೀರ್ಪು ನಮ್ಮ ಚಿಂತನೆಗೆ ಹೊಸ ಆಯಾಮವನ್ನು ತಂದುಕೊಟ್ಟಿದೆ. ತ್ರಿಪುರಾದ ಮಾದರಿ ರಾಷ್ಟ್ರಕ್ಕೆ ಮಾದರಿಯಾಗಿದೆ ಎಂದರು.

ತ್ರಿಪುರದಲ್ಲಿನ ಎಡಶಕ್ತಿಗಳ ವಿಜಯಕ್ಕೆ ಅಂತರಾಷ್ಟ್ರೀಯ ಮಹತ್ವವಿದೆ, ಸಂಸದೀಯ ಪ್ರಜಾಪ್ರಭುತ್ವದಲ್ಲಿ ಕಮ್ಯುನಿಸ್ಟರ ಬೆಳವಣಿಗೆ ಸಾಮ್ರಾಜ್ಯಶಾಹಿಗಳಿಗೆ ಬೆದರಿಕೆ ತಂದಿದೆ ಎಂದವರು ಕಾಂ. ನಾಗಮೋಹನದಾಸ್. ಜಂಟಿ ಹೋರಾಟಕ್ಕೆ ಇನ್ನೂ ಹೆಚ್ಚು ಮಹತ್ವ ನೀಡಬೇಕೆಂದು ಸೂಚಿಸಿದ ಅವರು ಸಮಾಜದ ವಿದ್ಯಾರ್ಥಿ-ಯುವಜನರನ್ನು ಪ್ರಜಾಪ್ರಭುತ್ವ ಚಳುವಳಿಯಲ್ಲಿ ತೊಡಗಿಸುವ ಕಡೆಗೆ ಹೆಚ್ಚು ಗಮನ ನೀಡಬೇಕೆಂದರು. ಹರಿಜನರ- ಗಿರಿಜನರ ಮೇಲಿನ ದೌರ್ಜನ್ಯ -ಅಯೋಧ್ಯೆ ಬೆಳವಣಿಗೆಯಿಂದ ಕಾಂಗ್ರೆಸ್ ಆ ಸಮುದಾಯಗಳ ವಿಶ್ವಾಸ ಕಳೆದುಕೊಂಡಿದೆ. ಜನವಿಭಾಗಗಳನ್ನೊಳಗೊಂಡಂತೆ ಐಕ್ಯ ಹೋರಾಟ ರೂಪಿಸಬೇಕೆಂದರು. ಹಿರಿಯ ಮುಖಂಡ ತ್ರಿಪುರಾದ ಮುಖ್ಯ ಮಂತ್ರಿ ದಶರಥ ದೇಬ್ ಅವರ ಶ್ರೀಮಂತ ಅನುಭವಗಳು ನಮಗೆ ಸ್ಫೂರ್ತಿಯಾಗಲಿ ಎಂದರು.

ಕಾಂ.ರಾಮಚಂದ್ರರಾವ್ ಮಾತನಾಡಿ ಮತಾಂಧ ಬಿಜೆಪಿಯು ಸಂವಿಧಾನ ವಿರೋಧಿ ಕೃತ್ಯಗಳನ್ನು ತೀವ್ರಗೊಳಿಸಿ ಗಲಭೆ ಮಾಡುವಾಗ ಕೇಂದ್ರ ಕಾಂಗ್ರೆಸ್ ಸರಕಾರ ನಿಷ್ಕ್ರಿಯವಾಗಿದ್ದು ತನ್ನ ಕರ್ತವ್ಯದಲ್ಲಿ ವಿಫಲವಾಯಿತು. ತ್ರಿಪುರ ವಿಜಯ ಈ ಮತಾಂಧತೆ ಮತ್ತು ನಿಷ್ಕ್ರಿಯತೆಗಳ ವಿರುದ್ಧದ ಜಯ ಎಂದರು. ರಾಷ್ಟ್ರೀಯರಂಗ- ಎಡರಂಗಗಳ ಸಂಯುಕ್ತ ಹೋರಾಟದ ಬಗ್ಗೆ ಇದ್ದ ಅನುಮಾನಗಳಿಗೂ ಈ ವಿಜಯವೂ ಉತ್ತರವಾಗಿದೆ ಎಂದು ಅವರು ಹೇಳಿದರು.

ಕಾಂಗ್ರೆಸ್-ಟಿಯುಜೆಎಸ್‌ಗಳ ಐದು ವರ್ಷಗಳ ಆಳ್ವಿಕೆಯಲ್ಲಿ ಆಕ್ರಮಣ, ದೌರ್ಜನ್ಯ, ಅತ್ಯಾಚಾರಕ್ಕೆ ಒಳಗಾದ ತ್ರಿಪುರಾದ ಮಹಿಳೆಯರು ಚುನಾವಣೆಯಲ್ಲಿ ತಮ್ಮ ಪ್ರತಿಭಟನೆಯನ್ನು ಸೂಚಿಸಿದ್ದಾರೆ. ಈ ವಿಜಯವನ್ನು ತಂದು ಕೊಟ್ಟಿದ್ದು ತ್ರಿಪುರಾದ ಮಹಿಳೆಯರು ಎಂದು ಅವರು ಮಹಿಳೆಯರನ್ನು ಅಭಿನಂದಿಸಿದರು.

ಜನರ ಅನಕ್ಷರತೆ - ಅಜ್ಞಾನ ಕಾಂಗ್ರೆಸ್ ಬಿಜೆಪಿಗಳ ಬಂಡವಾಳ. ತ್ರಿಪುರದಲ್ಲಿ ಕಮ್ಯುನಿಸ್ಟ್ ಚಳುವಳಿಯು ಆರಂಭವಾದದ್ದು ಅಕ್ಷರಾಭ್ಯಾಸದ ಮೂಲಕ ಎಂದರು. ರೈತರಿಗೆ ಭೂಮಿ, ಬೀಜ, ಬೆಳೆದ ಬೆಳೆಗೆ ಉತ್ತಮ ಬೆಲೆ ನೀಡಲಾಯಿತು. 89ರಲ್ಲಿ ಕಾಂಗ್ರೆಸ್-ಟಿಯುಜೆಎಸ್ ಗೆದ್ದಾಗ ರಿಗ್ಗಿಂಗ್ ನಡೆದಿದೆ ಎಂಬ ನಮ್ಮ ಆರೋಪವನ್ನು ಗೇಲಿ ಮಾಡಿದವರಿಗೆ ಈಗಿನ ಜನರ ತೀರ್ಪೇ ಉತ್ತರ ಎಂದರು.

ಅಧ್ಯಕ್ಷ ಭಾಷಣ ಮಾಡಿದ ಕಾಂ.ಆರ್.ಶ್ರೀನಿವಾಸ್ ಕಮ್ಯುನಿಸ್ಟರು ಪ್ರಜಾಪ್ರಭುತ್ವ ವಿರೋಧಿಗಳು ಎನ್ನುತ್ತಾರೆ. ಆದರೆ 1989ರ ಚುನಾವಣೆಯಲ್ಲಿ ಗೂಂಡಾಗಿರಿ ರಿಗ್ಗಿಂಗ್ ನಡೆದಿದ್ದರೂ ಸಹ ಅನಂತರ ನಮ್ಮ ಮೇಲೆ ಆಕ್ರಮಣ, ದೌರ್ಜನ್ಯಗಳ ಅವ್ಯಾಹತವಾಗಿ ನಡೆದರು ದೇಶದಲ್ಲಿ ರಾಷ್ಟ್ರೀಯ ರಂಗ ಅಧಿಕಾರದಲ್ಲಿದ್ದಾಗಲೂ ಅದನ್ನು ಬಳಸಿ ನಾವು ಕಾಂಗ್ರೆಸ್-ಟಿಯುಜೆಎಸ್ ಸರಕಾರವನ್ನು ಉರುಳಿಸಲು ಪ್ರಯತ್ನಿಸಲಿಲ್ಲ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಕಾಂ.ಪಿ.ಕೆ. ಸುಬ್ರಮಣಿ ಅವರು ವಿಷಯವನ್ನು ಪ್ರಸ್ತಾಪಿಸಿದರು.

ವರದಿ : ಆರ್. ರಾಮಕೃಷ್ಣ

ತ್ರಿಪುರಾ ವಿಜಯೋತ್ಸವ

ಉಡುಪಿ : ತ್ರಿಪುರಾದಲ್ಲಿ ಎಡರಂಗದ ವಿಜಯದ ಸುದ್ದಿ ತಲುಪಿದಂತೆಯೇ ಉಡುಪಿಯಲ್ಲಿ 7-4-93ರಂದು ಕಾರ್ಮಿಕರು ಮತ್ತು ಪಕ್ಷದ ಹಿತೈಷಿಗಳು, ಸದಸ್ಯರು ಸೇರಿ ಮೆರವಣಿಗೆ ನಡೆಸಿದ ನಂತರ ಉಡುಪಿ ರಥ ಬೀದಿಯಲ್ಲಿ ಸಭೆ ನಡೆಸಲಾಯಿತು. ಸಿಪಿಐ(ಎಂ) ಉಡುಪಿ ತಾಲೂಕು ಸಮಿತಿಯ ಕಾರ್ಯದರ್ಶಿ ಕಾ.ಡೆವಿಡ್ ಕರ್ಕಡ ಮಾತನಾಡುತ್ತಾ "ತ್ರಿಪುರಾದ ಅದ್ಭುತವಾದ ವಿಜಯದ ಹಿಂದೆ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಹೋರಾಟದಲ್ಲಿ ಅಪಾರವಾದ ತ್ಯಾಗ ಬಲಿದಾನಗಳನ್ನು ನಡೆಸಿದ ತ್ರಿಪುರಾದ ಜನತೆಗೆ ಕ್ರಾಂತಿಕಾರಿ ವಂದನೆಗಳನ್ನು ಅರ್ಪಿಸಬೇಕಾಗಿದೆ. ಭಾರತದಲ್ಲಿ ಈ ಚುನಾವಣೆಯ ಫಲಿತಾಂಶ ಪರಿಣಾಮ ಬೀರಲಿದೆ" ಎಂದು ತಿಳಿಸಿದರು.

ಬಳ್ಳಾರಿ: ತ್ರಿಪುರಾ ರಾಜ್ಯದಲ್ಲಿ ಸಿಪಿಐ(ಎಂ) ನೇತೃತ್ವದ ಪ್ರಚಂಡ ಜಯ ಸಾಧಿಸಿದ ಸಂತಸದ ಸಂದರ್ಭದಲ್ಲಿ ಬಳ್ಳಾರಿ ನಗರದ ಪಕ್ಷದ ಕಛೇರಿಯಲ್ಲಿ ವಿಜಯೋತ್ಸವ ಸಭೆ ದಿನಾಂಕ 10-4-93ರಂದು ಯಶಸ್ವಿಯಾಗಿ ನಡೆಯಿತು. ಸುಮಾರು 50ಕ್ಕೂ ಹೆಚ್ಚಿನ ಕಾರ್ಯಕರ್ತರು ಹಾಜರಿದ್ದರು. ಸಭೆಯ ಪ್ರಾರಂಭದಲ್ಲಿ ದಕ್ಷಿಣ ಆಫ್ರಿಕಾ ಕ್ರಾಂತಿಕಾರಿ ಮುಖಂಡ ಕ್ರಿಸ ಹನಿ ಅವರ ಕಗ್ಗೊಲೆಯನ್ನು ಖಂಡಿಸಲಾಯಿತು ಹಾಗೂ ಕ್ರಾಂತಿಕಾರಿ ಚಳುವಳಿಯ ಪರಂಪರೆ ಎತ್ತಿ ಹಿಡಿದು ಮುನ್ನಡೆಯುವುದೇ ನಿಜವಾದ ಶ್ರದ್ಧಾಂಜಲಿ ಸಲ್ಲಿಸಲಾಗುತ್ತದೆಂದು ಠರಾವು ಮಾಡಿ ಒಂದು ನಿಮಿಷ ಮೌನ ಆಚರಿಸಿ ಗೌರವ ಶ್ರದ್ಧಾಂಜಲಿ ಸಲ್ಲಿಸಲಾಯಿತು. ತ್ರಿಪುರ ರಾಜ್ಯದಲ್ಲಿ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರ ಹಾಗೂ ಮುಖಂಡರ, ಜನತೆಯ ತ್ಯಾಗ ಬಲಿದಾನವನ್ನು ಮುಕ್ತ ಕಂಠದಿಂದ ಶ್ಲಾಘಿಸಲಾಯಿತು. ಬಂಡವಾಳಶಾಹಿ ಭೂ ಮಾಲಕ ಶಕ್ತಿಗಳು ಕಮ್ಯುನಿಸಂ ಬಗ್ಗೆ ತೀವ್ರ ನಾಶದ ಅಂಚಿನಲ್ಲಿದೆ ಎಂದು ಎಲ್ಲ ಜನತೆಗೂ ತುಂಬಾ ಹಿಗ್ಗಿ ಪ್ರಚಾರ ನಡೆಸುತ್ತಿರುವ ಈ ಸಂಧರ್ಭದಲ್ಲಿ ದೇಶದ ಉತ್ಸಾಹ ತುಂಬಿದೆ ಎಂದು ಸಭೆ ಅಭಿಪ್ರಾಯಪಟ್ಟು ಈ ಹಿಂದೆ ಕಾಂಗ್ರೆಸ್ ಮತ್ತು ಟಿಯುಜೆಎಸ್ ಗುಂಡಾ ಬಲ ಪ್ರದರ್ಶನ ಹಾಗೂ ಧಾಳಿಯಿಂದ ಮಿಲಿಟರಿ ಸಹಾಯದಿಂದ ಗೆದ್ದಿತ್ತು. ಆದರೆ ಈಗ ಕೇವಲ ಐದು ವರ್ಷಗಳ ನಂತರ ಹೇಳ ಹೆಸರಿಲ್ಲದಂತೆ ಜನತೆ ತಿರಸ್ಕರಿಸಿರುವುದು ಅವರ ನಿಜ ಸ್ವರೂಪ ಬಯಲಾಗಿದೆ. ಹಾಗೂ ನಾವೇ ಪರ್ಯಾಯ ಎಂದು ಜನತೆಯನ್ನು ವಿಭಜಿಸಿ ಕೋಮು ದ್ವೇಷ ಹರಡಿಸುತ್ತಿರುವ ಬಿಜೆಪಿ ಸ್ಪರ್ಧಿಸಿದ್ದೂ ಠೇವಣಿ ಕಳೆದುಕೊಳ್ಳುವಂತೆ ಆಗಿರುವುದು ಜನರ ನಿಜ ಅಭಿಪ್ರಾಯ ವ್ಯಕ್ತವಾಗಿದೆ ಎಂದು ಸಭೆ ಅಭಿಪ್ರಾಯಪಟ್ಟಿತು. ಸಭೆಯ ಆರಂಭದಲ್ಲಿ ಸ್ಥಳೀಯ ಸಮಿತಿ ಕಾರ್ಯದರ್ಶಿ ಕಾ. ಯು ಬಸವರಾಜ್ ಸ್ವಾಗತಿಸಿದರು. ಸಭೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ.ಪ್ರಸನ್ನ ಕುಮಾರ್, ಜಲಮಂಡಲಿ ನೌಕರರ ಸಂಘದ ಮುಖಂಡ ಕಾಂ.ರಘು ಹಾಗೂ ಗ್ರಾಮೀಣ ಬ್ಯಾಂಕ್ ನೌಕರರ ಮುಖಂಡ ಕಾ.ನಾಗಭೂಷಣ ಮಾತನಾಡಿದರು.

ಪಾಕಿಸ್ತಾನದಲ್ಲಿ ಬೆನಜೀರ್ ಭುಟ್ಟೋ ತಿಪ್ಪರಲಾಗ

ಅಧ್ಯಕ್ಷ ಗುಲಾಂ ಇಷಾಕ್ ಖಾನ್ ಹಾಗೂ ಪ್ರಧಾನ ಮಂತ್ರಿ ನವಾಜ್ ಶರೀಫ್‌ರ ನಡುವೆ ಆದ ವಿರಸ, ಅವರ ಸರಕಾರದ ವಜಾ ಹಾಗೂ ರಾಷ್ಟ್ರೀಯ ಅಸೆಂಬ್ಲಿಯ ವಿಸರ್ಜನೆಯಲ್ಲಿ ಕೊನೆಗೊಂಡಿದೆ. ಅವರ ಸರಕಾರವನ್ನು ಭ್ರಷ್ಟಾಚಾರ ಮತ್ತು ದುರಾಡಳಿತದ ಆಪಾದನೆ ಮೇಲೆ ವಜಾ ಮಾಡಲಾಗಿದೆ. ಇದೇ ಆಪಾದನೆ ಮೇಲೆ ಮೂರು ವರ್ಷಗಳ ಹಿಂದೆ ಬೆನಜಿರ್ ಭುಟ್ಟೋ ಸರಕಾರವನ್ನು ವಜಾ ಮಾಡಲಾಗಿತ್ತು. ಅವರ ಹಿಂದಿನ ಜುನೆಜೋ ಸರಕಾರವನ್ನು ವಜಾ ಮಾಡಲಾಗಿತ್ತು. ಈ ರೀತಿ ಕಳೆದ ಐದು ವರ್ಷಗಳಲ್ಲಿ ಪಾಕಿಸ್ತಾನ ಮೂರು ಸರಕಾರಗಳನ್ನು ಕಂಡಿದೆ. ದೇಶದಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಸುಭದ್ರ ತಳಹದಿ ಮೇಲೆ ನೆಲೆಗೊಳಿಸುವ ಪಾಕಿಸ್ತಾನಿಯರ ಕನಸು ಭಗ್ನಗೊಂಡಿದೆ. ಸಂವಿಧಾನದ ಪ್ರಕಾರ 90 ದಿನಗಳೊಳಗಾಗಿ ಚುನಾವಣೆಗಳು ನಡೆಯಬೇಕು. ಜುಲೈ 14ರಂದು ಚುನಾವಣೆಗಳನ್ನು ಘೋಷಿಸಲಾಗಿದೆ. ಬೆನಜಿರ್ ಭುಟ್ಟೋರ ಪಾಕಿಸ್ತಾನ ಪೀಪಲ್ಸ್ ಪಾರ್ಟಿ(ಪಿಪಿಪಿ) ನವಾಜ್ ಶರೀಫ್‌ರ ಸರಕಾರ ವಜಾ ಮಾಡಿದ್ದನ್ನು ಬೆಂಬಲಿಸಿದೆ. ಅಧ್ಯಕ್ಷರಿಗೆ ಸರಕಾರ ಹಾಗೂ ರಾಷ್ಟ್ರೀಯ ಅಸೆಂಬ್ಲಿಯನ್ನು ವಜಾ ಮಾಡಲು ಇರುವ ನಿರಂಕುಶ ಅಧಿಕಾರವನ್ನು ವಿರೋಧಿಸುತ್ತಾ ಬಂದಿದ್ದ ಪಿಪಿಪಿ ಈಗ ರಾಜಕೀಯ ತಿಪ್ಪರಲಾಗ ಹಾಕಿದೆ. ಪಿಪಿಪಿ ಅಧ್ಯಕ್ಷರಿಗೆ ಕೊಟ್ಟ ಬೆಂಬಲ ನವಾಜ್ ಶರೀಫ್ ಸರಕಾರವನ್ನು ವಜಾ ಮಾಡುವ ನಿರ್ಧಾರದಲ್ಲಿ ಮಹತ್ವದ ಪಾತ್ರ ವಹಿಸಿದೆ ಎನ್ನಲಾಗಿದೆ. ಮಾತ್ರವಲ್ಲ, ಅಧ್ಯಕ್ಷರು ನೇಮಿಸಿರುವ ಮಧ್ಯಂತರ ಸರಕಾರದಲ್ಲಿ ಪಿಪಿಪಿಯ ಮಂತ್ರಿಗಳನ್ನು ನೇಮಿಸಲಾಗಿದೆ. ಬೆನಜಿರ್ ಭುಟ್ಟೋ ಪತಿ ಅಸಿಫ್ ಅಲಿ ಝರ್‌ದಾರಿ ಮಧ್ಯಂತರ ಸರಕಾರದ ಮಂತ್ರಿಗಳಲ್ಲೊಬ್ಬರು. ಪ್ರಧಾನ ಮಂತ್ರಿಯಾಗಿ ಒಲಾಕ್ ಶೇರ್ ಮಜಾರಿಯವರನ್ನು ನೇಮಿಸಲಾಗಿದ್ದು, 19 ಜನರ ಮಂತ್ರಿ ಮಂಡಲವನ್ನು ನೇಮಿಸಲಾಗಿದೆ. ಮಧ್ಯಂತರ ಸರಕಾರದಲ್ಲಿ ಅಧ್ಯಕ್ಷರ ಒಲವಿರುವ ರಾಜಕೀಯ ಪಕ್ಷ ಗುಂಪುಗಳನ್ನು ಮಾತ್ರ ಸೇರಿಸಿಕೊಳ್ಳಲಾಗಿದೆ. ಗುಪ್ತಚಾರ ಪಡೆ ಐಎಸ್‌ಐ ಹಾಗೂ ಆಂತರಿಕ ಗುಪ್ತಚಾರ ಸಂಸ್ಥೆ ಐಬಿಯ ಮಧ್ಯಸ್ಥರನ್ನೂ ವಜಾ ಮಾಡಲಾಗಿದೆ.

ವಜಾ ಮಾಡಲ್ಪಟ್ಟ ಪ್ರಧಾನಿ ನವಾಜ್ ಶರೀಫ್ ಅಧ್ಯಕ್ಷರ ಕ್ರಮವನ್ನು 'ಕಾನೂನುಬಾಹಿರ, ಅಸಂವೈಧಾನಿಕ ಹಾಗೂ ಅನೈತಿಕ' ಎಂದು ಕರೆದಿದ್ದಾರೆ. ಅಧ್ಯಕ್ಷರ ಕ್ರಮದ ವಿರುದ್ಧ ಪ್ರಚಾರಕ್ಕೆ ರಾವಲ್ಪಿಂಡಿಯಿಂದ ಕರಾಚಿಯವರೆಗೆ ರೈಲು ಜಾಥಾ ಹೊರಡುವುದಾಗಿ ಘೋಷಿಸಿದ್ದಾರೆ.

ಈ ನಡುವೆ ವಿಸರ್ಜಿತ ರಾಷ್ಟ್ರೀಯ ಅಸೆಂಬ್ಲಿಯ ಸ್ಪೀಕರ್ ರಾವಲ್ಪಿಂಡಿ ಹೈಕೋರ್ಟ್‌ನಲ್ಲಿ ಅಸೆಂಬ್ಲಿ ವಿಸರ್ಜನೆ ವಿರುದ್ಧ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಏಪ್ರಿಲ್ 19ರಂದು ಆರಂಭವಾಗಲಿದ್ದ ರಾಷ್ಟ್ರೀಯ ಅಸೆಂಬ್ಲಿ ಅಧಿವೇಶನಕ್ಕೆ ಅವಕಾಶ ನೀಡಬೇಕೆಂದು ಕೋರ್ಟನ್ನು ಅವರು ಕೋರಿದ್ದಾರೆ.

ದೇಶದ ರಾಜಕೀಯ ಪಕ್ಷಗಳು ಆಳವಾದ ಜನಬೆಂಬಲ ಆಧಾರಿತ ನೆಲೆ ಬೆಳೆಸಿಕೊಳ್ಳುವವರೆಗೆ, ದೇಶದ ರಾಜಕೀಯದಲ್ಲಿ ಸೈನ್ಯದ ಪ್ರಭಾವ ದಟ್ಟವಾಗಿರುವವರೆಗೆ ಪ್ರಜಾಪ್ರಭುತ್ವಕ್ಕೆ ಅಪಾಯ ತಪ್ಪಿದ್ದಲ್ಲ. ಅಧ್ಯಕ್ಷರ ರಾಜಕೀಯ ಬೆಂಬಲದ ನೆಲೆ ಬರಿ ಸೈನ್ಯ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಪಾಕಿಸ್ತಾನವನ್ನು 'ಭಯೋತ್ಪಾದಕ ದೇಶ' ಎಂದು ಘೋಷಿಸಲು ಅಧ್ಯಕ್ಷ ಕ್ಲಿಂಟನ್ ಸರಕಾರ ಹೆಚ್ಚು ಕಡಿಮೆ ನಿರ್ಧರಿಸಿರುವುದೂ ಆ ದೇಶದ ರಾಜಕೀಯದ ಮೇಲೆ ಪ್ರಭಾವ ಬೀರಬಹುದು. ಹಿಂದೆ ಅಫ್‌ಘಾನಿಸ್ತಾನ, ಭಾರತಗಳ ವಿರುದ್ಧ ಭಯೋತ್ಪಾದಕ ಕಾರ್ಯಗಳನ್ನು ಮಾಡಲು ಪಾಕಿಸ್ತಾನಿ ಸೈನ್ಯ ಹಾಗೂ ಗುಪ್ತಚಾರ ಪಡೆಗಳನ್ನು ಬಳಸಿದ್ದು ಅಮೇರಿಕವೇ. ಈಗ ಅದೇ ಅಮೇರಿಕಾ ಪಾಕಿಸ್ತಾನವನ್ನು 'ಭಯೋತ್ಪಾದಕ ದೇಶ'ವೆಂದು ಕರೆಯುವುದು ಸಾಮ್ರಾಜ್ಯಶಾಹಿ ರಾಜಕೀಯದ ಕ್ರೂರ ವ್ಯಂಗ್ಯಗಳಲ್ಲೊಂದು.



ಇಟಲಿಯಲ್ಲಿ ಕಮ್ಯುನಿಸ್ಟರ ಮತಪ್ರದರ್ಶನ

ಎಎನ್‌ಸಿ ಸವಿನಯ ಕಾನೂನುಭಂಗ ಚಳುವಳಿ

ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ನಾಯಕ ಕ್ರಿಸ್ ಹನಿಯವರ ಕೊಲೆಯ ಸಂತಾಪ ಸೂಚಕ ವಾರದ ನಂತರ ಆರು ವಾರಗಳ ಸವಿನಯ ಕಾಯಿದೆ ಭಂಗ ಚಳುವಳಿ ನಡೆಸುವುದಾಗಿ ಘೋಷಿಸಿದೆ. ವರ್ಣಭೇದ-ರಹಿತ ಚುನಾವಣೆಗೆ ತಾರೀಕು ಘೋಷಿಸುವ ತನಕ ಈ ಕಾಯಿದೆ ಭಂಗ ಚಳುವಳಿ ಮುಂದುವರಿಯುವುದೆಂದು ಘೋಷಿಸಿದೆ. ಇದರ ಜೊತೆ ತೀವ್ರ ಸಾಮೂಹಿಕ ಕಾರ್ಯಾಚರಣೆಯ ಕಾರ್ಯಕ್ರಮವನ್ನು ಎಎನ್‌ಸಿ ಘೋಷಿಸಿದೆ.

ಕ್ರಿಸ್ ಹನಿಯವರ ಕೊಲೆಯ ಹಿನ್ನೆಲೆಯಲ್ಲಿ ಭಾರಿ ಹಿಂಸಾಚಾರ ನಡೆಯಬಹುದೆಂಬ ಆತಂಕ ನಿಜವಾಗಿಲ್ಲ. ಹಲವಾರು ಕಡೆ ಕರಿಯ ಯುವಕರು ಬಿಳಿಯರ ಮೇಲೆ ಆಕ್ರಮಣ, ಲೂಟಿಯಲ್ಲಿ ತೊಡಗಿದರೂ, ಹೆಚ್ಚಾಗಿ ಜನ ಸತ್ತಿರುವುದು ಪೋಲೀಸು ಗೋಲಿಬಾರಿನಿಂದ. ಬಲಪಂಥೀಯ ಪ್ರಚೋದನೆ ನಡುವೆಯೂ ಎಎನ್‌ಸಿ ನಾಯಕತ್ವದ ವರ್ಣಭೇದ ಚಳುವಳಿ ಹಾಗೂ ಜನತೆ ಭಾರೀ ತಾಳ್ಮೆ ಸ್ವನಿಯಂತ್ರಣ ಪ್ರದರ್ಶಿಸಿದ್ದಾರೆ. ಅದರಲ್ಲೂ ಕರಿಯ ಯುವಕರು ಏಕೆಂದರೆ ಕ್ರಿಸ್ ಹನಿ ಕರಿಯ ಯುವಕರ ನೆಚ್ಚಿನ ನಾಯಕರಾಗಿದ್ದರು. ಅತಿ ಹಿಂಸಾಚಾರಕ್ಕೆ ಇಳಿಯಬಲ್ಲ ಯುವಕರನ್ನು ತಮ್ಮ ವರ್ಚಸ್ಸಿನಿಂದ ನಿಯಂತ್ರಣದಲ್ಲಿಡಬಲ್ಲ ಕೆಲವೇ ನಾಯಕರಲ್ಲಿ ಕ್ರಿಸ್ ಹನಿ ಒಬ್ಬರಾಗಿದ್ದರು.

ಸರಕಾರ ಮೊದಲ ಪ್ರತಿಕ್ರಿಯೆಯಾಗಿ ಎಎನ್‌ಸಿಯ ಸಾಮೂಹಿಕ ಚಳುವಳಿಯ ಕಾರ್ಯಕ್ರಮ ಇನ್ನಷ್ಟು ಹಿಂಸಾಚಾರಕ್ಕೆ ದಾರಿ ಮಾಡಿಕೊಡುವುದು ಎಂದು ಹೇಳುವ ಮೂಲಕ ವರ್ಣಭೇದರಹಿತ ಚುನಾವಣೆಯ ಪ್ರಮುಖ ವಿಚಾರವನ್ನು ಮರೆ ಮಾಚುವ ಪ್ರಯತ್ನ ಮಾಡಿತು. ಆದರೆ ಈಗಾಗಲೇ ಆರಂಭವಾಗಿರುವ ಎಎನ್‌ಸಿ ಚಳುವಳಿಯ ಬಿರುಸಿನಿಂದ ದಕ್ಷಿಣ ಆಫ್ರಿಕಾ ಸರಕಾರಕ್ಕೆ ಪರಿಸ್ಥಿತಿಯ ಗಂಭೀರತೆ ಅರಿವಾಗಿದೆ. ಎಎನ್‌ಸಿಯ ಗಡುವು ಆರು ವಾರಗಳೊಳಗೆ ವರ್ಣಭೇದ-ರಹಿತ ಚುನಾವಣೆಯ ತಾರೀಕು ಘೋಷಿಸಲಾಗುವುದು ಎಂದು ಸರಕಾರ ವಕ್ತಾರರು ಇತ್ತೀಚೆಗೆ ಹೇಳಿದ್ದಾರೆ.

ಇಟಲಿಯಲ್ಲಿ ಚುನಾವಣಾ ಪದ್ಧತಿ ಬದಲಾವಣೆಗೆ ಜನ ಬೆಂಬಲ

ಇಟಲಿಯಲ್ಲಿ ಈಗ ಜಾರಿಯಲ್ಲಿರುವ ಮತ ಸಂಖ್ಯೆಯ ಅನುಪಾತದ ಅನುಸಾರ ಪ್ರಾತಿನಿಧ್ಯವನ್ನು ಬದಲಾಯಿಸಲು ಜನಮತಸಂಗ್ರಹದಲ್ಲಿ ಭಾರೀ ಬೆಂಬಲ ದೊರಕಿದೆ. ಶೇಕಡಾ 83ರಷ್ಟು ಜನ ಪದ್ಧತಿಯನ್ನು ಬದಲಾಯಿಸುವ ಪರ ಮತ ನೀಡಿದ್ದಾರೆ.


ಇತರ ಪಶ್ಚಿಮ ಯುರೋಪಿನ ದೇಶಗಳಲ್ಲಿ ಜಾರಿಯಲ್ಲಿರುವ ಈ ಪದ್ಧತಿ ಇಟಲಿಯಲ್ಲಿ ಮಾತ್ರ ತೀವ್ರ ರಾಜಕೀಯ ಅನಿಶ್ಚಿತತೆಗೆ ಎಡೆ ಕೊಟ್ಟಿದೆ. ಎರಡನೇ ಮಹಾಯುದ್ಧದ ನಂತರದ 45 ವರ್ಷಗಳಲ್ಲಿ 52 ಸರಕಾರಗಳು ಆಳಿವೆ. ಯಾವ ಸರಕಾರವೂ ಐದು ವರ್ಷಗಳ ಅಧಿಕಾರ ಅವಧಿ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಎರಡು ಮೂರು ದಶಕಗಳ ಕಾಲ ಕ್ರಿಶ್ಚಿಯನ್ ಡೆಮೊಕ್ರಾಟ್ ಎಂಬ ಆಳುವ ವರ್ಗಗಳ ಪಕ್ಷ ಹಾಗೂ ಇಟಾಲಿಯನ್ ಕಮ್ಯುನಿಸ್ಟ್ ಪಕ್ಷ ಶೇಕಡಾ 30ರಿಂದ 35 ಮತಗಳಿಸುತ್ತಿದ್ದವು. ಶೀತ ಸಮರದ 50, 60, 70ರ ದಶಕಗಳಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಅಧಿಕಾರದಿಂದ ಹೊರಗಿಡುವ ಏಕಮಾತ್ರ ಉದ್ದೇಶದಿಂದ ಇತರ ಎಲ್ಲಾ ಪಕ್ಷಗಳು ಕೂಟ ರಚಿಸಿ ಅಧಿಕಾರ ನಡೆಸುತ್ತಿದ್ದವು. ಆದರೆ ಯಾವುದೇ ಪಕ್ಷಗಳ ಕೂಟ ಒಂದು ಕನಿಷ್ಠ ಕಾರ್ಯಕ್ರಮ ಆಧರಿಸದಿದ್ದರೆ ಸಾಮಾನ್ಯವಾಗಿ ಉದ್ಭವಿಸುವ ಅನಿಶ್ಚಿತತೆ, ಅಭದ್ರತೆ ಸರ್ವೇಸಾಮಾನ್ಯವಾಗಿತ್ತು. ಯಾವುದೇ ಇಂತಹ ಕೂಟ 1-2 ವರ್ಷಗಳಿಗಿಂತ ಹೆಚ್ಚು ಬಾಳುತ್ತಿರಲಿಲ್ಲ.

ಈ ಪದ್ಧತಿಯೇ ಇಟಲಿಯ ರಾಜಕೀಯ ಅನಿಶ್ಚಿತತೆಗೆ ಕಾರಣ ಎನ್ನುವುದು ಬಹುಶಃ ತಪ್ಪಾದೀತು. ಆದರೆ ಇಟಾಲಿಯನ್ನರು ಆ ರೀತಿಯ ನಿರ್ಣಯಕ್ಕೆ ಬಂದಂತೆ ಕಾಣುತ್ತದೆ. ಪಕ್ಷಗಳ ಮತ ಗಳಿಕೆಯ ಅನುಪಾತದಲ್ಲಿ ಸೀಟುಗಳನ್ನು ಕೊಡುವ ಚುನಾವಣಾ ಪದ್ಧತಿ ಭಾರತದಲ್ಲಿ ತರಬೇಕೆಂದು ನಮ್ಮ ಪಕ್ಷ ಒತ್ತಾಯಿಸುತ್ತಿದೆ ಎಂಬು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಹುದು.

ಶ್ರೀಲಂಕಾದಲ್ಲಿ ವಿರೋಧಪಕ್ಷದ ನಾಯಕನ ಕೊಲೆ

ಶ್ರೀಲಂಕಾದ ವಿರೋಧ ಪಕ್ಷಗಳಲ್ಲೊಂದಾದ ಡೆಮೊಕ್ರಾಟಿಕ್ ಯುನೈಟೆಡ್ ನ್ಯಾಶನಲ್ ಫ್ರಂಟ್(ಡಿಯುಎನ್‌ಎಫ್)ನ ನಾಯಕ ಲಲಿತ ಅತುಲತ ಮುದಲಿಯವರನ್ನು ಕೊಲೆ ಮಾಡಲಾಗಿದೆ. ಅವರು ಚುನಾವಣಾ ರ್‍ಯಾಲಿಯೊಂದರಲ್ಲಿ ಭಾಷಣ ಮಾಡುತ್ತಿದ್ದಾಗ, ಗನ್ ಧಾರಿಯೊಬ್ಬ ವೇದಿಕೆಯ ಹಿಂದಿನಿಂದ ಹಾರಿಸಿದ ಗುಂಡಿಗೆ ಅವರು ಬಲಿಯಾದರು. ಲಲಿತ ಅತುಲತ ಮುದಲಿ ಅಧ್ಯಕ್ಷ ಪ್ರೇಮದಾಸ ಅವರ ಮಂತ್ರಿಮಂಡಲದಲ್ಲಿ ಆಂತರಿಕ ಭದ್ರತೆ ಮಂತ್ರಿಯಾಗಿದ್ದರು. ಅಧ್ಯಕ್ಷ ಪ್ರೇಮದಾಸ ಅವರ ವಿರುದ್ಧ ನಡೆಸಿದ ದಂಗೆಯ ಫಲವಾಗಿ ಆಳುವ ಪಕ್ಷದಿಂದ ಹೊರನಡೆದು ಬೇರೆ ಪಕ್ಷ ಸ್ಥಾಪಿಸಿದ್ದರು.

ಲೋಕ ಸಂಚಾರ



ಒಲಿವರ್ ತಾಂಬೋ ನಿಧನ

ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್‌ನ ಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದ ಒಲಿವರ್ ರೆಜಿನಾಲ್ಡ್ ತಾಂಬೋ ನಿಧನ ಹೊಂದಿದ್ದಾರೆ. ಹಲವು ದಶಕಗಳ ಕಾಲ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಅವರು, ನೆಲ್ಸನ್ ಮಂಡೇಲಾ ವಿಶ್ವವಿದ್ಯಾನಿಲಯಗಳಲ್ಲಿ ಸಹಪಾಠಿ, ವಕಾಲತ್ತಿನಲ್ಲಿ ಸಹಚರರಾಗಿದ್ದರು.

ನೆಲ್ಸನ್ ಮಂಡೇಲಾ ಬಂಧಿತರಾಗಿದ್ದ 27 ವರ್ಷಗಳ ಕಾಲ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ಭೂಗತವಾಗಿದ್ದ ವರ್ಷಗಳು ಸಹ. ಆಗ ಎಎನ್‌ಸಿಯನ್ನು ಪ್ರಬಲ ಸಂಘಟನೆಯಾಗಿ ಬೆಳೆಸಿದ, ಅವರ ಹತ್ತು ಹಲವಾರು ವರ್ಣಭೇದ-ವಿರೋಧಿ ಗುಂಪುಗಳನ್ನು ಒಗ್ಗೂಡಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ.

ಗ್ಯಾಟ್ ಏನದು?

ಪು/ಟ 4 ರಿಂದ

ಹಲವು ವಿಷಯಗಳನ್ನು ಸೇರಿಸುವ ಪ್ರಯತ್ನ ನಡೆಯಿತು. 1986ರಲ್ಲಿ ಉರುಗ್ವೇ ದೇಶದ ಪುಂಡಾ ಡೆಲ್‌ಎಸ್ತೆ ಎಂಬಲ್ಲಿ ನಡೆದ ಸಭೆಯಲ್ಲಿ ಭಾರತ ಮತ್ತು ಬ್ರೆಜಿಲ್ ಇವನ್ನು ವಿರೋಧಿಸಿದವು. ಸರಕುಗಳ ವ್ಯಾಪಾರ, ಬ್ಯಾಂಕಿಂಗ್, ವಿಮೆ ಮುಂತಾದ ಸೇವಾ ವಿಭಾಗಗಳು ಹಾಗೂ ಬೌದ್ಧಿಕ ಆಸ್ತಿ ಹಕ್ಕು ಕುರಿತಂತೆ ಮಾತುಕತೆಗಳು ನಡೆಯಬೇಕಾದರೆ ಅವು ಬೇರೆ ರೀತಿಯಲ್ಲೇ ನಡೆಯುತ್ತವೆ ಎಂಬ ವಚನವನ್ನು ಅಲ್ಲಿ ನೀಡಲಾಯಿತು. ಈಗ ಡಂಕೆಲ್ ಪ್ರಸ್ತಾವಗಳ ಮೂಲಕ ಆ ವಚನವನ್ನು ಮುರಿಯಲಾಗುತ್ತವೆ. ಈ ಎಲ್ಲಾ ಅಂಶಗಳ ಮೇಲೆ ಬಡ ದೇಶಗಳಿಗೆ ಪ್ರತಿಕೂಲವಾದ ಒಂದು ಒಪ್ಪಂದಕ್ಕೆ ಬರುವಂತೆ ಒತ್ತಡ ಹಾಕಲಾಗುತ್ತಿದೆ.

ಕಳೆದ ಒಂದು ದಶಕದಲ್ಲಿ ಗೋಧಿ, ಕಾಫಿ, ಕಾಯಿಪಲ್ಲೆ, ಅದುರುಗಳು ಮುಂತಾದ ಸರಕುಗಳ ಬೆಲೆ ತೀವ್ರವಾಗಿ ಇಳಿಮುಖವಾಗಿ ಇವುಗಳನ್ನು ರಫ್ತು ಮಾಡುವ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಭಾರೀ ಅನ್ಯಾಯವಾಗಿದೆ. ಆದರೆ ಇದುವರೆಗೆ ಅತ್ಯಂತ ವ್ಯಾಪಕವೆನ್ನಲಾಗುತ್ತಿರುವ ಎಂಟನೇ ಸುತ್ತಿನ ಮಾತುಕತೆಗಳಲ್ಲಿ ಬಹುಪಾಲು ಸದಸ್ಯ ರಾಷ್ಟ್ರಗಳಿಗೆ ಮಹತ್ವದ ಈ ವಿಷಯ ಸೇರಿಯೇ ಇಲ್ಲ, ಬದಲಾಗಿ ಶ್ರೀಮಂತ ದೇಶಗಳ ಬ್ಯಾಂಕುಗಳಿಗೆ, ವಿಮಾ ಕಂಪನಿಗಳಿಗೆ, ಔಷಧಿ ಕಂಪನಿಗಳಿಗೆ ಲಾಭ ತರುವ ಡಂಕೆಲ್ ಪ್ರಸ್ತಾವಗಳ ಮೇಲಷ್ಟೇ ಒತ್ತು ಹಾಕಲಾಗುತ್ತಿದೆ. ಗ್ಯಾಟ್ ಯಾರಿಗಾಗಿ ಇದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ

ಪೆನ್ಶನ್ ಕುರಿತು ರಾಜ್ಯ ಸಮಾವೇಶ

ಮೇ 9, 1993

ಎ.ಡಿ.ಎ. ರಂಗಮಂದಿರ
ಬೆಂಗಳೂರು

ಮಧ್ಯಾಹ್ನ 3.00 ಗಂಟೆಯಿಂದ

ಉದ್ಘಾಟನೆ : ಕಾಂ. ಇ.ಬಾಲಾನಂದನ್
ಸಿಐಟಿಯು ಅಧ್ಯಕ್ಷರು

ಅಧ್ಯಕ್ಷತೆ : ಕಾಂ. ಸೂರಿ
ಸಿಐಟಿಯು ಉಪಾಧ್ಯಕ್ಷರು
ಹಾಗೂ ರಾಜ್ಯ ಅಧ್ಯಕ್ಷರು

ಭಾಷಣಕಾರರು

ಕಾಂ.ಎ.ಜೆ.ಕೆ. ನಾಯರ್
ಸಿಐಟಿಯು ರಾಜ್ಯ ಕಾರ್ಯದರ್ಶಿ

ಕಾಂ.ಆರ್.ಎನ್.ಗೋಡ್‌ಬೋಲೆ
ಪ್ರಧಾನ ಕಾರ್ಯದರ್ಶಿ, ಪಿಡಬ್ಲ್ಯುಟಿಯುಸಿ

ಕಾಂ.ಎನ್.ರೇವಣ್ಣ
ಬಿಇಎಫ್‌ಐ

ಕಾಂ.ಕೆ.ವಿ.ಶ್ರೀನಿವಾಸ್
ಎಐಐಇಎ

ಸುದ್ದಿಗಳು

ರಾರಾವಿಯಲ್ಲಿ ರೈತರ ಸಭೆ

ರಾರಾವಿಯಲ್ಲಿ ದಿನಾಂಕ 19-4-93ರಂದು ರಾರಾವಿ, ರಾರಾವಿ ಕ್ಯಾಂಪ್ ಮತ್ತು ಕೆ. ಸೂಗೂರು ಗ್ರಾಮದ ರೈತರ ಸಭೆ ನಡೆಯಿತು. ಕಳೆದ ಸಾಲಿನಲ್ಲಿ ಮಳೆ ಬಾರದೆ ಹಾಗೂ ಮಳೆ ಬಂದು ಈ ಸಮಯದಲ್ಲಿ ಹಾಗೂ ಈಗಿನ ರೈತರು ಬೆಳೆದಂತ ಬೆಳೆಗೆ ನಿಗಿತ ಬೆಲೆಯು ಸಹ ಇಲ್ಲ ಮತ್ತು ರಾಸಾಯನಿಕ ಗೊಬ್ಬರಗಳ ಬೆಲೆ ಅತಿಯಾಗಿ ಗಗನಕ್ಕೆ ಏರಿದೆ. ಇಂತಹ ಸಮಯದಲ್ಲಿ ಬ್ಯಾಂಕಿನವರು ಮತ್ತು ಸಹಕಾರ ಸಂಘದವರು ಮನೆ ಮನೆಗೆ ಹೋಗಿ ಜಪ್ತಿ ಮಾಡುತ್ತಾರೆ. ಇಂತಹ ಸಮಯದಲ್ಲಿ ಜಪ್ತಿ ಮಾಡಲಿಕ್ಕೆ ಬಂದರೆ ನಾವುಗಳು ನೇಣು ಹಾಕಿಕೊಳ್ಳುವ ಮಾರ್ಗ ಒಂದೇ ಎಂದು ಭಾವಿಸಬೇಕಾಗುತ್ತದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಇ.ಆರ್. ಯಲ್ಲಪ್ಪ ಸಭೆಯಲ್ಲಿ ಮಾತನಾಡುತ್ತಾ ಹೇಳಿದರು.

ಬ್ಯಾಂಕಿನವರು ಅತಿ ಸಣ್ಣ ರೈತರಿಗೆ ಸಾಲ ಮನ್ನಾ ಮಾಡಬೇಕು ಮತ್ತು ಮಧ್ಯಮ ವರ್ಗದ ರೈತರಿಗೆ ಬಡ್ಡಿ ಮನ್ನಾ ಮಾಡಬೇಕು ಎಂದು ಸಹ ಅವರು ಹೇಳಿದರು.

ಜಿಲ್ಲಾ ಮುಖಂಡರಾದ ಹಣ್ಮಗಪ್ಪನವರು, ನಾವುಗಳು ಸುಮ್ಮನೆ ಇದ್ದರೆ ಬ್ಯಾಂಕಿನವರು ಹಾಗೂ ಸಹಕಾರ ಸಂಘದವರು ನಮ್ಮನ್ನು ಕೊಡಗಿ ಮತ್ತು ಚುಕ್ಕಾಡಿ ಕಾಟ ಕೊಟ್ಟಂತೆ ಕಾಡಿಸುತ್ತಾರೆ ಎಂದು ಹೇಳಿ ಒಗ್ಗಟ್ಟಿನಿಂದ ಹೋರಾಡಲು ಕರೆ ನೀಡಿದರು.

ಈ ಸಭೆಯಲ್ಲಿ ಸುಮಾರು 100 ಜನರು ಭಾಗವಹಿಸಿದ್ದರು.

ಆಟೋ ಚಾಲಕರ ಸಂಘದ ಸಭೆ

ಬೆಂಗಳೂರು : ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್(ಸಿಐಟಿಯು)ನ 18ನೇ ವಾರ್ಷಿಕೋತ್ಸವ ಹಾಗೂ ಸರ್ವ ಸದಸ್ಯರ ಸಭೆಯು ಏಪ್ರಿಲ್ 23ರಂದು ನಡೆಯಿತು. ಈ ಸಭೆಯನ್ನು ಕರ್ನಾಟಕ ರಾಜ್ಯ ಸಿಐಟಿಯುವಿನ ಅಧ್ಯಕ್ಷರಾದ ಕಾಂ.ಎಸ್.ಸೂರ್ಯನಾರಾಯಣರಾವ್‌ರವರು ಉದ್ಘಾಟಿಸಿ ಸಂಘದ ಅಧ್ಯಕ್ಷ ಕಾಂ. ಆರ್.ಶ್ರೀನಿವಾಸ್‌ರವರು ಅಧ್ಯಕ್ಷತೆ ವಹಿಸಿದ್ದರು. ಈ ಸಭೆಯಲ್ಲಿ ಚಾಲಕರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ನಗರದಲ್ಲಿ ಆಟೋರಿಕ್ಷಾಗಳ ಸಂಖ್ಯೆ ಹೆಚ್ಚಾಗಿದ್ದು ಚಾಲಕರ ವರಮಾನ ದಿನೇ ದಿನೇ ಕಡಿಮೆಯಾಗುತ್ತಿದೆ. ಆದುದರಿಂದ ಸಾರಿಗೆ ಇಲಾಖೆಯಿಂದ ಆಟೋರಿಕ್ಷಾಗಳಿಗೆ ನೀಡುತ್ತಿರುವ ಪರ್ಮಿಟ್‌ಗಳನ್ನು ನಿಲ್ಲಿಸಲು ಸರಕಾರದ ಮೇಲೆ ಒತ್ತಡ ತರಬೇಕು. ಇವೇ ಮುಂತಾದ ಕೆಲವು ಮುಖ್ಯ ನಿರ್ಣಯಗಳನ್ನು ಈ ಸಭೆಯಲ್ಲಿ ಅಂಗೀಕರಿಸಲಾಯಿತು.

ಏಳು ಪದಾಧಿಕಾರಿಗಳು ಮತ್ತು 38 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನೊಳಗೊಂಡ ಸಮಿತಿಯನ್ನು ಈ ಸಭೆಯಲ್ಲಿ ಆಯ್ಕೆ ಮಾಡಲಾಯಿತು.

ಅಧ್ಯಕ್ಷರು - ವಿ. ಸುಬ್ಬರಾವ್, ಉಪಾಧ್ಯಕ್ಷರು - ಎ.ಎಸ್. ರಮೇಶ್, ಪ್ರಧಾನ ಕಾರ್ಯದರ್ಶಿ - ಹೆಚ್.ಜಿ.ಶ್ರೀನಿವಾಸ ಮೂರ್ತಿ, ಜಂಟಿ ಕಾರ್ಯದರ್ಶಿ - ಆರ್.ನಂಜಪ್ಪ, ಸಹ ಕಾರ್ಯದರ್ಶಿ - ಜಿ.ಟಿ ಲ್ಲಯ್ಯ, ಸಂಘಟನಾ ಕಾರ್ಯದರ್ಶಿ - ಆರ್. ಲೋಗನಾಥನ್, ಖಜಾಂಚಿ - ಬಿ.ಎಸ್. ರಘು.

ಹೊಸಪೇಟೆಯಲ್ಲಿ ಸಿಐಟಿಯುಗೆ ಭಾರೀ ವಿಜಯ

ಬಳ್ಳಾರಿ ಜಿಲ್ಲೆಯ ಹೊಸಪೇಟೆಯ (ಇಂಡಿಯನ್ ಷುಗರ್ಸ್ ಅಂಡ್ ರಿಫೈನರೀಸ್) ಐಎಸ್‌ಆರ್ ಕಾರ್ಮಿಕ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಿಐಟಿಯುನ ಕಾ.ಮೆಹಬೂಬ್ 273 ಮತಗಳನ್ನು ಪಡೆದು ಭಾರೀ ಬಹುಮತದಿಂದ ಆಯ್ಕೆ ಆಗಿರುತ್ತಾರೆ. ಪ್ರತಿಸ್ಪರ್ಧಿ ಪರುಶರಾಂ ಕೇವಲ 64 ಮತ ಪಡೆದು ಪರಾಭವಗೊಂಡಿದ್ದಾರೆ. ಇದೇ ಮೊದಲ ಬಾರಿಗೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದು ಜಯಗಳಿಸಲಾಗಿದೆ. ಇತರ ಪದಾಧಿಕಾರಿಗಳು ಸಿಐಟಿಯು ಬೆಂಬಲಿಗರು ಅವಿರೋಧವಾಗಿ ಆಯ್ಕೆ ಆಗಿದ್ದಾರೆ. ಸಿಐಟಿಯು ಸಂಗಾತಿಗಳನ್ನು ಆಯ್ಕೆ ಮಾಡಿದ ಐಎಸ್‌ಆರ್ ಕಾರ್ಮಿಕರಿಗೆ ಕಾಂ.ಮೆಹಬೂಬ್ ಮತ್ತು ಸಿಐಟಿಯು ಜಿಲ್ಲಾ ಸಂಘಟನಾ ಸಮಿತಿ ಧನ್ಯವಾದಗಳನ್ನು ತಿಳಿಸಿದೆ. ಚುನಾವಣೆ ಕೆಲಸಕ್ಕೆ ಸಹಕರಿಸಿ ಶ್ರಮಿಸಿದ ಡಿವೈಎಫ್‌ಐ ಕಾರ್ಯಕರ್ತರು ಹಾಗೂ ಸಿರುಗುಪ್ಪ ಸಕ್ಕರೆ ಕಾರ್ಖಾನೆ ಕಾರ್ಮಿಕ ಸಂಘದ ಕಾರ್ಯಕರ್ತರಿಗೂ ಧನ್ಯವಾದಗಳನ್ನು ಅರ್ಪಿಸಲಾಗಿದೆ.

KRNM/BGS-405 MAG(2) PRB DECR 319-78/79

ಮಾರ್ಕ್ಸ್‌ವಾದದ ಪ್ರಸ್ತುತತೆ

30 ಕಮ್ಯುನಿಸ್ಟ್ ಪಕ್ಷಗಳ ಅಂತರ್‍ರಾಷ್ಟ್ರೀಯ ವಿಚಾರ ಸಂಕಿರಣ

ಕಲ್ಕತ್ತೆಯಲ್ಲಿ ಮೇ 5 ರಿಂದ 7ರವರೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಮಾರ್ಕ್ಸ್‌ವಾದದ ಮೇಲೆ ಒಂದು ಅಂತರ್‍ರಾಷ್ಟ್ರೀಯ ವಿಚಾರ ಸಂಕಿರಣವನ್ನು ಏರ್ಪಡಿಸಿದೆ. ಇದು ಕಮ್ಯುನಿಸ್ಟ್ ಆಂದೋಲನದ ಇತಿಹಾಸದಲ್ಲಿ ಒಂದು ಮಹತ್ವದ ಘಟನೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಪತ್ರಕರ್ತರಿಗೆ ತಿಳಿಸಿದರು.

"ಸಮಕಾಲೀನ ವಿಶ್ವ ಸನ್ನಿವೇಶ ಮತ್ತು ಮಾರ್ಕ್ಸ್‌ವಾದದ ಪ್ರಸ್ತುತತೆ" ಎಂಬ ಈ ವಿಚಾರ ಸಂಕಿರಣ ಕಾರ್ಲ್ ಮಾರ್ಕ್ಸ್‌ರವರ ಜನ್ಮದ 175ನೇ ವಾರ್ಷಿಕದ ಸಂದರ್ಭದಲ್ಲಿ ನಡೆಯುತ್ತಿದೆ. ಆಗಲೇ ಹದಿನಾರು ಕಮ್ಯುನಿಸ್ಟ್ ಪಕ್ಷಗಳು ತಾನು ಭಾಗವಹಿಸುವುದಾಗಿ ದೃಢಪಡಿಸಿವೆ. ತಮ್ಮ ಪ್ರತಿನಿಧಿಗಳ ಹೆಸರುಗಳನ್ನು ಕಳಿಸಿವೆ. ಮುಂದಿನ ಕೆಲವು ದಿನಗಳಲ್ಲಿ ಇನ್ನಷ್ಟು ಹೆಸರುಗಳು ಬರಲಿವೆ. ಇಂತಹ ಒಂದು ಘಟನೆಯ ಆತಿಥ್ಯಕ್ಕೆ ಸಿಪಿಐ(ಎಂ) ಪಶ್ಚಿಮ ಬಂಗಾಳ ಸಮಿತಿ ಆಗಲೇ ಸಿದ್ಧತೆ ಆರಂಭಿಸಿದೆ. ಸ್ವಾಗತ ಸಮಿತಿ ರಚನೆಗೊಂಡಿದೆ. ಬುದ್ಧದೇವ್ ಭಟ್ಟಾಚಾರ್ಯ ಇದರ ಸಂಯೋಜಕರು.

ಹಿಂದಿನ ಸಮಾಜವಾದೀ ದೇಶಗಳಲ್ಲಿ ಪ್ರಳಯಾಂತಕಾರಿ ಘಟನೆಗಳ ಹಿನ್ನೆಲೆಯಲ್ಲಿ ಈ ವಿಚಾರ ಸಂಕಿರಣ ನಡೆಯುತ್ತಿದೆ ಎಂದು ಸುರ್ಜಿತ್ ಹೇಳಿದರು. ಈ ಪತ್ರಿಕಾ ಸಮ್ಮೇಳನದ ಸಂದರ್ಭದಲ್ಲಿ ನೀಡಿದ ಹೇಳಿಕೆ "ಸಾಮ್ರಾಜ್ಯಶಾಹಿ ಪಕ್ಷಾರರು ಹರಿಯಬಿಟ್ಟಿರುವ ತೀವ್ರ ಸೈದ್ಧಾಂತಿಕ ಹಾಗೂ ರಾಜಕೀಯ ಆಕ್ರಮಣವನ್ನು ಎದುರಿಸಿ ನಿಂತು ಸಿಪಿಐ(ಎಂ) ನಿರಂತರವಾಗಿ ಮಾನವ ವಿಮೋಚನೆಯ ಸಾಧನವಾಗಿ ಮಾರ್ಕ್ಸ್‌ವಾದ ಈಗಲೂ ಸಮಂಜಸವಾಗಿದೆ, ಪ್ರಸ್ತುತವಾಗಿದೆ ಎಂಬುದನ್ನು ಎತ್ತಿ ಹಿಡಿದಿದೆ" ಎಂದಿದೆ.

ಮುಂದುವರಿದು "ಈ ನಿಲುವಿಗೆ ಅನುಗುಣವಾಗಿ ಸಿಪಿಐ(ಎಂ) ಕೇಂದ್ರ ಸಮಿತಿ ಸತತ ಹಲ್ಲೆಗಳಿಗೂ ಜಗ್ಗದೆ ಮಾರ್ಕ್ಸ್‌ವಾದದ ಸೃಜನಾತ್ಮಕ ಸಮಾಜವಾದೀ ಗುರಿಗೆ ಬದ್ಧರಾಗುಳಿದ ಕಮ್ಯುನಿಸ್ಟ್ ಪಕ್ಷಗಳನ್ನು ಈ ವಿಚಾರಸಂಕಿರಣಕ್ಕೆ ಆಹ್ವಾನಿಸಲು ನಿರ್ಧರಿಸಿತು" ಎಂದು ಈ ಹೇಳಿಕೆ ತಿಳಿಸಿದೆ.

ಹಳಿ ತಪ್ಪಲಿಲ್ಲ

ಈ ಬಗ್ಗೆ ವಿವರಿಸುತ್ತಾ ಸುರ್ಜಿತ್ ಸಮಾಜವಾದೀ ಬಣದಲ್ಲಿನ ಬೆಳವಣಿಗೆಗಳ ನಂತರ, ವಿಶೇಷವಾಗಿ ಸೋವಿಯತ್ ಒಕ್ಕೂಟದ ಕುಸಿತದ ನಂತರ ಕಮ್ಯುನಿಸ್ಟ್ ಪಕ್ಷಗಳಲ್ಲಿ ಸಾಕಷ್ಟು ಕ್ಷೋಭೆ ಎದ್ದಿತು. ಕೆಲವು ಪಕ್ಷಗಳು ತಮ್ಮ ಹೆಸರು, ಸಿದ್ಧಾಂತಗಳನ್ನು ಬದಲಿಸಿಕೊಳ್ಳಲಾರಂಭಿಸಿದವು ಆದರೆ ಸಿಪಿಐ(ಎಂ) ಈ ಬೆಳವಣಿಗೆಗಳ ದೀರ್ಘ ವಿಶ್ಲೇಷಣೆ ನಡೆಸಿ ಮಾರ್ಕ್ಸ್‌ವಾದದ ವಿಜ್ಞಾನದಲ್ಲಿ ತಪ್ಪೇನೂ ಇಲ್ಲ, ಅದರ ಆಚರಣೆಯಲ್ಲಿನ ತಪ್ಪುಗಳು, ವಿಕೃತಿಗಳಿಂದಾಗಿ ಸಮಾಜವಾದಿ ದೇಶದಲ್ಲಿ ಸಮಸ್ಯೆಗಳುಂಟಾದವು ಎಂಬ ತೀರ್ಮಾನಕ್ಕೆ ಬಂತು ಎಂದರು. ಸಿಪಿಐ(ಎಂ) ಮಾರ್ಕ್ಸ್‌ವಾದ-ಲೆನಿನ್‌ವಾದದಲ್ಲಿ ತನ್ನ ನಂಬಿಕೆಯನ್ನು ದೃಢಪಡಿಸುತ್ತಾ ಆತ್ಮವಿಶ್ವಾಸದಿಂದ ಮುನ್ನಡೆಯಿತು, ಸೋವಿಯತ್ ಘಟನೆಗಳಿಂದ ಹಳಿ ತಪ್ಪಲಿಲ್ಲ ಎಂದು ಸುರ್ಜಿತ್ ಒತ್ತಿ ಹೇಳಿದರು.

ಸಾಮ್ರಾಜ್ಯಶಾಹಿ ಮತ್ತು ಸಮಾಜವಾದದ ನಡುವೆ ವೈರುಧ್ಯ ಇದ್ದೇ ಇರುತ್ತದೆ, ಅದು ಮುಂದುವರಿಯುತ್ತದೆಯಾದ್ದರಿಂದ "ವೈರುಧ್ಯಗಳು ಮಾರ್ಪಾಡಾಗಿವೆ" ಎಂದು ಮಿಖ್ಯಾಲ್ ಗೋರ್ಬಚೇವ್ 1987ರಲ್ಲಿ ಹೇಳಿದಾಗ ಅದು ತಪ್ಪೆಂದ ಮೊದಲ ಪಕ್ಷ ಸಿಪಿಐ(ಎಂ) ಎಂದು ಸುರ್ಜಿತ್ ನೆನಪಿಸಿದರು. ಕಳೆದ ಎರಡು ವರ್ಷಗಳಲ್ಲಿ ಸಿಪಿಐ(ಎಂ) ಇತರ ಪಕ್ಷಗಳೊಡನೆ ಚರ್ಚೆ ನಡೆಸಿದೆ. ಕಾರ್ಮಿಕ ವರ್ಗದ ನಡುವೆ ಬೇರು ಬಿಟ್ಟ ಪಕ್ಷಗಳೆಲ್ಲಾ ಮಾರ್ಕ್ಸ್‌ವಾದಕ್ಕೆ ಸಿಪಿಐ(ಎಂ)ನಷ್ಟೇ ಬದ್ಧವಾಗಿವೆ ಎಂದು ಸುರ್ಜಿತ್ ಒತ್ತಿ ಹೇಳಿದರು.

ಸಮ್ಮೇಳನವಲ್ಲ ಸೈದ್ಧಾಂತಿಕ ಚರ್ಚೆ

ಕಲ್ಕತ್ತಾ ಸಭೆ ಒಂದು ವಿಚಾರ ಸಂಕಿರಣವಷ್ಟೇ, ಅದೊಂದು ಸೈದ್ಧಾಂತಿಕ ಚರ್ಚೆ. ವಿಶ್ವ ಕಮ್ಯುನಿಸ್ಟ್ ಆಂದೋಲನಕ್ಕೆ ಹೊಸ ದಿಗ್ದರ್ಶನ ನೀಡುವ ಸಮ್ಮೇಳನ ಅಲ್ಲ ಎಂದು ಸುರ್ಜಿತ್ ಸ್ಪಷ್ಟಪಡಿಸಿದರು. ಇದು ಕಮ್ಯುನಿಸ್ಟ್ ಪಕ್ಷಗಳ ಒಂದು ಸಮ್ಮೇಳನವಲ್ಲ. ವಿಶ್ವದ ಪರಿಸ್ಥಿತಿ ಬದಲಾಗಿದೆ. ಒಂದು ಮಾರ್ಗದರ್ಶಕ ಶಕ್ತಿಯೆಂಬುದಿರಲು ಸಾಧ್ಯವಿಲ್ಲ ಎಂದ ಸುರ್ಜಿತ್ ಮುಂದೆ ಒಂದು ಸಮ್ಮೇಳನ ನಡೆಯಬಹುದು, ಆದರೆ ಈಗಂತೂ ಸಿಪಿಐ(ಎಂ)ಗೆ ಸಮಾನ ವಿಚಾರದ ಪಕ್ಷಗಳೊಡನೆ ಸೈದ್ಧಾಂತಿಕ ಪಾತಳಿಯಲ್ಲಿ ಚರ್ಚೆ ನಡೆಸುವುದರಲ್ಲಷ್ಟೇ ಆಸಕ್ತಿ ಎಂದರು.

ಚೀನಾ ಕಮ್ಯುನಿಸ್ಟ್ ಪಕ್ಷ(ಸಿಪಿಸಿ) ಏಕೆ ಇದರಲ್ಲಿ ಭಾಗವಹಿಸುತ್ತಿಲ್ಲ ಎಂದು ಪ್ರಶ್ನಿಸಿದಾಗ ಸುರ್ಜಿತ್ "ಚೀನಾ ಕಮ್ಯುನಿಸ್ಟ್ ಪಕ್ಷ ಇಂತಹ ಅಂತರ್‍ರಾಷ್ಟ್ರೀಯ ಸಮ್ಮೇಳನಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವುದಿಲ್ಲ. ಆದರೆ ಇದು ಸಿಪಿಐ(ಎಂ) ಹಾಗೂ ಸಿಪಿಸಿಗಳ ನಡುವೆ ಉತ್ತಮ ದ್ವಿಪಕ್ಷೀಯ ಸಂಬಂಧಗಳಿಗೇನೂ ಅಡ್ಡಿಯಾಗುವುದಿಲ್ಲ ಎಂದರು. ನಾವು ಆಗಾಗ ಪರಸ್ಪರ ಭೇಟಿ, ವಿಚಾರ ವಿನಿಮಯ ನಡೆಸುತ್ತಲೇ ಇದ್ದೇವೆ ಎಂದರು. ರಶ್ಯಾದ ಕಮ್ಯುನಿಸ್ಟರ ಬಗ್ಗೆ ಅವರಿಂದ ಇನ್ನೂ ಸಂದೇಶ ಬಂದಿಲ್ಲ, ಅವರು ಆ ದೇಶದ ಅಭಿಪ್ರಾಯ ಸಂಗ್ರಹಣೆ ಹಾಗೂ ಇತರ ನಿರ್ಣಾಯಕ ರಾಜಕೀಯ ಬೆಳವಣಿಗೆಗಳಿಂದಾಗಿ ತಮ್ಮ ದೇಶದಲ್ಲಿ ವ್ಯಸ್ತರಾಗಿದ್ದಾರೆ" ಎಂದರು.

ಕಲ್ಕತ್ತೆಯಲ್ಲೇ ಏಕೆ?

ವಿಚಾರ ಸಂಕಿರಣ ಕಲ್ಕತ್ತೆಯಲ್ಲಿ ಏಕೆ ನಡೆಯುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಸುರ್ಜಿತ್ ಪಶ್ಚಿಮ ಬಂಗಾಳ ನಮ್ಮ ಅತೀ ಬಲಯುತವಾದ ನೆಲೆ, ಈ ಪ್ರಮಾಣದ ವಿಚಾರ ಸಂಕಿರಣವನ್ನು ಸಂಘಟಿಸುವ ಸಾಮರ್ಥ್ಯ ರಾಜ್ಯ ಘಟಕಕ್ಕೆ ಇದೆ ಎಂದರು. ಮುಂದುವರೆದು ಮಾತನಾಡುತ್ತಾ ಒಂದು ಬಂಡವಾಳಶಾಹಿ ದೇಶದಲ್ಲಿ ಒಂದು ಕಮ್ಯುನಿಸ್ಟ್ ಪಕ್ಷ ಪ್ರತಿ ಚುನಾವಣೆಗಳಲ್ಲೂ ಗೆದ್ದು 16 ವರ್ಷ ಸತತವಾಗಿ ಅಧಿಕಾರದಲ್ಲುಳಿದಿರುವ ಪಶ್ಚಿಮ ಬಂಗಾಳದ ಉದಾಹರಣೆಯ ಬಗ್ಗೆ ವಿಶ್ವದ ಎಲ್ಲಾ ಕಮ್ಯುನಿಸ್ಟರಿಗೆ ಕುತೂಹಲದ ವಿಷಯ ಎಂದರು ಸುರ್ಜಿತ್.

ಬ್ರೆಝಿಲ್, ನೇಪಾಳ, ಕ್ಯೂಬಾ, ಜರ್ಮನ್, ವಿಯೆಟ್ನಾಂ, ಫ್ರೆಂಚ್, ಪೋರ್ಚುಗೀಸ್ ಹಾಗೂ ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷಗಳು, ಬಾಂಗ್ಲಾದೇಶ, ಬೆಲ್ಜಿಯಂ, ಕೊರಿಯಾದ ಕಾರ್ಮಿಕ ಪಕ್ಷಗಳು ಆಸ್ಟ್ರೇಲಿಯಾದ ಸಮಾಜವಾದಿ ಪಕ್ಷ, ಫಿಲಿಪೈನ್ಸ್ ಪ್ರಜಾಸತ್ತಾತ್ಮಕ ರಂಗ, ಇಟಲಿ ಕಮ್ಯುನಿಸ್ಟ್ ಫೌಂಡೇಶನ್ ಪಕ್ಷ ಹಾಗೂ ಬ್ರಿಟನ್ ನವ ಕಮ್ಯುನಿಸ್ಟ್ ಪಕ್ಷ ಹಾಗೂ ಭಾರತದ ಸಿಪಿಐ ಈ ವಿಚಾರಸಂಕಿರಣದಲ್ಲಿ ಭಾಗವಹಿಸುವುದಾಗಿ ಈಗಾಗಲೇ ದೃಢಪಡಿಸಿವೆ.

ಮೇ 7ರಂದು ವಿಚಾರ ಸಂಕಿರಣ ನೇತಾಜೀ ಸ್ಟೇಡಿಯಂನಲ್ಲಿ ವಿದೇಶೀ ಅತಿಥಿಗಳ ಸಾಮೂಹಿಕ ಸತ್ಕಾರ ಸಮಾರಂಭದೊಡನೆ ಕೊನೆಗೊಳ್ಳುತ್ತವೆ.

- (ಐ.ಎನ್.ಎನ್. ಸುದ್ದಿ)

ಭಾರತವನ್ನು ಕಾಡುತ್ತಿರುವ ಡಂಕೆಲ್ ಹೆಮ್ಮಾರಿ

ಪುಟ 5ರಿಂದ

ಸಾಧ್ಯವೇ? ವಿದೇಶದ ಗೋಧಿ ಅಥವಾ ಉಳಿದ ಕೃಷಿ ಉತ್ಪನ್ನಗಳು ಅಗ್ಗವಾದರೆ ಭಾರತದ ರೈತರು ಬೆಳೆದ ಗೋಧಿಯ ಕತೆ ಏನು? ಅದು ಮಾರಾಟವಾಗದಿದ್ದರೆ ಅದನ್ನು ಬೆಳೆದವರು ದಿವಾಳಿಯಾಗದೇಕೆ? ಶೇ. 2ರಷ್ಟು ಮಾತ್ರ ಅವಕಾಶಕೊಟ್ಟರೆ ಅರಬನ ಡೇರೆಯೊಳಗೆ ತಲೆ ಮಾತ್ರ ತೂರಿಸಲು ಅವಕಾಶ ಕೇಳಿದ ಒಂಟೆಯ ಕತೆಯಾದೀತೆ?

ಇದಾವ ನ್ಯಾಯ, ಏನನ್ಯಾಯ

ಭಾರತಕ್ಕೆ ಬರುವ ಈ ಶೇ. 2ರಷ್ಟು ಕೃಷಿ ಉತ್ಪನ್ನಗಳನ್ನು ಉತ್ಪಾದಿಸುವ ಬೃಹತ್ ಕಂಪನಿಗಳಂತಹ ಕೃಷಿ ಉದ್ಯಮಗಳ ಜೊತೆ ಹೇಗೆ ಸ್ಪರ್ಧಿಸುವುದು ಎಂಬುವುದೇ ಒಂದು ದೊಡ್ಡ ತಲೆನೋವಾದರೆ ಮತ್ತೊಂದು ಈ ಎಲ್ಲಾ ಕೃಷಿ ಉತ್ಪಾದನೆಗಳನ್ನು ಉತ್ಪಾದನಾ ವೆಚ್ಚಕ್ಕಿಂತ ಅತಿ ಕಡಿಮೆ ದರದಲ್ಲಿ ಮಾರಲಾಗುತ್ತದೆ ಎಂಬುದು. ಪಾಶ್ಚಿಮಾತ್ಯ ದೇಶಗಳ ಸರಕಾರಗಳು ತಮ್ಮ ದೇಶಗಳ ಕೃಷಿ ಉತ್ಪಾದನೆಯ ವೆಚ್ಚದ ಅರ್ಧ ಭಾಗಕ್ಕಿಂತಲೂ ಹೆಚ್ಚು ಅವರ ರೈತರಿಗೆ ಸಹಾಯ ಧನವಾಗಿ ನೀಡುತ್ತಿವೆ(ಪಟ್ಟಿ ನೋಡಿ). ಅಂದರೆ ಹತ್ತಿಯ ಉತ್ಪಾದನೆಯ ಖರ್ಚು-ವೆಚ್ಚ ಒಂದು ಎಕರೆಗೆ 5000 ರೂ. ಆದರೆ ಅಲ್ಲಿಯ ಸರಕಾರಗಳು ಕೃಷಿ ಉತ್ಪಾದಕರಿಗೆ 2500 ರೂಗಳಿಗಿಂತ ಹೆಚ್ಚು ಸಹಾಯಧನವನ್ನಾಗಿ ನೀಡುತ್ತವೆ ವಿವಿಧ ರೂಪಗಳಲ್ಲಿ. ಡಂಕೆಲ್ ಪ್ರಸ್ತಾವಗಳ ಫಲವಾಗಿ ಇದು ಕಡಿಮೆಯಾಗುತ್ತದೆ ನಿಜ. ಆದರೂ ಭಾರತಕ್ಕೆ ಹೋಲಿಸಿದರೆ ಹಲವು ಪಟ್ಟು ಹೆಚ್ಚು.

ಅದೇ ಸಮಯದಲ್ಲಿ ಭಾರತದಲ್ಲಿ ಉತ್ಪಾದನಾ ಸಬ್ಸಿಡಿ ಎಂಬುದೇ ಇದ್ದದ್ದು ಕೇವಲ ಶೇ. 2-2 1/2 ಇದನ್ನು ಕಡಿತ ಮಾಡಬೇಕೆಂದು ನಿರಂತರವಾಗಿ ಐಎಂಎಫ್ ಒತ್ತಡ. ಅದರ ಫಲವಾಗಿ ರಸಗೊಬ್ಬರಗಳ ಸಹಾಯಧನ ಅರ್ಧಕ್ಕಿಂತಲೂ ಹೆಚ್ಚು ಕಡಿತ ಮತ್ತು ರಂಜಕ ಪೊಟ್ಯಾಷ್ ಮತ್ತು ಕಾಂಪ್ಲೆಕ್ಸ್ ಗೊಬ್ಬರಗಳ ಬೆಲೆಯಲ್ಲಿ 4 ರಿಂದ 4 1/2 ಪಟ್ಟು ಏರಿಕೆ.

ಜೊತೆಗೆ ಪಕ್ಕದಲ್ಲಿರುವ ಆರೋಗ್ಯ ಮಾರಿ ಬಗೆಗಿನ ಲೇಖನದಲ್ಲಿ ವಿವರಿಸಿರುವಂತೆ ಡಂಕೆಲ್ ಪ್ರಸ್ತಾವಗಳನ್ನು ಒಪ್ಪುವ ಫಲವಾಗಿ ಸಸ್ಯಸಂರಕ್ಷಣಾ ರಾಸಾಯನಿಕ ಅಥವಾ ಔಷಧಿಗಳ ಬೆಲೆಗಳು ವಿಪರೀತವಾಗಿ ಏರುತ್ತವೆ. 10 ರಿಂದ 30 ಪಟ್ಟು, ಜೊತೆಗೆ ವಿದ್ಯುತ್ ದರ ಮತ್ತಿತರ ದರಗಳ ಏರಿಕೆ.

ಸರಕಾರದ ಸಹಾಯಧನ ಅತ್ಯಂತ ಕಡಿಮೆ ಇರುವ ಭಾರತದ ಮೇಲೆ ಅದನ್ನು ಪೂರ್ಣವಾಗಿ ತೊಡೆದುಹಾಕುವಂತೆ ಒತ್ತಾಯ. ಶೇ. 30-70ರವರೆಗೂ ಸಹಾಯಧನ ನೀಡುವ ಸಾಮ್ರಾಜ್ಯಶಾಹಿ ದೇಶಗಳಲ್ಲಿ ಕೆಲವು ಭಾಗ ತೆಗೆದುಹಾಕಿದ ನಂತರವೂ ದೊಡ್ಡ ಪ್ರಮಾಣದಲ್ಲಿ ಸಹಾಯಧನ ಮುಂದುವರಿಕೆ. ಇವರ ನಡುವೆ ಸ್ಪರ್ಧೆ. ಭಾರತದಲ್ಲಿ ಸಹಾಯಧನದಲ್ಲಿ ಸಣ್ಣ ರೈತ ಮಧ್ಯಮ ರೈತರಿಗೆ ಗಣನೀಯ ಭಾಗ ಸಾಮ್ರಾಜ್ಯಶಾಹಿ ದೇಶಗಳಲ್ಲಿ ಲಕ್ಷಗಟ್ಟಲೆ ಎಕರೆಗಳ ಮಾಲೀಕರಿಗೆ.

ಇದಾವ ನ್ಯಾಯ! ಏನನ್ಯಾಯ!!

ಆರೋಗ್ಯ ಮಾರಿ ಡಂಕೆಲ್

ಪುಟ 5ರಿಂದ

ಯನಿಕ ಹಾಗೂ ಔಷಧಿ ಕೈಗಾರಿಕೆ ತೀವ್ರವಾಗಿ ಬೆಳೆಯಿತು. ಉತ್ಪನ್ನ ಬದಲು ಉತ್ಪಾದನಾ ವಿಧಾನಕ್ಕೆ ಮಾತ್ರ ಪೇಟೆಂಟ್ ಕೊಡುವ ಕಾನೂನಿನ ಅಂಶ ಇದಕ್ಕೆ ಮುಖ್ಯ ಕಾರಣ. ಅಂದರೆ ವಿದೇಶದಲ್ಲಿ ತಯಾರಾದ ಔಷಧಿ ಅಥವಾ ರಾಸಾಯನಿಕವನ್ನು, ಸ್ವತಂತ್ರವಾಗಿ ಬೇರೆಯಾವುದೇ ಉತ್ಪಾದನಾ ವಿಧಾನದಿಂದ ತಯಾರಿಸಿದರೆ ಅದಕ್ಕೆ ಪೇಟೆಂಟ್ ಕೊಡಲಾಯಿತು. ಹಿಂದೆ ಜಗತ್ತಿನ ಮಾರುಕಟ್ಟೆಯಲ್ಲಿ ಬಂದ ಔಷಧಿಗಳು 10-15 ವರ್ಷಗಳ ನಂತರ ಭಾರತಕ್ಕೆ ಬರುತ್ತಿದ್ದವು. 1970ರ ನಂತರ ಸರಾಸರಿ 5-6 ವರ್ಷಗಳ ಒಳಗೆ ಯಾವುದೇ ಔಷಧಿ ಭಾರತದ ಕಂಪನಿಯಿಂದ ಸ್ವತಂತ್ರವಾಗಿ ತಯಾರಿಸಲ್ಪಡುತ್ತದೆ. ಕೆಲವೊಮ್ಮೆ 1-2 ವರ್ಷಗಳ ಒಳಗೆ ತಯಾರಾದ್ದದ್ದೂ ಉಂಟು. ಇದರಿಂದಾಗಿ ಭಾರತದಲ್ಲಿ ಔಷಧಿಗಳ ಬೆಲೆ ಜಗತ್ತಿನಲ್ಲೇ ಅತ್ಯಂತ ಕಡಿಮೆ. ಭಾರತದ ಹಲವಾರು ಔಷಧಿ ಕಂಪನಿಗಳು ಅಮೇರಿಕಾಕ್ಕೂ ರಫ್ತು ಮಾಡಲು ಆರಂಭಿಸಿವೆ. ಇದು ಸ್ವಾಭಾವಿಕವಾಗಿಯೇ ಸಾಮ್ರಾಜ್ಯಶಾಹಿ ದೇಶಗಳ ಕೆಂಗಣ್ಣಿಗೆ ಗುರಿಯಾಗಿದೆ.(ಭಾರತದ ಪೇಟೆಂಟ್ ಕಾನೂನು 1970 ವಿಶಿಷ್ಟ ಅಂಶಗಳಿಗೆ ಬಾಕ್ಸ್ ನೋಡಿ).

ಡಂಕೆಲ್ ಅಂಗೀಕರಿಸಿದರೆ ಔಷಧಿ ಬೆಲೆ ಗಗನಕ್ಕೆ

ಡಂಕೆಲ್ ಪ್ರಸ್ತಾವಗಳನ್ನು ಅಂಗೀಕರಿಸಿದರೆ ಈ ಎಲ್ಲಾ ಸಾಧನೆಗಳೂ ಭಾರತೀಯ ಕಂಪನಿಗಳು ತಯಾರಿಸುವುದು ನಿಲ್ಲಿಸಬೇಕಾಗುತ್ತವೆ. ಏಕೆಂದರೆ ಹೆಚ್ಚಿನ ಔಷಧಿಗಳು ಉತ್ಪನ್ನ ಪೇಟೆಂಟ್‌ಗೆ ಒಳಗಾಗಿವೆ. ಅಂತಹ ಔಷಧಿಗಳ ಪೇಟೆಂಟ್ ಹೊಂದಿರುವ ವಿದೇಶೀ ಕಂಪನಿಗಳು 10ರಿಂದ 30ಪಟ್ಟು ಬೆಲೆಗೆ ಮಾರುತ್ತವೆ. ಆದ್ದರಿಂದ ಔಷಧಿ ಬೆಲೆ 10ರಿಂದ 30 ಪಟ್ಟು ಏರುತ್ತವೆ. ಹಲವಾರು ಅಪರೂಪದ ಔಷಧಿಗಳು ಸಿಗದೆ ಹೋಗಬಹುದು. ಅಪರೂಪದ ರೋಗದ ಔಷಧಿಗಳು ಸಣ್ಣ ಪ್ರಮಾಣದಲ್ಲಿ ಆಮದು ಮಾಡುವ ತೊಂದರೆ ಈ ವಿದೇಶೀ ಕಂಪನಿಗಳು ತೆಗೆದುಕೊಳ್ಳದೇ ಹೋಗಬಹುದು. ಡಂಕೆಲ್ ಪ್ರಕಾರ ಈ ಕಂಪನಿಗಳಿಗೆ ಭಾರತದಲ್ಲೇ ಈ ಔಷಧಿಗಳನ್ನು ತಯಾರಿಸುವ ಬಗ್ಗೆ ಕಡ್ಡಾಯವಿಲ್ಲದಿರುವುದರಿಂದ ಅವನ್ನು ಆಮದು ಮಾಡಿಕೊಳ್ಳಬಹುದು. ಇದರಿಂದ ಭಾರತದ ರಾಸಾಯನಿಕ ಔಷಧಿ ಕೈಗಾರಿಕೆ ಪೂರ್ತಿಯಾಗಿ ಮುಚ್ಚಬಹುದು. ಸುಮಾರು 8-10ಲಕ್ಷ ಜನ ನಿರುದ್ಯೋಗಿಗಳಾಗಬಹುದು.

ಹೀಗೆ ಡಂಕೆಲ್ ಪ್ರಸ್ತಾವದ ಪ್ರಕಾರ ನಾವು ಪ್ರಗತಿಪರ ಭಾರತದ ಪೇಟೆಂಟ್ ಕಾನೂನು(1970) ತಿದ್ದುಪಡಿಗೆ ಒಪ್ಪಿದರೆ, ಔಷಧಿ ಬೆಲೆಗಳು ಗಗನಕ್ಕೇರಿ ಈಗಾಗಲೇ ಔಷಧಿ ಬೆಲೆ ಖರೀದಿಸಲಾಗುವ ಜನಸಾಮಾನ್ಯರಿಗೆ ಸಿಲುಕದೆ ಹೋಗಬಹುದು. ನಮ್ಮ ಔಷಧಿ, ರಾಸಾಯನಿಕ ಕೈಗಾರಿಕೆ ಪೂರ್ತಿಯಾಗಿ ಮುಚ್ಚಬಹುದು. ಆದ್ದರಿಂದ ಇದು ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಾದುದು ಇಂತಹುದು. ನಿಜವಾದರೆ 21ನೇ ಶತಮಾನದ ಹೊತ್ತಿಗೆ ಅನೇಕ ರೋಗಗಳಿಗೆ ಔಷಧಿ ಇಲ್ಲದೆ ಅಥವಾ ಕೊಳ್ಳಲಾಗದೆ ಸಾಂಕ್ರಾಮಿಗಳು ಹಬ್ಬಿ,

ಕರ್ನಾಟಕಕ್ಕೆ ಸ್ಫೂರ್ತಿ ನೀಡಲಿ

ಪುಟ 1ರಿಂದ

ರಿಗೂ, ಸಣ್ಣ ಕೈಗಾರಿಕೆಗಳಿಗೂ ಅಪಾರ ನಷ್ಟವಾಗುತ್ತಿದೆ. ಓಲ್ಟೇಜ್ ವ್ಯತ್ಯಾಸದಿಂದಾಗಿ ಪಂಪ್ ಸೆಟ್ಟುಗಳು ಸುಟ್ಟು ಹೋಗುತ್ತವೆ. ಕೋಲ್ ಇಂಡಿಯಾಕ್ಕೆ ಹಣ ಪಾವತಿ ಮಾಡದಿರುವುದರಿಂದ ಕಲ್ಲಿದ್ದಲಿನ ಅಭಾವದಿಂದಾಗಿ ರಾಯಚೂರಿನ ಎರಡು ಥರ್ಮಲ್ ಘಟಕಗಳು ಮುಚ್ಚಲ್ಪಟ್ಟಿದೆ. ಹೆಚ್ಚಿನ ವಿದ್ಯುತ್ ಉತ್ಪಾದನೆಗೆ ಸರಕಾರ ಯಾವುದೇ ನಿರ್ದಿಷ್ಟ ಯೋಜನೆಯನ್ನು ಕೈಗೊಳ್ಳದೆ ಸಾರ್ವಜನಿಕರನ್ನು ರೈತರನ್ನು ಕಾರ್ಖಾನೆದಾರರನ್ನು ಕಷ್ಟಕ್ಕೆ ಈಡು ಮಾಡುತ್ತಿದ್ದು ಸರಕಾರದ ಈ ನಿಷ್ಕ್ರಿಯತೆಯನ್ನು ಖಂಡಿಸಿದೆ.

ಆಶ್ರಯ ಯೋಜನೆಯಡಿಯಲ್ಲಿ ನಿಜವಾಗಿಯೂ ಮನೆಯಿಲ್ಲದವರಿಗೆ ಆಶ್ರಯ ಸಿಕ್ಕಿಲ್ಲ. ಕಾರಣ ಮೊಯಿಲಿ ಸರಕಾರ ಈ ಆಶ್ರಯ ಯೋಜನೆಯನ್ನು ರದ್ದುಪಡಿಸಿ, ಹೊಸ ನೀತಿ ರೂಪಿಸಿ, ನಿಜವಾಗಿಯೂ ಮನೆಯಿಲ್ಲದವರಿಗೆ ಮನೆ ಕೊಡಿಸಬೇಕೆಂದು ರಾಜ್ಯ ಸಮಿತಿ ಒತ್ತಾಯಿಸಿದೆ.

ವಿಧಾನಸಭೆಯಲ್ಲಿ ಮಂಜೂರಾಗಿರುವ ಜಿಲ್ಲಾ ಪಂಚಾಯತ್, ತಾಲೂಕ ಪಂಚಾಯತ್, ಮಂಡಲ ಪಂಚಾಯತ್ ಮಸೂದೆಯಲ್ಲಿ ಅಧಿಕಾರ ವಿಕೇಂದ್ರೀಕರಣಕ್ಕೂ ಹೆಚ್ಚಾಗಿ ಈ ಅಂಗ ಸಂಸ್ಥೆಗಳ ಮೇಲೆ ಅಧಿಕಾರಿಗಳ ಹಿಡಿತ ಹೆಚ್ಚಿಸಿ ಅಧಿಕಾರದ ವಿಕೇಂದ್ರೀಕರಣ ತತ್ವಕ್ಕೆ ತಿಲಾಂಜಲಿ ನೀಡಲಾಗಿದೆ ಎಂದು ಹೇಳಿ, ಮುಂಬರುವ ಪಂಚಾಯತ್ ಚುನಾವಣೆಗಳನ್ನೆದುರಿಸಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಬೇಕೆಂದು ಕರೆ ನೀಡಿದೆ.

26ರಂದು ನಂಜನಗೂಡಿನಲ್ಲಿ ನಡೆದ ದುರ್ಘಟನೆಯಲ್ಲಿ ಮೈಸೂರು ಜಿಲ್ಲೆಯ ಪೋಲೀಸರ ಸವರ್ಣೀಯರ ಪರವಾದ ಪಕ್ಷಪಾತವನ್ನು ರಾಜ್ಯ ಸಮಿತಿಯು ಖಂಡಿಸಿತು.(ಬಾಕ್ಸ್ ನೋಡಿ)

ಮೇ 11, 12ರಂದು ನಡೆಯುವ ಹಣಕಾಸು ಸಂಸ್ಥೆಗಳ ನೌಕರರ ಅಖಿಲ ಭಾರತ ಮುಷ್ಕರ, ಜುಲೈ 14ರಂದು ನಡೆಯುವ ಅಸಂಘಟಿತ ಕಾರ್ಮಿಕರ ಅಖಿಲ ಭಾರತ ಮುಷ್ಕರ, ಆಗಸ್ಟ್ 19ರಂದು ನಡೆಯುವ 'ಜೈಲ್ ಭರೋ' ಚಳುವಳಿ ಮತ್ತು ಸೆಪ್ಟೆಂಬರ್ 9ರಂದು ನಡೆಯುವ 'ಭಾರತ್ ಬಂದ್'ಗಳನ್ನು ಕರ್ನಾಟಕದಲ್ಲಿ ಯಶಸ್ವಿಗೊಳಿಸಲು ಸಿದ್ಧತೆಗಳನ್ನು ಮಾಡಲು ಶ್ರಮಿಸಲು ರಾಜ್ಯ ಸಮಿತಿಯು ಪಕ್ಷದ ಘಟಕಗಳಿಗೆ ಕರೆ ಕೊಟ್ಟಿದೆ.

ಕಿಸಾನ್ ಸಭಾ ಕರೆ ....

ಪುಟ 1ಕ್ಕೆ

ಜೀವನದ ಯಾವುದೇ ಸಮಸ್ಯೆಯನ್ನು ಬಗೆಹರಿಸುವುದಿಲ್ಲ ಎಂದು ಸಿ.ಕೆ.ಸಿ. ಅಭಿಪ್ರಾಯಪಟ್ಟಿದೆ.

ಆದ್ದರಿಂದ ಈ ಎಲ್ಲಾ ರೈತ-ವಿರೋಧಿ ಧೋರಣೆಗಳ ವಿರುದ್ಧ ಇಡೀ ರೈತ ಸಮೂಹವನ್ನು ಒಗ್ಗೂಡಿಸಬೇಕು ಎಂದು ಕೇಂದ್ರ ಕಿಸಾನ್ ಮಂಡಳಿ ಕರೆ ನೀಡಿದೆ.

ಬಿಹಾರದ ಪೂರ್ಣಿಮಾ ಜಿಲ್ಲೆಯ ಬುಧಾಲಿಯಲ್ಲಿ ಸಾವಿರಾರು ಎಕ್ರೆ ಜಮೀನನ್ನು ಕಾನೂನುಬಾಹಿರವಾಗಿ ಹಿಡಿದ ಭೂಮಾಲೀಕನಿಂದ ಒಬ್ಬ ರೈತನ ಕೊಲೆ, 23 ರೈತರಿಗೆ ಗಾಯವಾದ ಘಟನೆಯನ್ನು ಬಲವಾಗಿ

ಶಾಮೀಲಾದ ಪೋಲೀಸರು ಎಂ.ಎಲ್.ಎ. ಕಾಂ. ಅಜಿತ್ ಸರ್ಕಾರ್ ಹಾಗೂ ಇತರ ರೈತ ಮುಖಂಡರನ್ನು ಸುಳ್ಳು ಕೇಸು ಹಾಕಿ ಬಂಧಿಸಿದ್ದಾರೆ ಎಂದಿದೆ. ಬಿಹಾರ ಸರಕಾರ ತಕ್ಷಣ ಮಧ್ಯಪ್ರವೇಶಿಸಿ ಅಪರಾಧಿ ಭೂ ಮಾಲಕರನ್ನು ಹಿಡಿದು ದಂಡಿಸಬೇಕು ಎಂದು ಒತ್ತಾಯಿಸಿದೆ.

ಕೋಮುವಾದ ಮತ್ತು ಇತರ ಛಿದ್ರಕಾರಿ ಶಕ್ತಿಗಳ ವಿರುದ್ಧ ತಮ್ಮ ಆಂದೋಲನವನ್ನು ತೀವ್ರ ರೀತಿಯಲ್ಲಿ ಮುಂದುವರಿಸಬೇಕು ಎಂದು ಎಲ್ಲಾ ಎಐಕೆಎಸ್ ಘಟಕಗಳಿಗೆ ಹಾಗೂ ರೈತರಿಗೆ ಸಿ.ಕೆ.ಪಿ. ಕರೆ ನೀಡಿದೆ.

ಬೀಡಿ ಕಾರ್ಮಿಕರ ಸಮ್ಮೇಳನ

ಪುಟ 1ರಿಂದ

ಸಮಸ್ಯೆಯನ್ನು ಸಿಐಟಿಯು ಗಂಭೀರವಾಗಿ ಪರಿಗಣಿಸಿದೆ. ಸೆಪ್ಟೆಂಬರ್ 9 ರಂದು ಈ ಬಗ್ಗೆ ಗಮನ ಸೆಳೆಯಲು ಭಾರತ್ ಬಂದ್ ಹಮ್ಮಿಕೊಳ್ಳಲಾಗಿದೆ. ಭಾರತ್ ಬಂದ್ ಯಶಸ್ವಿ ಮಾಡುವ ಬಗೆಗಿನ ಕೂಗು ಈ ಬೀಡಿ ಕಾರ್ಮಿಕರ ಸಮ್ಮೇಳನದಿಂದ ಹೊರಬೀಳಬೇಕು ಎಂದರು.

ಭಾರೀ ಸಂಖ್ಯೆಯಲ್ಲಿ ಮಹಿಳೆಯರು ಬೀಡಿಕ್ಷೇತ್ರದಲ್ಲಿ ಇದ್ದರೂ ಎಲ್ಲಾ ದಾಖಲೆಗಳೂ ಗಂಡಸರ ಹೆಸರಿನಲ್ಲಿಯೇ ಇದೆ. ಮಹಿಳೆಯರಿಗೆ ಕಾನೂನುರೀತ್ಯಾ ನೀಡುವ ಹೆರಿಗೆಭತ್ಯೆಯಿಂದ ವಂಚಿಸಲು ಮಧ್ಯವರ್ತಿಗಳು ಇಂತಹ ಕುಟಿಲಕೃತ್ಯ ನಡೆಸುತ್ತಿದ್ದಾರೆ.

ರಾಜ್ಯಸಭೆ ಮಂಗಳವಾರ ಅಂಗೀಕರಿಸಿದ ಬೀಡಿ ಮತ್ತು ಸಿಗಾರ್ ತಿದ್ದುಪಡಿ ಮಸೂದೆ ಬಗ್ಗೆ ಮಾತನಾಡುತ್ತಾ ಅನೇಕ ವರ್ಷಗಳಿಂದ ನಾನು ಮತ್ತು ಕಣ್ಣನ್ ಕೇಂದ್ರ ಸಚಿವ ಸಂಗ್ಮರ ಮೇಲೆ ಬೀಡಿ ಕಾರ್ಮಿಕರ ಪರ

ತ್ತಲೇ ಇದ್ದೇವೆ. ಬೀಡಿ ಕಾಯಿದೆ ಏಕೆ ದೇಶಾದ್ಯಂತ ಜಾರಿಯಾಗಿಲ್ಲ ಎಂದು ಪ್ರಶ್ನಿಸಿದ್ದೇವೆ. ಹೆರಿಗೆಭತ್ಯೆ, ಪಾಸ್‌ಬುಕ್ ಏಕೆ ನೀಡಿಲ್ಲ ಎಂದು ಕೇಳಿದ್ದೇವೆ. ಈಗ ಜಾರಿ ಮಾಡಿರುವ ಮಸೂದೆ ಕೇವಲ ಭರವಸೆಯಾಗಿಯೇ ಉಳಿಯಬಾರದು ಎಂದರು.

ತುಟ್ಟಿಭತ್ಯೆಯನ್ನು ಕಾರ್ಮಿಕರಿಂದ ತಪ್ಪದೇ ವಸೂಲು ಮಾಡುತ್ತಿದ್ದು ಮಾಲೀಕರಿಂದ ವಸೂಲು ಮಾಡಲಾಗುತ್ತಿಲ್ಲ. ಮಂತ್ರಿಗಳನ್ನು ಈ ಬಗ್ಗೆ ಪ್ರಶ್ನಿಸಿದಾಗ ಅವರು ವಸೂಲು ಮಾಡುವ ಬಗ್ಗೆ ಆಶ್ವಾಸನೆ ನೀಡಿದ್ದಾರೆ. ಅದು ಆಶ್ವಾಸನೆಯಾಗಿಯೇ ಉಳಿದಿದೆ ಎಂದರು.

ಆರಂಭದಲ್ಲಿ ಎಸ್.ಕೆ.ಟೈಲ್ಸ್ ಸಭಾಂಗಣದ ಹೊರಗೆ ಕೆಂಬಾವುಟವನ್ನು ಹಾರಿಸಿದ ಸಿಐಟಿಯು ರಾಜ್ಯ ಅಧ್ಯಕ್ಷ ಕಾಂ.ಎಸ್. ಸೂರ್ಯನಾರಾಯಣರಾವ್ ಅವರು ಈ ಕೆಂಬಾವುಟ ಕಾರ್ಮಿಕರ ಇತಿಹಾಸವನ್ನು ಬದಲಾಯಿಸಿದೆ. ಈ ಕೆಂಬಾವುಟವನ್ನು ಕೈಗೆ

ಳಿಗೆ ಬೀಡಿ ಪ್ರತಿನಿಧಿಗಳು ಕೆಂಪುವಂದನೆ ಸಲ್ಲಿಸಿದರು.

ಅಖಿಲ ಭಾರತ ಬೀಡಿ ಕಾರ್ಮಿಕರ ಸಂಘಟನೆಯ ಕಾರ್ಯದರ್ಶಿ ಕಾಂ.ಸಿ.ಕಣ್ಣನ್, ಕಾಂ.ವಿ.ಜೆ.ಕೆ. ನಾಯರ್, ಕಾಂ.ಪಿ.ರಾಮಚಂದ್ರರಾವ್, ಕಾಂ.ಮಹಮ್ಮದ್ ದಸ್ತಗೀರ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಹೊಸ ಪದಾಧಿಕಾರಿಗಳು

ಅಧ್ಯಕ್ಷರು : ಕಾಂ.ವಿ.ಜೆ.ಕೆ. ನಾಯರ್
ಉಪಾಧ್ಯಕ್ಷರುಗಳು : ಕಾಂ.ಕೆ.ಮೂಸಬ್ಬ
ಕಾಂ. ಮಹಮ್ಮದ್ ದಸ್ತಗೀರ್
ಕಾಂ.ಪದ್ಮಾವತಿ
ಪ್ರಧಾನ ಕಾರ್ಯದರ್ಶಿ: ಕಾಂ.ಕೆ.ಶಂಕರ್
ಕಾರ್ಯದರ್ಶಿಗಳು : ಕಾಂ.ನಿತ್ಯಾನಂದಸ್ವಾಮಿ
ಕಾಂ.ಬಾಲಕೃಷ್ಣ ಶೆಟ್ಟಿ
ಕಾಂ.ಎಂ.ಎಚ್.ಮುಲ್ಲಾ
ಖಜಾಂಚಿ : ಕಾಂ.ಸುಕುಮಾರ್(ದ.ಕ.)